
ಲಂಕೇಶ್

ಜುಲೈ 14, 2010 ರೂ. 12/-

ದೇಶಕಾಲ ವಾಗ್ವಾದ ಭಂಜಕರು!





ಒಕ್ಕಲಿಗರ ಮಠ ಬ್ರಾಹ್ಮಣ ಉತ್ತರಾಧಿಕಾರಿ

ಮೈಸೂರು 'ಚಾಣಕ್ಯ' ಫೈನಾನ್ಸ್ ವಂಚನೆ


ಬಿಜೆಪಿ ಗೌಡರ ಗದ್ದಲ!

BBMP ಬೋಗಸ್ ಬಿಲ್ ಮಾಫಿಯಾ

ಬೇಲೆಕೇರಿ ಬಂದರು ವಿಲೇವಾರಿ ನಾಟಕ



ರಮ್ಯಾ ರಹಸ್ಯ ಬಂಗಲೆ



ವಿಷ್ಣುವನ್ನು ಮಾರಾಟಕ್ಕಿಟ್ಟ ಕುಳ


ಪೆಟ್ರೋಲ್ ಬೆಲೆ ಏರಿಕೆಯೆಂಬ ದೇಶದ್ರೋಹ!




ರಾಜ್ಯಸಭಾ ಚುನಾವಣೆಗಳಾದ ಕೂಡಲೇ ಕೇಂದ್ರದ ಯುಪಿಎ ಸರ್ಕಾರ ಪೆಟ್ರೋಲ್, ಡೀಸೆಲ್, ಸೀಮೆಎಣ್ಣೆ ಮತ್ತು ಅಡುಗೆ ಅನಿಲಗಳ ಬೆಲೆಯನ್ನು ಏಕಾಏಕಿ ಏರಿಸಿ ದೇಶದ ಬಡಜನತೆಗೆ ದೊಡ್ಡ ಶಾಕ್ ನೀಡಿದೆ. ಅದರೊಂದಿಗೆ ಇಂಧನ ಬೆಲೆಯ ಮೇಲೆ ಸರ್ಕಾರಕ್ಕಿದ್ದ ನಿಯಂತ್ರಣವನ್ನು ಸಂಪೂರ್ಣವಾಗಿ ಹಿಂತೆಗೆದುಕೊಳ್ಳುವ ತೀರ್ಮಾನವನ್ನು ಪ್ರಕಟಿಸಿದೆ. ಅಂದರೆ ಇನ್ನು ಮುಂದೆ ದೇಶೀಯ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲದ ಬೆಲೆಯ ಏರಿಳಿವುಗಳು ಆಗುತ್ತಿದ್ದಂತೆ ಇಲ್ಲಿಯೂ ಪೆಟ್ರೋಲ್-ಡೀಸೆಲ್ ಬೆಲೆ ಏರಿಳಿವುಗಳಾಗುತ್ತವೆ. ಆದರೆ ಅಂತರರಾಷ್ಟ್ರೀಯ ತೈಲದ ಬೆಲೆಯಲ್ಲಿ ಇಳಿತ ಬಂದರೂ ಭಾರತದಲ್ಲಿ ಮಾತ್ರ ತೈಲದ ಬೆಲೆಯಲ್ಲಿ ಇಳಿತವಿರುವುದಿಲ್ಲ, ಕಚ್ಚಾ ತೈಲದ ಬೆಲೆ ಇಳಿದರೂ ಪೆಟ್ರೋಲ್ ಬೆಲೆ ಏರಿಸಲಿಲ್ಲ ಎಂಬುದಷ್ಟೇ ಜನರಿಗುಳಿಯುವ ಸಮಾಧಾನ!

ಇಂಧನ ಬೆಲೆ ಏರಿಕೆ ಮತ್ತು ಅದರ ಬೆಲೆ ನಿಯಂತ್ರಣವನ್ನು ಸರ್ಕಾರ ಸಂಪೂರ್ಣವಾಗಿ ಮಾರುಕಟ್ಟೆಗೆ ಮುಕ್ತಗೊಳಿಸುವ ನಿರ್ಧಾರ ಬಹಳಷ್ಟು ಹಿಂದಿನದ್ದಾದರೂ ಅದೂ ಸಂಪೂರ್ಣವಾಗಿ ಜಾರಿಗೆ ಬರಲು ಇಷ್ಟು ದಿನಗಳು ತೆಗೆದುಕೊಂಡಿವೆ. ತೈಲ ಬೆಲೆಯನ್ನು ಸರ್ಕಾರ ಕಳೆದೆರಡು ದಶಕಗಳಿಂದ ಕಾಲಕಾಲಕ್ಕೆ ಜಾಸ್ತಿ ಮಾಡುತ್ತಲೇ ಬಂದಿದೆ. ಆದರೆ ಇಂಧನ ಬೆಲೆಯನ್ನು ಸಂಪೂರ್ಣವಾಗಿ ಮಾರುಕಟ್ಟೆ ಶಕ್ತಿಗಳೇ ತೀರ್ಮಾನ ಮಾಡುವಂಥ ನಿರ್ಧಾರವನ್ನು ಘೋಷಿಸಲು ಮಾತ್ರ ಸರಿಯಾದ ರಾಜಕೀಯ ಸಮಯಕ್ಕೆ ಕಾಯುತ್ತಲಿತ್ತು. ಮೂರು ತಿಂಗಳ ಹಿಂದೆಯೇ "ಪೆಟ್ರೋಲ್ ಬೆಲೆಯ ಉದಾರೀಕರಣದ" ಬಗ್ಗೆ "ತಾತ್ವಿಕ" ತೀರ್ಮಾನವನ್ನು ಕೈಗೊಂಡಿದ್ದರೂ ರಾಜ್ಯಸಭೆಯ ಚುನಾವಣೆಯ ಹಿನ್ನೆಲೆಯಲ್ಲಿ ಆ ನಿರ್ಧಾರವನ್ನು ಮುಂದೂಡಿತ್ತು. ಈಗ ಹಾಲಿ ಇರುವ ವ್ಯವಸ್ಥೆಯ ಪ್ರಕಾರ 2012ರ ತನಕ ದೊಡ್ಡ ಮಟ್ಟದಲ್ಲಿ ಇಂಧನ ಬೆಲೆಯನ್ನು ಹೆಚ್ಚಿಸಲು ಸರ್ಕಾರಕ್ಕೆ ಸಾಧ್ಯವಾಗುತ್ತಿರಲಿಲ್ಲ. ಆದರೆ 2012ರಲ್ಲಿ ಈ ಪ್ರಮಾಣದ ಬೆಲೆ ಏರಿಕೆ ಮಾಡಿದರೆ ಅದೇ ವರ್ಷ ನಡೆಯಲಿರುವ ಲೋಕಸಭಾ ಚುನಾವಣೆಯ ಮೇಲೆ ಕೆಟ್ಟ ಪರಿಣಾಮ ಬೀರಬಹುದೆಂಬ ಲೆಕ್ಕಾಚಾರ ಕಾಂಗ್ರೆಸ್ಸಿನದ್ದು. ಅಲ್ಲದೆ ಮುಂದಿನ ಒಂದು ವರ್ಷ ಕಾಲ ಯಾವುದೇ ರಾಜ್ಯ ಅಥವಾ ಕೇಂದ್ರ ಚುನಾವಣೆಗಳಿಲ್ಲ. ಈಗ ಜನವಿರೋಧಿಯಾದ ಎಲ್ಲಾ ನೀತಿಗಳನ್ನು ಜಾರಿಗೊಳಿಸಿಬಿಟ್ಟರೆ ಎರಡು ವರ್ಷಗಳಲ್ಲಿ ಜನ ಅದಕ್ಕೆ ಹೊಂದಿಕೊಂಡು ಬಿಟ್ಟಿರುತ್ತಾರೆ ಮತ್ತು ಚುನಾವಣೆಯ ಮೇಲೆ ಅದು ಪ್ರಭಾವ ಬೀರುವುದಿಲ್ಲ ಎಂಬ ಲೆಕ್ಕಾಚಾರದ ಮೇಲೆಯೇ ಈಗ ಸರ್ಕಾರ ಇಂಧನದ ಬೆಲೆ ಏರಿಕೆಯ ಜೊತೆಜೊತೆಗೆ ಬೆಲೆಯನ್ನು ಮಾರುಕಟ್ಟೆ ನಿಯಂತ್ರಣಕ್ಕೊಳಪಡಿಸುವ ನಿರ್ಧಾರವನ್ನು ಕೈಗೊಂಡಿದೆ! ಹೀಗಾಗಿ ಆಳುವ ಸರ್ಕಾರ ಈವರೆಗೆ ಬೆಲೆ ಏರಿಸದೇ ಇದ್ದದ್ದಕ್ಕೆ ಯಾವ ಘನಂದಾರಿ ಜನಪರ ಕಾರಣವೂ ಇರಲಿಲ್ಲ.

ಈ ಬೆಲೆ ಏರಿಕೆಯ ವಿರುದ್ಧ ಬಿಜೆಪಿ ಮತ್ತು ಎಡಪಕ್ಷಗಳೆಲ್ಲಾ ಒಟ್ಟು ಸೇರಿ ಪ್ರತಿಭಟನೆ ನಡೆಸಲು ತೀರ್ಮಾನಿಸಿವೆ. ಜುಲೈ 5ರಂದು "ಭಾರತ್ ಬಂದ್"ಗೂ ಕರೆ ನೀಡುತ್ತಿವೆ. ಈ ಪ್ರತಿಭಟನೆಗಳಿಗೆ "ಮಣಿದು" ಸರ್ಕಾರ ನಾಕಾಣೆ ಬೆಲೆ ಇಳಿಸಲೂಬಹುದು. ಆದರೆ ದೊಡ್ಡ ಮಟ್ಟದ ಬೆಲೆ ಇಳಿಕೆ ಆಗುವುದಿಲ್ಲ ಹಾಗೂ ಇಂಥಾ ಏರಿಕೆಯನ್ನು ಹೆಚ್ಚಾಗಿಸುತ್ತಲೇ ಹೋಗುವ "ಮುಕ್ತಬೆಲೆ ನೀತಿ"ಯನ್ನು ಸರ್ಕಾರ ಹಿಂತೆಗೆದುಕೊಳ್ಳುವುದೂ ಇಲ್ಲ.





ವಾಸ್ತವವೆಂದರೆ ವಿರೋಧ ಪಕ್ಷಗಳು, ಎಡಪಕ್ಷಗಳನ್ನೂ ಒಳಗೊಂಡಂತೆ, ಬೆಲೆ ಏರಿಕೆಯ ಬಗ್ಗೆ ಮಾಡುತ್ತಿರುವಷ್ಟು ಸದ್ದನ್ನು "ಮುಕ್ತ ಬೆಲೆ" ನೀತಿಯ ಬಗ್ಗೆ ಮಾಡುತ್ತಿಲ್ಲ. ಅದಕ್ಕೆ ಬಲವಾದ ಕಾರಣವೂ ಇದೆ. ಇಂಧನಕ್ಕೆ ಸರ್ಕಾರ ನೀಡುತ್ತಿರುವ ಸಬ್ಸಿಡಿಯನ್ನು ಹಿಂತೆಗೆದುಕೊಂಡು ಕ್ರಮೇಣ ಅದನ್ನು ಮಾರುಕಟ್ಟೆಗೆ ಸಮನಾದ ಬೆಲೆಗೆ ಏರಿಸಿ ಸರ್ಕಾರ ಬೆಲೆ ನಿಯಂತ್ರಣ ಅಧಿಕಾರವನ್ನು ಮಾರುಕಟ್ಟೆ ಶಕ್ತಿಗಳಿಗೆ ಬಿಟ್ಟುಕೊಡಬೇಕೆಂಬ ನೀತಿ ಇಂದು ನಿನ್ನೆಯದಲ್ಲ. ಇಂಧನ ಬೆಲೆಯನ್ನು ಸರ್ಕಾರಿ ನಿಯಂತ್ರಣದಿಂದ "ಮುಕ್ತ"ಗೊಳಿಸಬೇಕೆಂಬ ನಿರ್ಧಾರವನ್ನು ತೆಗೆದುಕೊಂಡಿದ್ದು 1997ರಲ್ಲಿ. ಆಗ ಕೇಂದ್ರದಲ್ಲಿ ಅಧಿಕಾರದಲ್ಲಿ ಇದ್ದದ್ದು ಯುನೈಟೆಡ್ ಫ್ರಂಟ್ ಸರ್ಕಾರ. ಆ ಸರ್ಕಾರದ ಪ್ರಧಾನಿಯಾಗಿದ್ದದ್ದು ನಮ್ಮ ಮಣ್ಣಿನ ಮಗ ಜೆಡಿಎಸ್‌ನ ಏಕೈಕ ಅಧ್ಯಕ್ಷ ದೇವೇಗೌಡರು. ಆ ಸರ್ಕಾರಕ್ಕೆ ಸಿಪಿಎಂ ಪಕ್ಷ ಹೊರಗಿನಿಂದ ಬೆಂಬಲ ಕೊಡುತ್ತಿದ್ದರೆ ಸಿಪಿಐ ಪಕ್ಷ ಸರ್ಕಾರದ ಭಾಗವೇ ಆಗಿತ್ತು. ಆದರೆ ಕಾಂಗ್ರೆಸ್ ಪಕ್ಷದ ಚತಾವಣೆಯಿಂದಾಗಿ ಆ ಸರ್ಕಾರ ಕುಸಿದು ಬಿತ್ತು. ನಂತರದಲ್ಲಿ ಈ ಬಗ್ಗೆ ಖಚಿತ ನಿರ್ಧಾರ ತೆಗೆದುಕೊಂಡಿದ್ದು 2002ರಲ್ಲಿ ಬಿಜೆಪಿ ಪಕ್ಷದ ಎನ್‌ಡಿಎ ಸರ್ಕಾರ. ಆದರೆ ಇತರ ಪಕ್ಷಗಳ ಪ್ರತಿರೋಧದಿಂದಾಗಿ ಅದು ಜಾರಿಗೆ ಬರಲಿಲ್ಲ.

ಹೀಗೆ ಇಂಧನ ಬೆಲೆ ನಿಗದಿಯನ್ನು " ಮುಕ್ತ ಮಾರುಕಟ್ಟೆ"ಗೆ ಬಿಟ್ಟುಕೊಡಬೇಕೆಂಬ ನಿರ್ಧಾರದಲ್ಲಿ ನಮ್ಮನ್ನಾಳುತ್ತಿರುವ ಎಲ್ಲಾ ಪಕ್ಷಗಳದ್ದು ಸಮ್ಮತಿಯಿದೆ. ಏಕೆಂದರೆ ಬೆಲೆಯನ್ನು ಸರ್ಕಾರ ನಿಯಂತ್ರಣ ಮಾಡುತ್ತಿದ್ದರಿಂದ ಖಾಸಗಿ ಪೆಟ್ರೋಲ್, ಡೀಸೆಲ್ ಉತ್ಪಾದನೆ ಮತ್ತು ವಿತರಣೆಯ ದಂಧೆಯಲ್ಲಿರುವ ಶೆಲ್, ರಿಲಯನ್ಸ್, ಎಸ್ಸಾರ್‌ನಂಥ ಬೃಹತ್ ಮಾರುಕಟ್ಟೆ ಶಕ್ತಿಗಳ ಲಾಭಕ್ಕೆ ತೊಡಕಾಗುತ್ತಿತ್ತು. ಉದಾಹರಣೆಗೆ ಪೆಟ್ರೋಲ್ ಚಿಲ್ಲರೆ ವಿತರಣೆಯ ಖಾಸಗೀಕರಣವಾದ ನಂತರ ರಿಲಾಯನ್ಸ್ ಕಂಪನಿಯೂ ಸಹ ದೇಶಾದ್ಯಂತ ತನ್ನದೇ ಆದ ಬಂಕ್‌ಗಳನ್ನು ಪ್ರಾರಂಭಿಸಿತ್ತು. ಆದರೆ ಸಾರ್ವಜನಿಕ ಸಂಸ್ಥೆಗಳಾದ ಹೆಚ್‌ಪಿ, ಇಂಡಿಯನ್ ಆಯಿಲ್ ಇನ್ನಿತರ ಪೆಟ್ರೋಲ್ ಬಂಕ್‌ಗಳಲ್ಲಿ ಸಿಗುತ್ತಿದ್ದ ಪೆಟ್ರೋಲ್‌ಗಿಂತ ರಿಲಾಯನ್ಸ್ ಬಂಕ್‌ಗಳಲ್ಲಿ ಸಿಗುತ್ತಿದ್ದ ಪೆಟ್ರೋಲ್ ದರ ತುಟ್ಟಿಯಿರುತ್ತಿತ್ತು. ಅದಕ್ಕೆ ಕಾರಣ ಸಾರ್ವಜನಿಕ ಸಂಸ್ಥೆಗಳ ಬಂಕ್‌ಗಳಲ್ಲಿ ಮಾರಲಾಗುತ್ತಿದ್ದ ಪೆಟ್ರೋಲ್ ದರವನ್ನು ಸಾರ್ವಜನಿಕ ಹಿತಾಸಕ್ತಿಯಿಂದ ಉತ್ಪಾದನಾ ವೆಚ್ಚಕ್ಕಿಂತ ಕಡಿಮೆ ದರಕ್ಕೆ ಮಾರಲಾಗುತ್ತಿತ್ತು. ಇದರಿಂದ ಪೆಟ್ರೋಲ್ ಮಾರಾಟ ಕಂಪನಿಗೆ ಆಗುತ್ತಿದ್ದ ನಷ್ಟವನ್ನು ಸರ್ಕಾರ ಬಜೆಟ್ ಮೂಲಕ ತುಂಬಿಕೊಡುತ್ತಿತ್ತು. ಇದು ಯಾವುದೇ ಕಲ್ಯಾಣ ರಾಜ್ಯದ ಕರ್ತವ್ಯ.

ಆದರೆ ಯಾವಾಗ 1991ರ ಜಾಗತೀಕರಣ ಮತ್ತು ಉದಾರೀಕರಣ ನೀತಿಗಳ ಭಾಗವಾಗಿ ಖಾಸಗಿ ಕಂಪನಿಗಳು ಇಂಧನ ಮಾರಾಟದ ದಂಧೆಗೆ ಇಳಿದವೋ ಆಗಿನಿಂದ ಆ ಕಂಪನಿಗಳು ಸರ್ಕಾರ ಇಂಧನಕ್ಕೆ ಕೊಡುತ್ತಿರುವ ಸಬ್ಸಿಡಿಯನ್ನು ಹಿಂತೆಗೆದುಕೊಳ್ಳಬೇಕೆಂದೂ, ಬೆಲೆಯನ್ನು ಮಾರುಕಟ್ಟೆಯೇ ನಿಯಂತ್ರಿಸಲು ಬಿಟ್ಟುಬಿಡಬೇಕೆಂದೂ ಒತ್ತಾಯ ಹೇರಲಾರಂಭಿಸಿದವು. ಆಗ ನೇಮಕವಾದದ್ದೇ ಕೇತನ್ ಪಾರೀಕ್ ಸಮಿತಿ. ಈ ಸಮಿತಿಯು ಈ ವರ್ಷದ ಆರಂಭದಲ್ಲೇ ವರದಿ ಕೊಟ್ಟು ಇಂಧನ ಸಬ್ಸಿಡಿಯ ಹೊರೆಯನ್ನು ಸರ್ಕಾರವಾಗಲೀ, ಸಾರ್ವಜನಿಕ ಇಂಧನ ಕಂಪನಿಗಳಾಗಲೀ ಹೊರಲು ಸಾಧ್ಯವಿಲ್ಲವೆಂದೂ ಸರ್ಕಾರ ಪೆಟ್ರೋಲ್, ಡೀಸೆಲ್, ಸೀಮೆಎಣ್ಣೆ ಮತ್ತು ಅಡುಗೆ ಅನಿಲಗಳಿಗೆ ಕೊಡುತ್ತಿರುವ ಎಲ್ಲಾ ಸಬ್ಸಿಡಿಯನ್ನೂ ವಾಪಸ್ ತೆಗೆದುಕೊಳ್ಳಬೇಕೆಂದೂ, ಬೆಲೆ ನಿಗದಿಯ ಪರಮಾಧಿಕಾರವನ್ನು ಮಾರುಕಟ್ಟೆಗೆ ಬಿಟ್ಟುಕೊಡಬೇಕೆಂದೂ ಶಿಫಾರಸ್ಸು ಮಾಡಿತು. ಬಿಜೆಪಿಯ ಆರ್ಥಿಕ ವ್ಯವಹಾರಗಳ ಸೆಲ್ ಸಹ ಪಾರೀಕ್ ವರದಿಯನ್ನು ಜಾರಿಗೊಳಿಸಬೇಕೆಂದು ಆಗ್ರಹಪಡಿಸಿತ್ತು!

ಇದಲ್ಲದೆ ಬೆಲೆ ಏರಿಕೆಯ ಬಗ್ಗೆ ಸರ್ಕಾರ ಸಾಮಾನ್ಯವಾಗಿ ನೀಡುವ ಮತ್ತೊಂದು ಸಮಜಾಯಿಷಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಏರುತ್ತಿರುವ ಕಚ್ಚಾ ತೈಲ ಬೆಲೆಯ ಏರಿಕೆ. ನಮಗೆ ಅಗತ್ಯವಿರುವ ಶೇ. 70ರಷ್ಟು ತೈಲವನ್ನು ನಾವು ಹೊರದೇಶಗಳಿಂದ ಆಮದು ಮಡಿಕೊಳ್ಳುವುದರಿಂದ ಅದರಲ್ಲಿ ಆಗುವ ಏರುಪೇರುಗಳು ಇಂಧನದ ಬೆಲೆಯ ಮೇಲೆ ಪ್ರತಿಫಲಿಸಬೇಕಾದದ್ದು ತಾರ್ಕಿಕವಾಗಿ ಸರಿಯಾದದ್ದೇ!

ಆದರೆ ವಾಸ್ತವ ಅಂಶಗಳನ್ನು ನೋಡಿದರೆ ಈಗ ಸರ್ಕಾರ ಮಾಡುತ್ತಿರುವ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಗಳ ಪ್ರಮಾಣಕ್ಕೂ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಏರುತ್ತಿರುವ ಕಚ್ಚಾತೈಲದ ಬೆಲೆಗೂ ಏನೇನೂ ಸಂಬಂಧವಿಲ್ಲ. ಕಚ್ಚಾತೈಲದ ಬೆಲೆ ಅಂತಾರಾಷ್ಟ್ರಿಯ ಮಾರಕಟ್ಟೆಯಲ್ಲಿ ಬ್ಯಾರೆಲ್‌ಗೆ 28 ಡಾಲರ್ ಇದ್ದದ್ದು ಕ್ರಮೇಣ 2008ರ ಆಗಸ್ಟ್‌ಗೆ 55 ಡಾಲರಿಗೂ ಏರಿ 2009ರಲ್ಲಿ ಒಮ್ಮೆ ಬ್ಯಾರೆಲ್ಲಿಗೆ 120 ಡಾಲರ್ ಆಗಿತ್ತು. ಆದರೆ ಮತ್ತೆ ಅದು ಈಗ ಬ್ಯಾರೆಲ್ಲಿಗೆ 50-60 ಡಾಲರಿಗೆ ಬಂದು ಕೂತಿದೆ. ಇದು ನಿಜ. ಆದರೆ ಇದು ಅಮೆರಿಕ ನೇತೃತ್ವದ ಏಕಸ್ವಾಮ್ಯದಲ್ಲಿರುವ ತೈಲ ಕಂಪನಿಗಳ ಕಾರ್ಟೆಲ್‌ಗಳು ವಿಧಿಸುತ್ತಿರುವ ದರ. ಆದರೆ ಇದೇ ಸಮಯದಲ್ಲಿ ಇರಾನ್ ಮತ್ತು ವೆನೆಜ್ಯುಎಲದಂತ ದೇಶಗಳು ಅತ್ಯಂತ ಕಡಿಮೆ ದರದಲ್ಲಿ ತೈಲ ಪೂರೈಸಲು ಸಿದ್ಧವಿದ್ದವು. ಆದರೆ ನಮ್ಮ ವಿದೇಶಾಂಗ ನೀತಿಯನ್ನು ನಿಯಂತ್ರಿಸುತ್ತಿರುವ ಅಮೆರಿಕದ ಸ್ನೇಹವೆಂಬ ಕತ್ತಿ ನಮ್ಮ ದೇಶದ ಆರ್ಥಿಕ ಪ್ರಗತಿಯ ಆಯ್ಕೆಯ ಆಸಕ್ತಿಯನ್ನೂ ನಿಯಂತ್ರಿಸುತ್ತದೆ. ಆದ್ದರಿಂದಲೇ ಅಮೆರಿಕದ ಸ್ನೇಹವೆಂಬ ಧೃತರಾಷ್ಟ್ರ ಆಲಿಂಗನವೇ ಒಂದರ್ಥದಲ್ಲಿ ಇಂದಿನ ಬೆಲೆ ಏರಿಕೆಗೂ ಕಾರಣ. ಅದು ಒಂದು ಕಡೆ ಇರಲಿ. ಅಂತಾರಾಷ್ಟ್ರೀಯ ಮಾರುಕಟೆಯಲ್ಲಿ ಕಚ್ಚಾತೈಲದ ದರ ಇಷ್ಟು ಏರಿದಾಗಲೂ ಪೆಟ್ರೋಲ್ ಬೆಲೆ ಇಷ್ಟು ಏರಬೇಕೆ ಎಂಬುದು ಮತ್ತೊಂದು ಅತಿಮುಖ್ಯ ವಿಚಾರ.

ಕಚ್ಚಾತೈಲದ ಬೆಲೆ ಬ್ಯಾರೆಲ್‌ಗೆ 55 ಡಾಲರ್ ಆಗಿದ್ದಾಗಲೂ ಒಂದು ಲೀಟರ್ ಸಂಸ್ಕರಿತ ಪೆಟ್ರೋಲ್‌ಗೆ ತಗುಲುತ್ತಿದ್ದ ಮೂಲಬೆಲೆ ಲೀಟರಿಗೆ 17.51ರೂ. ಮಾತ್ರ! ಹಾಗಿದ್ದಲ್ಲಿ ಅದು ಲೀಟರ್‌ಗೆ 51 ರೂಪಾಯಿ ಆಗುತ್ತಿದ್ದದ್ದು ಹೇಗೆ?

ಅದರ ಲೆಕ್ಕಾಚಾರ ಹೀಗಿದೆ: 17.51 ರೂ. ಮೂಲಬೆಲೆ ತಗುಲುವ ಪ್ರತಿ ಲೀಟರಿಗೆ ಕೇಂದ್ರ ಸರ್ಕಾರ 14.74 ರೂ. ಎಕ್ಸೈಸ್ ಶುಲ್ಕವನ್ನು ವಿಧಿಸುತ್ತದೆ. ಅದರ ಮೇಲೆ 1.49 ರೂ. ನಷ್ಟು ಕಸ್ಟಂ ಡ್ಯೂಟಿ ಬೀಳುತ್ತದೆ. ಅದರ ಮೇಲೆ ರಾಜ್ಯ ಸರ್ಕಾರಗಳು 6.75 ರೂ.ಗಳಷ್ಟು ಮಾರಾಟ ತೆರಿಗೆ ಹಾಕುತ್ತವೆ. ಅದರ ಜೊತೆಗೆ ಕರ್ನಾಟಕ ಸರ್ಕಾರ ಪ್ರತಿ ಲೀಟರಿಗೆ 10 ರೂ. ರಸ್ತೆ ಸೆಸ್ ವಿಧಿಸುತ್ತದೆ. ಅಂದರೆ ಪೆಟ್ರೋಲ್‌ಗೆ ಇಂದು ನಾವು ತೆರುತ್ತಿರುವ ದರದಲ್ಲಿ 17.51 ರೂ. ಮಾತ್ರ ಅದರ ಮೂಲಬೆಲೆ. ಇನ್ನು 32.50 ರೂಪಾಯಿ ನಾವು ಸರ್ಕಾರಕ್ಕೆ ಕಟ್ಟುತ್ತಿರುವ ತೆರಿಗೆಗಳೇ! ಅದೇ ರೀತಿ ಡೀಸೆಲ್‌ನ ಲೆಕ್ಕಾಚಾರ ಸಹಾ. ಪ್ರತಿ ಲೀಟರ್ ಡೀಸೆಲ್‌ಗೆ 18.53 ರೂ. ಮೂಲ ಬೆಲೆಯಾದರೆ ಉಳಿದ 18 ರೂಪಾಯಿಗಳು ಸರ್ಕಾರಕ್ಕೆ ಕಟ್ಟುವ ತೆರಿಗೆಯೇ ಆಗಿರುತ್ತದೆ. ಈ ಏರಿದ ಹಣದಲ್ಲೇ ಸರ್ಕಾರ 5,800 ಕೋಟಿಯಷ್ಟು ಅಧಿಕ ಆದಾಯ ಮಾಡಿಕೊಳ್ಳುತ್ತದೆ ಹಾಗೂ ನಮ್ಮ ಬಜೆಟ್ಟಿನಲ್ಲಿ ಪೆಟ್ರೋಲ್, ಆಯಿಲ್ ಮತ್ತು ಲ್ಯೂಬ್ರಿಕೆಂಟ್‌ಗಳ ಮೇಲೆ ಹಾಕುತ್ತಿರುವ ತೆರಿಗೆಗಳಿಂದ ಸರ್ಕಾರಕ್ಕೆ ಬರುತ್ತಿರುವ ಆದಾಯ 40,180 ಕೋಟಿ ರೂಪಾಯಿಗಳಷ್ಟು. ಆದ್ದರಿಂದಲೇ ಸರ್ಕಾರ ಈ ಚಿನ್ನದ ಮೊಟ್ಟೆಯಿಡುವ ಕೋಳಿಯನ್ನು ಸುಲಿಯುತ್ತಿದೆ. ಅಂದರೆ ಪರೋಕ್ಷವಾಗಿ ಜನರನ್ನೇ ಸುಲಿಯುತ್ತಿದೆ ಎಂದರ್ಥವಲ್ಲವೇ?

ಪ್ರತಿ ವರ್ಷ ನಮ್ಮ ಬೊಕ್ಕಸಕ್ಕೆ ಶ್ರೀಮಂತ ಉದ್ಯಮಿಗಳಿಂದ ಬರಬೇಕಿದ್ದ 1,75,000 ಕೋಟಿ ರೂಪಾಯಿಗಳಷ್ಟು ಹಣವನ್ನು ವಿವಿಧ ಬಗೆಯ ತೆರಿಗೆಯನ್ನು ಮಾಫಿ ಮಾಡುವುದರಿಂದ ಸರ್ಕಾರ ಕಳೆದುಕೊಳ್ಳುತ್ತಿದೆ. ಅಷ್ಟು ತೆರಿಗೆ ಹಣ ಮೊಬಿಲೈಸ್ ಮಾಡುವುದಾದರೆ ಪ್ರತಿ ಲೀಟರ್ ಪೆಟ್ರೋಲ್ ಮೇಲೆ ಹಾಕುತ್ತಿರುವ 32 ರೂಪಾಯಿ ತೆರಿಗೆ ಕಡಿತ ಮಾಡಬಹುದು. ಆಗ ಲೀಟರ್ ಪೆಟ್ರೋಲ್ ಕೇವಲ 18 ರೂಪಾಯಿಗೆ ದಕ್ಕಲು ಸಾಧ್ಯ. ಅದೇ ರೀತಿ ಡೀಸೆಲ್ ಸಹ ಲೀಟರಿಗೆ 10 ರೂಪಾಯಿಗೆ ದೊರಕುವಂತೆ ಮಾಡಬಹುದು.

ಅಂದರೆ ಮಾರ್ಗವಿದೆ, ಮನಸ್ಸಿಲ್ಲ. ಏಕೆಂದರೆ ಇಂದಿನ ರಾಜಕಾರಣವನ್ನು ಖಾಸಗೀಕರಿಸಲಾಗಿದೆ. ಜಾಗತಿಕ ಮಾರುಕಟ್ಟೆ ಶಕ್ತಿಗಳಿಗೆ ಮಾರಿಕೊಳ್ಳಲಾಗಿದೆ. ಹೀಗಾಗಿಯೇ ಪೆಟ್ರೋಲ್ ದರ ಏರಿಕೆಯೆಂಬುದು ದೇಶದ್ರೋಹವೇ ಅಲ್ಲವೇ? ●

ನೋ ಕಾಮೆಂಟ್ಸ್

"13 ರಾಜ್ಯಗಳಿಂದ 55 ರಾಜ್ಯಸಭಾ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಅಭ್ಯರ್ಥಿಗಳಲ್ಲಿ ಯಾರೂ 'ಆಮ್ ಆದ್ಮಿ'ಗಳಲ್ಲ. ಅವರಲ್ಲಿ ಶೇ.90 ರಷ್ಟು ಜನರು ಕೋಟ್ಯಾಧಿಪತಿಗಳು. ಅವರಲ್ಲಿ 615 ಕೋಟಿ ರೂ.ಗಳ ಒಡೆಯ ವಿಜಯ್ ಮಲ್ಯ ಮೊದಲಿಗ. ಮೂವರು ಮಾತ್ರ ಮಹಿಳಾ ಅಭ್ಯರ್ಥಿಗಳು. ಈಗಾಗಲೇ ಕಳೆದ ಲೋಕಸಭೆಯಲ್ಲಿ ಆಯ್ಕೆಯಾದ 545 ಅಭ್ಯರ್ಥಿಗಳಲ್ಲಿ 300ಕ್ಕೂ ಹೆಚ್ಚು ಜನ ಕೋಟ್ಯಾಧಿಪತಿಗಳೆಂಬುದು ಸಾಬೀತಾಗಿದೆ. ಹೀಗೆ ನಮ್ಮ ಸಂಸತ್ತು ಜನಪ್ರತಿನಿಧಿ ಸಭೆಯಾಗದೆ ಕೋಟ್ಯಾಧೀಶರ ಕ್ಲಬ್ ಆಗಿದೆ."

- ಪತ್ರಿಕಾ ವರದಿ

"ಮನು ಪ್ರಣೀತ ಸಂಪ್ರದಾಯವು ಕರ್ಮ ಸಿದ್ಧಾಂತದ ಮೂಲಕ ಅಸ್ತಿತ್ವದಲ್ಲಿರುವ ಅಸಮಾನತೆಯನ್ನು ಮುಂದುವರೆಸುತ್ತದೆಂಬುದು ಸತ್ಯ. ಆದರೆ ಈಗ ಭಾರತವು ಒಂದು ಪ್ರಜಾತಂತ್ರವಾಗಿದೆ. ಆದರೆ ಇದು ಕೇವಲ ಬೂರ್ಜ್ವಾ ಪ್ರಜಾತಂತ್ರ. ಇಲ್ಲಿ Masses (ಜನತೆ) ಆಯ್ಕೆ ಮಾಡುತ್ತಾರಾದರೂ Classes (ಪ್ರತಿಷ್ಠಿತ ವರ್ಗಗಳು) ಅಜೆಂಡಾಗಳನ್ನು ನಿರ್ಧರಿಸುತ್ತವೆ."

- ಮಣಿಶಂಕರ್ ಅಯ್ಯರ್

"ನಮ್ಮ ಭಾರತ ಎಂಥಾ ಅದ್ಭುತ ದೇಶವೆಂದರೆ ಇಲ್ಲಿ ಅಗತ್ಯವಿರುವ ಕಡೆಗೆ ಆಂಬುಲೆನ್ಸ್ ತಲುಪುವ ಮುಂಚೆ ಆರ್ಡರ್ ಮಾಡಿದ ಪಿಜ್ಜಾ ತಲುಪುತ್ತದೆ. ಇಲ್ಲಿ ಕಾರಿನ ಸಾಲಕ್ಕೆ ಬಡ್ಡಿ ಕೇವಲ ಶೇ.5, ಆದರೆ ಶೈಕ್ಷಣಿಕ ಸಾಲದ ಬಡ್ಡಿ ಶೇ.12., ಅಕ್ಕಿ ದರ ಕೇಜಿಗೆ 30 ರೂ. ಆದರೆ ಸಿಮ್ ಕಾರ್ಡ್ ಬಿಟ್ಟಿ! ಇಲ್ಲಿ ಚಪ್ಪಲಿಗಳನ್ನು ಸಂಪೂರ್ಣ ಹವಾನಿಯಂತ್ರಿತ ಅಂಗಡಿಗಳಲ್ಲಿ ಮಾರಲಾಗುತ್ತದೆ, ಆದರೆ ತಿನ್ನುವ ತರಕಾರಿಯನ್ನು ಮಾತ್ರ ಬೀದಿಯಲ್ಲಿ ಮಾರಲಾಗುತ್ತದೆ."

- ಒಬ್ಬ ಎಸ್‌ಎಂಎಸ್ ಸ್ನೇಹಿತ

"ಶಿಕ್ಷಣವು ಮೂಲಭೂತ ಹಕ್ಕು ಎಂಬುದು ಕಾನೂನಾದ ಮೇಲೆ ಪ್ರತಿಷ್ಠಿತ ಖಾಸಗಿ ಶಾಲೆಗಳೂ ಸಹ ಶೇ.25 ರಷ್ಟು ಸೀಟನ್ನು ಬಡ ಮಕ್ಕಳಿಗೆ ಮೀಸಲಿರಿಸಬೇಕಾಗಿದೆ. ಆದರೆ ಬಡಮಕ್ಕಳ ಜೊತೆ ತಮ್ಮ ಮಕ್ಕಳು ಜೊತೆಗೂಡಿ ಓದುವುದನ್ನು ಸಹಿಸದ ಹಲವು ಶ್ರೀಮಂತರ ಶಾಲೆಗಳು ಮಧ್ಯಾಹ್ನ ಬಡ ಮಕ್ಕಳಿಗೆಂದೇ ಪ್ರತ್ಯೇಕ ತರಗತಿಗಳನ್ನು ನಡೆಸುತ್ತವೆ. ಇದು ಕಾನೂನು ಬಾಹಿರವಾದದ್ದು."

- ಕೃಷ್ಣಕುಮಾರ್, ಶಿಕ್ಷಣ ತಜ್ಞ

"ಈ ಆರ್ಟ್ ಆಫ್ ಲಿವಿಂಗ್ ಸ್ವಾಮೀಜಿಯ ಆಧ್ಯಾತ್ಮ ಎಲ್ಲಾ ಸೋಗು. ಅವರು ತಮ್ಮ ಆಶ್ರಮದ ಮುಂದೆ 'ಇಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ನಡೆಸಲಾಗುವುದು' ಎಂಬ ಬೋರ್ಡ್ ಹಾಕಿಕೊಳ್ಳುವುದು ವಾಸಿ."

- ಮಾವಳ್ಳಿ ಶಂಕರ್, ದಲಿತ ಮುಖಂಡರು

ನಂಬಿದ್ರೆನಂಬಿ ಬಿಟ್ರೆಬಿಡಿ

"ನಿತ್ಯಾನಂದ ಸ್ವಾಮೀಜಿಯಾಗಿದ್ದು ಇವೆಲ್ಲಾ ಮಾಡಬಹುದೇ ಎಂದು ಸರ್ಕಾರಿ ವಕೀಲರು ಕೇಳುತ್ತಾರೆ. ಆದರೆ ಅವರು ಎಂದೂ ಯಾರ ಮುಂದಾಗಲೀ, ಪ್ರವಚನದ ವೇಳೆಯಲ್ಲಾಗಲೀ ತಮ್ಮನ್ನು ತಾವು ಸನ್ಯಾಸಿ ಎಂದು ಹೇಳಿಕೊಂಡಿಯೇ ಇಲ್ಲ."

- ಬಿ.ವಿ. ಆಚಾರ್ಯ, ನಿತ್ಯಾನಂದನ ವಕೀಲ

"ಚಿಕ್ಕಮಕ್ಕಳು ಅಳುತ್ತಿದ್ದರೆ ದೊಡ್ಡವರು ಪೆಪ್ಪರ್‌ಮೆಂಟ್ ಕೊಡ್ತೀವಿ ಅಂತೀವಿ ಅಥವಾ ಚಂದ್ರನನ್ನು ತಂದುಕೊಡ್ತೀವಿ ಅಂತೀವಿ. ಹಾಗೆ ಹೇಳಿದ ಮಾತ್ರಕ್ಕೆ ನಿಜವಾಗಿ ತಂದುಕೊಡಲು ಸಾಧ್ಯವೇ? ಪ್ರಣಾಳಿಕೆಯಲ್ಲಿ ಲೋಕಾಯುಕ್ತರಿಗೆ ಪರಮಾಧಿಕಾರ ಕೊಡುತ್ತೀವಿ ಎಂದು ಹೇಳಿರುವುದೂ ಅದೇ ರೀತಿಯಲ್ಲೇ! ಹೇಳಿದ್ದನ್ನೆಲ್ಲಾ ಮಾಡಲು ಸಾಧ್ಯವಿಲ್ಲ, ಲೋಕಾಯುಕ್ತರಿಗೆ ಪರಮಾಧಿಕಾರ ಏಕೆ ಕೊಡಬೇಕು?"

- ರಾಮಚಂದ್ರಗೌಡ, ಬಿಜೆಪಿ ಸಚಿವ

ಹಾಗೆಯೇ ಒಳ್ಳೆ ಇಸ್ರೇಲಿ ಸರ್ಕಾರ ಅನ್ನೋದು ಇಲ್ಲವೇ ಇಲ್ಲ!

"ಒಳ್ಳೆ ತಾಲಿಬಾನ್, ಕೆಟ್ಟ ತಾಲಿಬಾನ್ ಅಂತ ಇರಲು ಸಾಧ್ಯವಿಲ್ಲ. ಅದೇರೀತಿ ಒಳ್ಳೆ ಲಷ್ಕರ್, ಕೆಟ್ಟ ಲಷ್ಕರ್ ಇರಲು ಸಾಧ್ಯವಿಲ್ಲ. ಹಾಗೆಯೇ ಒಳ್ಳೆ ಹಮಾಸ್ ಕೆಟ್ಟ ಹಮಾಸ್ ಎಂತಲೂ ಇರಲು ಸಾಧ್ಯವಿಲ್ಲ."

- ಮಾರ್ಕ್ ಸೋನೋರ್, ಇಸ್ರೇಲಿ ರಾಯಭಾರಿ

ಗುಂಡು ದೇಶದ ಮೇಲೇ ಹಾರಿದರೂ, ಬಲಿಯಾಗುವವರು ಬಡವರು!

"ಇಂಧನ ಬೆಲೆ ಏರಿಕೆ ಯಾವಾಗಲೂ ಸಮಸ್ಯಾತ್ಮಕವಾದ ವಿಷಯವೇ ಆಗಿದೆ. ಆದರೆ ಯಾವಾಗಲಾದರೊಮ್ಮೆ ಆ ಗುಂಡನ್ನು ಎದುರಿಸಲೇ ಬೇಕಲ್ಲವೇ?"

- ಪ್ರಣವ್ ಮುಖರ್ಜಿ

ಕೃಷ್ಣಲೀಲೆಗೂ, ಸಿಂಗಪುರ ಮಾಯೆಗೂ ಅಂಥಾ ವ್ಯತ್ಯಾಸವೇನಿಲ್ಲ!

"ಈಗ ಕೃಷ್ಣ ಅವತಾರ ತಾಳುವ ಹಿಂದಿದ್ದ ಪರಿಸ್ಥಿತಿಯೇ ಇದೆ. ಕೃಷ್ಣಲೀಲಾ ಪಾರ್ಕಿನಿಂದ ಬೆಂಗಳೂರಿನಲ್ಲಿ ಸಾತ್ವಿಕ ಭಾವನೆ ಹೆಚ್ಚಲಿದೆ. ಒಟ್ಟಿನಲ್ಲಿ ಈ ಪಾರ್ಕು ಬೆಂಗಳೂರನ್ನು ಸಿಂಗಪುರದ ಬದಲಿಗೆ ಬೃಂದಾವನ ಮಾಡಲಿದೆ."

-ಸ್ವಾಮಿ ಸುಗುಣೇಂದ್ರ ತೀರ್ಥರು

ಬಡವರ ಮರೆತ ಮಾಧ್ಯಮಗಳು




ಕಂಡಹಾಗೆ

ಗೌರಿ ಲಂಕೇಶ್
editorlankesh@gmail.com

ಇತ್ತೀಚಿಗೆ ಮಾಧ್ಯಮಗಳ ವಿಸ್ತಾರ ಮತ್ತು ...ಗಳ ಮಿತಿಗಳನ್ನು ಕುರಿತಂತೆ ಎರಡು ವರದಿಗಳು ... ಗಮನ ಸೆಳೆದವು. ಅವುಗಳ ಬಗ್ಗೆ ಸಂಕ್ಷಿಪ್ತವಾಗಿ ...ಳಿ ಮುಖ್ಯ ವಿಚಾರಕ್ಕೆ ಬರಬಹುದು.

...ದಿ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಪ್ರಕಟಗೊಂಡ ...ಮು ವರದಿಯ ಪ್ರಕಾರ ಇವತ್ತಿಗೂ ದೇಶದಾದ್ಯಂತ ...ಪತ್ರಿಕೆಗಳನ್ನು ಓದುವವರು ಕೇವಲ 30% ಜನ. ...ನ್ನ ಆಧುನಿಕ ಮಾಧ್ಯಮವಾದ ಇಂಟರ್‌ನೆಟ್ ...ತೂ ಕೇವಲ 6% ಜನರಿಗೆ ಲಭ್ಯವಾಗಿದೆ. ಆದರೆ ... ಇದೆಯಲ್ಲ, ಅದು ಬರೋಬ್ಬರಿ 60% ...ಠೆಗಳನ್ನು ಪ್ರವೇಶಿಸಿದೆ.

...ಒಂದು ಸಮೀಕ್ಷೆಯ ಪ್ರಕಾರ ನಮ್ಮ ದೇಶದಲ್ಲಿ



...40,00,000 ಟಿವಿ ಸೆಟ್‌ಗಳಿವೆ. ಅಂದರೆ ಪ್ರತಿ ... ಸೆಟ್ ಅನ್ನು ಕನಿಷ್ಠ ಐದು ಜನ ನೋಡುತ್ತಾರೆ ...ಮು ಲೆಕ್ಕ ಹಾಕಿದರೆ ಇವತ್ತು ಟಿವಿ ಚಾನೆಲ್‌ಗಳು ...00,00,000 ಜನರನ್ನು ತಲುಪುತ್ತಿದೆ ಎಂದೇ ...

...ಅದೇ ಸಮೀಕ್ಷೆಯ ಪ್ರಕಾರ ಭಾರತದ ಗ್ರಾಮೀಣ ...ಶಗಳಲ್ಲಿ ಏಳು ಕೋಟಿ ಟಿವಿ ಸೆಟ್‌ಗಳಿದ್ದರೆ, ...ತದ ನಗರಗಳಲ್ಲಿ ಆರು ಕೋಟಿ ನಲವತ್ತು ಲಕ್ಷ ... ಸೆಟ್‌ಗಳಿವೆ. ಅಂದರೆ ನಗರಗಳಲ್ಲಿರುವ ...ಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮೀಣ ಜನರೇ ... ಕಾರ್ಯಕ್ರಮಗಳನ್ನು ವೀಕ್ಷಿಸುತ್ತಾರೆ.

...ನ್ನೊಂದು ಕುತೂಹಲಕಾರಿ ಅಂಶ ...ವುದೆಂದರೆ ಇವತ್ತು ಭಾರತದಲ್ಲಿ ಒಟ್ಟು 500 ...ಲೂ ಹೆಚ್ಚು ಟಿವಿ ಚಾನೆಲ್‌ಗಳಿದ್ದು ಭಾರತೀಯರು ...ಬನ ಕನಿಷ್ಠ ಮೂರು ಗಂಟೆಗಳ ಕಾಲ ಟಿವಿ ...ದೆ ಕೂರುತ್ತಾರೆ. ಈ ಎಲ್ಲ ಅಂಕಿ–ಅಂಶಗಳು ...ತ್ತಿರುವ ಒಂದು ಗಮನಾರ್ಹ ಅಂಶ ...ವುದೆಂದರೆ ಟಿವಿ ವೀಕ್ಷಕರಲ್ಲಿ ಅರ್ಧಕ್ಕಿಂತ ಹೆಚ್ಚು ...ಗ್ರಾಮೀಣ ಪ್ರದೇಶದವರು ಮತ್ತು ನಗರಗಳಲ್ಲಿ ...ಸುವ ಕೆಳವರ್ಗದ ಜನ. ಆದರೆ ಯಾವ ಟಿವಿ ...ಲ್ ಕೂಡ ಈ ಜನರ ಬದುಕನ್ನು, ಆಶಯಗಳನ್ನು, ...ಳನ್ನು ಬಿಂಬಿಸುವ ಕಾರ್ಯಕ್ರಮಗಳನ್ನೇ ಪ್ರಸಾರ ...ಸುವುದಿಲ್ಲ. ಉದಾಹರಣೆಗೆ ಕಳೆದ ಹದಿನೈದು ...ಗಳಲ್ಲಿ ಅತಿ ಹೆಚ್ಚು ಸಂಖ್ಯೆಯಲ್ಲಿ ಆತ್ಮಹತ್ಯೆ ...ಕೊಂಡಿರುವವರು ಈ ದೇಶದ ...ಗಳಲ್ಲಿರುವ ರೈತರು. ಅದೇ ರೈತ ...ಂಬಗಳೂ ಟಿವಿ ವೀಕ್ಷಕರೇ. ಆದರೂ ಇವತ್ತಿನ ಯಾವ ಆರ್ಥಿಕ ನೀತಿಗಳಿಂದಾಗಿ, ಜಾಗತೀಕರಣದ ಪರಿಣಾಮದಿಂದಾಗಿ ರೈತರು ಆತ್ಮಹತ್ಯೆಗೆ ದೂಡಲ್ಪಡುತ್ತಿದ್ದಾರೆ ಎಂಬ ವಿಷಯವನ್ನು ಕುರಿತು ಯಾವ ಟಿವಿ ಚಾನೆಲ್ ಕೂಡ ಕಾರ್ಯಕ್ರಮಗಳನ್ನು ರೂಪಿಸಿದಂತಿಲ್ಲ, ಅದರ ಬಗ್ಗೆ ತನ್ನ ವೀಕ್ಷಕರಲ್ಲಿ ಅರಿವನ್ನು ಮೂಡಿಸಿಲ್ಲ.

ಬದಲಾಗಿ ಹೆಚ್ಚಿನ ಟಿವಿ ಚಾನೆಲ್‌ಗಳು ತನ್ನ ವೀಕ್ಷಕರಿಗೆ ಕಲ್ಪಿತ ಕತೆಗಳನ್ನು ಧಾರಾವಾಹಿಗಳ ಮೂಲಕ ತೋರಿಸುವ, ರಿಯಾಲಿಟಿ ಶೋಗಳಂತಹ ಅಗ್ಗದ ಅಭಿರುಚಿಯ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವ ಮೂಲಕ ಜನರ ದಿಕ್ಕುತಪ್ಪಿಸುತ್ತಿವೆ. 'ಮನರಂಜನೆ'ಯ ಹೆಸರಲ್ಲಿ ಚಾನೆಲ್‌ಗಳು ಹಣ ಗಳಿಸುತ್ತಾ ಜನರನ್ನು ಅಂಧಕಾರದಲ್ಲಿ ಇಡುತ್ತಿವೆ. ಅನಕ್ಷರತೆ, ಭಾಷೆ ತರಹದ ಗಡಿಗಳನ್ನು ಮೀರಿ ಜನರನ್ನು ತಾಕಬಲ್ಲಂತಹ ಟಿವಿ ತರಹದ ಪ್ರಬಲ ಮಾಧ್ಯಮ ಇವತ್ತು ಜನರ ಒಳಿತಿಗಾಗಲ್ಲದೆ ಅವರನ್ನು ಮೂಢನಂಬಿಕೆಯಲ್ಲಿ, ಸಂಪ್ರದಾಯದ ಬಂಧನದಲ್ಲಿ, ವಿಚಾರಹೀನತೆಯಲ್ಲಿ ಬಂಧಿಸುವ ಸಾಧನಗಳಾಗಿವೆ.

ಇಲ್ಲಿ ಇನ್ನೊಂದು ಮುಖ್ಯ ಅಂಶವನ್ನು ಕಾಣಿಸಬೇಕಿದೆ. ಯಾವುದೇ ಚಾನೆಲ್ ಅನ್ನು ಎಷ್ಟು ಜನ ವೀಕ್ಷಿಸುತ್ತಿದ್ದಾರೆಂದು ನೋಡಲು ಟಿಆರ್‌ಪಿ ಎಂಬ ಅಂಕಿ–ಅಂಶವನ್ನೇ ಮಾನದಂಡವಾಗಿಟ್ಟುಕೊಳ್ಳಲಾಗಿದೆ. ಯಾವ ಕಾರ್ಯಕ್ರಮಕ್ಕೆ ಹೆಚ್ಚು ಟಿಆರ್‌ಪಿ ಸಿಗುತ್ತದೋ ಆ ಕಾರ್ಯಕ್ರಮಕ್ಕೆ ಹೆಚ್ಚು ಜಾಹೀರಾತುಗಳು ಹರಿದುಬರುತ್ತವೆ. ವಿಪರ್ಯಾಸದ ಸಂಗತಿ ಯಾವುದೆಂದರೆ ಈ ಟಿಆರ್‌ಪಿ ಅನ್ನು ಅಳೆಯುವುದು ನಗರಗಳಲ್ಲಿ, ಅಂದರೆ ಗ್ರಾಮೀಣ ಪ್ರದೇಶಗಳಲ್ಲಿ ಜನ ಯಾವ ಚಾನೆಲ್, ಯಾವ ಕಾರ್ಯಕ್ರಮ ನೋಡುತ್ತಿದ್ದಾರೆ ಎಂಬುದನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ, ಆದ್ದರಿಂದ ಅಕಸ್ಮಾತ್ ಯಾವುದೋ ಒಂದು ಚಾನೆಲ್ ಗ್ರಾಮೀಣ ಬದುಕನ್ನು ದೃಷ್ಟಿಯಲ್ಲಿಟ್ಟುಕೊಂಡು ಒಂದು ಕಾರ್ಯಕ್ರಮವನ್ನು ರೂಪಿಸಿದರೆ, ಅದು ತುಂಬ ಜನಪ್ರಿಯವೂ ಆದರೆ, ಅದಕ್ಕೆ ಯಾವುದೇ ಟಿಆರ್‌ಪಿ ಸಿಗುವುದಿಲ್ಲ, ಪರಿಣಾಮವಾಗಿ ಆ ಕಾರ್ಯಕ್ರಮಕ್ಕೆ ಆರ್ಥಿಕ ಬೆಂಬಲವಾಗುವ ಜಾಹೀರಾತುಗಳೂ ಸಿಕ್ಕುವುದಿಲ್ಲ, ಆಗ ಅನಿವಾರ್ಯವಾಗಿ ಆ ಕಾರ್ಯಕ್ರಮ ನಿಂತು ಹೋಗುತ್ತದೆ. ಇದು ಒಂದು ದೊಡ್ಡ ದೋಷವೂ ಹೌದು, ದುರಂತವೂ ಹೌದು.

ಪರಿಸ್ಥಿತಿ ಹೀಗಿರುವುದರಿಂದಲೇ ಎಲ್ಲಾ ಟಿವಿ ಚಾನೆಲ್‌ಗಳು ನಗರವಾಸಿಗಳನ್ನೇ ದೃಷ್ಟಿಯಲ್ಲಿಟ್ಟುಕೊಂಡು ತಮ್ಮ ಕಾರ್ಯಕ್ರಮಗಳನ್ನು ರೂಪಿಸುತ್ತವೆ. ಅಂದರೆ ವಾಸ್ತವವಾಗಿ ಗ್ರಾಮೀಣ ಜನರು ಮತ್ತು ಅವರ ಬದುಕು ಟಿವಿ ಚಾನೆಲ್‌ಗಳಿಗೆ ಗೌಣವಾಗುತ್ತವೆ.

ಇನ್ನು ಪತ್ರಿಕೆಗಳ ಪರಿಸ್ಥಿತಿ ಮತ್ತು ದೃಷ್ಟಿಕೋನಗಳೂ ಟಿವಿ ಚಾನೆಲ್‌ಗಳಿಗಿಂತ ಭಿನ್ನವಾಗಿಲ್ಲ. ಸಾಕ್ಷರತೆಯನ್ನೇ ಅವಲಂಬಿಸಿರುವ ಪತ್ರಿಕೆಗಳ ಗುರಿ ಕೂಡ ಮೇಲು ಮತ್ತು ಮಧ್ಯಮ ವರ್ಗಗಳ ಜನರ ಕಡೆಗೇನೆ. ಆದ್ದರಿಂದ ಈ ವರ್ಗಗಳಿಗೆ ಬೇಕಾದಂತಹ ಸುದ್ದಿಗಳನ್ನೇ ಮುಖ್ಯವಾಹಿನಿಯ ಪತ್ರಿಕೆಗಳು ಪ್ರಕಟಿಸುತ್ತವೆ.

ಉದಾಹರಣೆಗೆ ಇತ್ತೀಚೆಗಿನ ತೈಲ ಬೆಲೆ ಏರಿಕೆ. ಈ ಏರಿಕೆಯಿಂದಾಗಿ ಬಡ ಜನತೆಯ ಕಷ್ಟಗಳು ಇನ್ನೂ ಹೆಚ್ಚುತ್ತವೆ. ಆದರೆ ನಮ್ಮ ಬಹಳಷ್ಟು ಇಂಗ್ಲಿಷ್ ದಿನಪತ್ರಿಕೆಗಳಿಗೆ ಅದು ಮುಖ್ಯವೇ ಆಗಲಿಲ್ಲ, ಬದಲಾಗಿ ಇತ್ತೀಚೆಗೆ ಆತ್ಮಹತ್ಯೆ ಮಾಡಿಕೊಂಡ ರೂಪದರ್ಶಿಯ ಸುದ್ದಿಗೆ ತೈಲ ಬೆಲೆ ಏರಿಕೆ ಸುದ್ದಿಗಿಂತ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿದವು.

ಇತ್ತೀಚೆಗೆ ಖ್ಯಾತ ಬರಹಗಾರ ಮತ್ತು ವರದಿಗಾರರಾದ ಪಿ. ಸಾಯಿನಾಥ್ ಅವರು ವಿಶ್ವವಿದ್ಯಾಲಯವೊಂದರಲ್ಲಿ ಮಾತನಾಡುತ್ತಾ "ಕಳೆದ ಹದಿನೈದು ವರ್ಷಗಳಲ್ಲಿ ಮೇಲು ಮತ್ತು ಮಧ್ಯಮ ವರ್ಗಗಳ ಜನರ ಬದುಕು ಉತ್ತಮಗೊಂಡಿದೆ. ಈಗ ಕಾರು, ಕಂಪ್ಯೂಟರ್ ಮತ್ತು ವಿಮಾನ ಟಿಕೆಟ್‌ಗಳೂ ಈ ವರ್ಗಗಳ ಕೈಗಳಿಗೆ ಸುಲಭವಾಗಿ ಎಟುಕುವಂತಾಗಿದೆ. ಅದರಿಂದ ಈ ವರ್ಗಗಳು ಸಹಜವಾಗಿಯೇ ಸಂತಸಗೊಂಡಿವೆ. ಆದರೆ ಇದೇ ಹದಿನೈದು ವರ್ಷಗಳ ಅವಧಿಯಲ್ಲಿ ಅಕ್ಕಿ, ಗೋಧಿ, ವಿದ್ಯುತ್, ಕುಡಿಯುವ ನೀರು ತರಹದ ಅತ್ಯಗತ್ಯ ವಸ್ತುಗಳ ಬೆಲೆಗಳು 300 ರಿಂದ 500 ಪಟ್ಟು ಹೆಚ್ಚಾಗಿವೆ. ಇದರಿಂದ ಈ ದೇಶದ 70% ರಷ್ಟಿರುವ ಬಡವರ ಬದುಕು ಸಂಕಷ್ಟದಲ್ಲಿ ಸಿಲುಕಿಕೊಂಡಿದೆ. ಆದರೆ ನಮ್ಮ ಮುಖ್ಯವಾಹಿನಿಯ ಪತ್ರಿಕೆಗಳು ಈ ವಿಷಯಗಳತ್ತ ತನ್ನ ಓದುಗರ ಗಮನವನ್ನು ಹರಿಸುವುದೇ ಇಲ್ಲ, ಈಗ ದೇಶದ 70% ಬಡವರ ಬದುಕಿಗೂ, ತನಗೂ ಸಂಬಂಧವೇ ಇಲ್ಲವೆಂಬ



ಧೋರಣೆ ಪತ್ರಿಕಾ ಮಾಧ್ಯಮಗಳದ್ದಾಗಿದೆ" ಎಂದು ತಮ್ಮ ಆತಂಕವನ್ನು ತೋಡಿಕೊಂಡಿದ್ದಾರೆ.

ಪ್ರಜಾಪ್ರಭುತ್ವದ ನಾಲ್ಕನೇ ಸ್ತಂಭವಾದ ಮಾಧ್ಯಮಗಳೇ ಗ್ರಾಮೀಣ, ಬಡ ಮತ್ತು ದನಿ ಇಲ್ಲದ ಜನರನ್ನು ಹೀಗೆ ನಿರ್ಲಕ್ಷಿಸಿದರೆ ಇಲ್ಲಿನ ಪ್ರಜಾತಂತ್ರಕ್ಕೆ ಅರ್ಥವೇ ಇಲ್ಲದಂತಾಗುತ್ತದೆ.

ಅಂದಹಾಗೆ ಇದನ್ನು ಬರೆಯುತ್ತಿರುವುದು (ಜುಲೈ 1) ಪತ್ರಿಕಾ ದಿನಾಚರಣೆಯಂದು. ಈ ದಿನದ ಪ್ರಯುಕ್ತ ಮಿತ್ರ ಸಂವರ್ತ ಸಾಹಿಲ್ ಒಂದು ಎಸ್‌ಎಂಎಸ್ ಕಳುಹಿಸಿದ್ದಾನೆ. ಅದು ಕಾರ್ಲ್‌ಮಾರ್ಕ್ಸ್ ಅವರ ಹೇಳಿಕೆ. ಅದು ಹೀಗಿದೆ: **"The first freedom of the press consists in it not being a business."**

ಆದರೆ ದುರದೃಷ್ಟವಶಾತ್ ಇವತ್ತು ಪತ್ರಿಕೆ ಮತ್ತು ಟಿವಿ ಚಾನೆಲ್‌ಗಳ ಮಾಲೀಕರಿಗೆಲ್ಲ ಅದು ಒಂದು ಬಿಸಿನೆಸ್ ಆಗಿದೆಯೇ ಹೊರತು ಪ್ರಜಾತಂತ್ರದ ಅತ್ಯಗತ್ಯ ಅಂಗವಾಗಿಯಾಗಲಿ, ಜನರಲ್ಲಿ ಅರಿವು ಮೂಡಿಸುವ ಅಸ್ತ್ರವಾಗಿಯಾಗಲಿ ಉಳಿದಿಲ್ಲ.....


*****

ಕೃಷ್ಣ ಪ್ರಸಾದ್ ಎಂಬ ಪತ್ರಕರ್ತ ಮಿತ್ರ ನಡೆಸುವ ಚುರುಮುರಿ ಎಂಬ ಬ್ಲಾಗ್‌ನಲ್ಲಿ ಇತ್ತೀಚೆಗೆ ನಡೆದಿರುವ ಎರಡು ಸಮೀಕ್ಷೆಗಳನ್ನು ನೋಡಿ ಸಂತೋಷವಾಯಿತು:

ಲೋಕಾಯುಕ್ತ ಸಂತೋಷ್ ಹೆಗಡೆಯವರು ರಾಜೀನಾಮೆ ನೀಡಿದ ನಂತರ ನಡೆದ ಒಂದು ಸಮೀಕ್ಷೆಯಲ್ಲಿ "ಕರ್ನಾಟಕ ಅತಿ ಭ್ರಷ್ಟ ರಾಜ್ಯವಾಗಿದೆಯೇ?" ಎಂಬ ಪ್ರಶ್ನೆಗೆ ಕೇವಲ 27% ಜನ "ಇಲ್ಲ" ಎಂದು ಪ್ರತಿಕ್ರಿಯಿಸಿದರೆ 57% ಜನ "ಹೌದು" ಎಂದೇ ಪ್ರತಿಕ್ರಿಯಿಸಿದ್ದಾರೆ.

ಹಾಗೆಯೇ ಬೇಲೇಕೇರಿ ಬಂದರಿನಿಂದ 8 ಮೆಟ್ರಿಕ್ ಟನ್‌ಗಳಿಗಿಂತಲೂ ಹೆಚ್ಚು ಅದಿರು ಕಳ್ಳತನ ನಡೆದನಂತರ ನಡೆದ ಎರಡನೇ ಸಮೀಕ್ಷೆಯಲ್ಲಿ ಕಳ್ಳರ ಕೂಟದಂತಾಗಿರುವ ಬಿಜೆಪಿ ಸರ್ಕಾರವನ್ನು ಕಿತ್ತೊಗೆದು ರಾಜ್ಯಪಾಲರ ಆಳ್ವಿಕೆಯನ್ನು ಘೋಷಿಸಬೇಕೆ ಎಂಬ ಪ್ರಶ್ನೆಗೆ 41.9% "ಬೇಡ" ಎಂದರೆ 53.7% ಜನ "ಬೇಕು" ಎಂದೇ ಉತ್ತರಿಸಿದ್ದಾರೆ.

ಇಂಟರ್‌ನೆಟ್ ಸೌಲಭ್ಯವನ್ನು ಹೊಂದಿರುವ ಜನ ಮೇಲು ಮತ್ತು ಮಧ್ಯಮ ವರ್ಗದವರೇ ಆಗಿದ್ದು ಅವರಲ್ಲಿ ಬಹಳಷ್ಟು ಜನ ಬಿಜೆಪಿಯ ಬೆಂಬಲಿಗರೇ ಆಗಿರುತ್ತಾರೆ. ಆದ್ದರಿಂದ ಅಂತಹ ಜನರೇ ರಾಜ್ಯ ಬಿಜೆಪಿ ಸರ್ಕಾರದ ವಿರುದ್ಧ ಹೀಗೆ ಪ್ರತಿಕ್ರಿಯಿಸಿರುವುದನ್ನು ನೋಡಿ ನನ್ನಂಥವರಿಗೆ ಸಂತೋಷವಾಗದೇ ಇರುತ್ತದೆಯೇ?!







ಭಾರತೀಯ ಮಹಿಳಾ ಕ್ರೀಡಾ ಜಗತ್ತಿನಲ್ಲಿ ಇದುವರೆಗೂ ಮಿಡಿಯೋಕರ್ ಲೆವೆಲ್‌ನ ಸಾನಿಯಾ ಮಿರ್ಜಾ ಮೆರೆಯುತ್ತಿದ್ದಳು. ಅವಳದ್ದು ಮಾತು ಜಾಸ್ತಿ ಸಾಧನೆ ಕಡಿಮೆ ಎಂಬಂತಿತ್ತು. ಅವಳ ವ್ಯಕ್ತಿತ್ವವೂ ಪೊಳ್ಳಾಗಿತ್ತು. ಆದರೆ ಸೈನಾ ನೆಹ್ವಾಲ್ ಹಾಗಿಲ್ಲ. ಸಾಮರ್ಥ್ಯ ಜೊತೆಗೆ ವಿನಯ ಅವಳಿಗಿದೆ. ಅದಮ್ಯ ಆತ್ಮವಿಶ್ವಾಸ ಅವಳ ಪ್ರತಿ ಮಾತು ಹಾಗೂ ಚಲನೆಯಲ್ಲಿ ಎದ್ದು ಕಾಣುತ್ತಿದೆ.

ಸೈನಾ ಎಂಬ ಚಾಂಪಿಯನ್ ಹುಡುಗಿ

• ಪಾರ್ವತೀಶ

ಈಗಿನ್ನೂ ಇಪ್ಪತ್ತು ವರ್ಷದ ಸೈನಾ ನೆಹ್ವಾಲ್ ಬಗ್ಗೆ ಇಂಡಿಯಾದ ಎಲ್ಲಾ ಮೀಡಿಯಾಗಳೂ ಮಾತನಾಡುತ್ತಿವೆ.

ದೇಶದ ಬ್ಯಾಡ್ಮಿಂಟನ್ ಚಾಂಪಿಯನ್ ಇವಳು. ಈಗ ತಾನೆ 2010 ರ ಇಂಡೋನೇಷಿಯಾ ಸೂಪರ್ ಸೀರಿಸ್ ಟೂರ್ನಿಯಲ್ಲಿ ಗೆದ್ದು ಬಂದಿದ್ದಾಳೆ. ವಿಶ್ವ ಬ್ಯಾಡ್ಮಿಂಟನ್ ರ್‍ಯಾಂಕಿಂಗ್‌ನಲ್ಲಿ ಸೈನಾ ಈಗ ಮೂರನೇ ರ್‍ಯಾಂಕ್‌ನಲ್ಲಿದ್ದಾಳೆ. ಬ್ಯಾಡ್ಮಿಂಟನ್ ಅಥವಾ ಶಟಲ್‌ಕಾಕ್ ಆಟದಲ್ಲಿ ಇಂಟರ್ ನ್ಯಾಷನಲ್ ಸೂಪರ್ ಸೀರಿಸ್‌ಗಳೆಂದರೆ ಅವು ಟೆನ್ನಿಸ್ ಆಟದ ಗ್ರಾಂಡ್ ಸ್ಲಾಂ ಟೂರ್ನಿಗಳಿದ್ದಂತೆ. ಬ್ಯಾಡ್ಮಿಂಟನ್‌ನಲ್ಲಿ ಆಲ್ ಇಂಗ್ಲೆಂಡ್, ಡೆನ್ಮಾರ್ಕ್, ಚೀನಾ, ಕೊರಿಯಾ, ಇಂಡೋನೇಷಿಯಾ ಹಾಗೂ ಸಿಂಗಪೂರ್ ಸೂಪರ್ ಸೀರಿಸ್ ಟೂರ್ನಿಗಳು ಪ್ರತಿ ವರ್ಷ ನಡೆಯುತ್ತವೆ. ಸೈನಾ ಈಗಾಗಲೇ 2008 ಹಾಗೂ 2010 ರ ಇಂಡೋನೇಷಿಯಾ ಸೀರಿಸ್ ಗೆದ್ದಿದ್ದಾಳೆ. 2010 ರಲ್ಲಿ ಸಿಂಗಪೂರ್ ಚಾಂಪಿಯನ್ ಶಿಪ್ ಗೆದ್ದಿದ್ದಾಳೆ. ಇವೆಲ್ಲಾ ಸುಲಭದ ಗೆಲುವುಗಳಲ್ಲ. ಬ್ಯಾಡ್ಮಿಂಟನ್ ಜಗತ್ತಿನ ಮಹಾನ್ ಆಟಗಾರರೆಲ್ಲಾ ದಕ್ಷಿಣ ಪೂರ್ವ ಏಷ್ಯಾದ ದೇಶಗಳಾದ ಮಲೇಶಿಯಾ, ಇಂಡೋನೇಷಿಯಾ, ಸಿಂಗಪೂರ್ ಹಾಗೂ ಚೀನಾ, ಕೊರಿಯಾಗಳಲ್ಲಿ ತುಂಬಿ ತುಳುಕುತ್ತಿದ್ದಾರೆ. ಅಂಥವರ ವಿರುದ್ಧ ಸೆಣಸಿ ಒಂದೊಂದು ಮ್ಯಾಚ್ ಗೆಲ್ಲುವುದೇ ದೊಡ್ಡ ಸಾಧನೆ ಎನಿಸಿಕೊಳ್ಳುವಂತಹ ಸನ್ನಿವೇಶವಿದೆ. ಅಂತಲ್ಲಿ ಈ ನಮ್ಮ ನಾಡಿನ ಹುಡುಗಿ ಸೈನಾ ಅಲ್ಲಿ ಹೋಗಿ ಆಡಿ ಗೆದ್ದು ಚಾಂಪಿಯನ್ ಆಗಿರುವುದು ಅಸಾಮಾನ್ಯ ಸಂಗತಿಯಾಗಿದೆ.

ಎಂಟು ವರ್ಷದವಳಾಗಿದ್ದಾಗ ಬ್ಯಾಡ್ಮಿಂಟನ್ ರ್‍ಯಾಕೆಟ್ ಕೈಲಿಡಿದ ಸೈನಾ ಈ ಹನ್ನೆರಡು ವರ್ಷಗಳನ್ನು ಒಂದು ತಪಸ್ಸಿನಂತೆಯೇ ಬದುಕಿದ್ದಾಳೆ. ಅವಳದೊಂದು ಆಶ್ಚರ್ಯಕರ ಬದುಕು. ಈ ಕತೆ ಸೈನಾಳ ಅಪ್ಪ-ಅಮ್ಮರಿಂದ ಶುರುವಾಗಬೇಕು. ಸೈನಾ ಎಂಬ ಇವತ್ತಿನ ಚಾಂಪಿಯನ್ ಶಿಲ್ಪವನ್ನು ಕಡೆದು, ಕೆತ್ತಿ ರೂಪಿಸಿದವರು ಇವರೇ. ಜೊತೆಗೆ ಪುಲ್ಲೇಲ ಗೋಪಿಚಂದ್ ಎಂಬ ಕುಸುರಿ ಕೆಲಸಗಾರನೂ ಇದ್ದಾನೆ. ಇಂಡಿಯಾ ದೇಶ ಕಂಡ ಅತ್ಯಂತ ಘನತೆಯ intergity ಇರುವ ಕ್ರೀಡಾಪಟು ಈತ. ನ್ಯಾಷನಲ್ ಚಾಂಪಿಯನ್ ಆಗಿದ್ದಾತ. ಪ್ರಕಾಶ್ ಪಡುಕೋಣೆಯ ನಂತರ ಆಲ್ ಇಂಗ್ಲೆಂಡ್ ಚಾಂಪಿಯನ್‌ಶಿಪ್ ಗೆದ್ದಿರುವ ಇನ್ನೊಬ್ಬ ಭಾರತೀಯನೆಂದರೆ ಅದು ಪುಲ್ಲೇಲ ಗೋಪಿಚಂದ್ ಮಾತ್ರ.

ಇದೇ ಗೋಪಿಚಂದ್ ಇಂದು ಸೈನಾಳ ಕೋಚ್.

ಸೈನಾಳ ಅಪ್ಪ ಡಾ. ಹರವೀರ್ ಸಿಂಗ್ ಓರ್ವ ವಿಜ್ಞಾನಿ. ನ್ಯಾಷನಲ್ ಆಯಿಲ್ ಸೀಡ್ಸ್ ಸಂಸ್ಥೆಯಲ್ಲಿ ಸಂಶೋಧಕರಾಗಿ ಕೆಲಸ ಮಾಡುತ್ತಿದ್ದಾರೆ. ಇದು ಹೈದರಾಬಾದ್‌ನಲ್ಲಿದೆ. ತಾಯಿ ಉಷಾ ಗೃಹಿಣಿ. ಸೈನಾಗೆ ಅಂಟಿಕೊಂಡಿರುವ ನೆಹ್ವಾಲ್ ಹೆಸರು ಅಮ್ಮನ ಫ್ಯಾಮಿಲಿಯ ನಂಟಿನದು. ಹರಿಯಾಣದ ಹಿಸಾರ್ ಗ್ರಾಮದವರಾದ ಸೈನಾ ಕುಟುಂಬ ಮೂಲತಃ ಉತ್ತರ ಪ್ರದೇಶದ ಪಶ್ಚಿಮ ಭಾಗದ ಜಾಟ್ ಸಮುದಾಯಕ್ಕೆ ಸೇರಿದವರು. ಈ ಹರವೀರ್ ಸಿಂಗ್ ಹೈದರಾಬಾದ್‌ನಲ್ಲಿ ಕೆಲಸ ಮಾಡುತ್ತಿದ್ದಾಗ ಒಮ್ಮೆ ಎಂಟು ವರ್ಷದ ಪುಟ್ಟ ಮಗಳು ಸೈನಾಳನ್ನು ಹೈದರಾಬಾದಿನ ಲಾಲ್ ಬಹಾದೂರ್ ಸ್ಟೇಡಿಯಂಗೆ ಕರೆದುಕೊಂಡು ಅಲ್ಲಿನ ಕ್ರೀಡಾ ಪ್ರಾಧಿಕಾರದ ಕೋಚ್ ನಾನಿ ಪ್ರಸಾದ್ ಹತ್ತಿರ ಹೋಗುತ್ತಾರೆ. ಕೈಲಿ ತನ್ನಷ್ಟೇ ಉದ್ದದ ರ್‍ಯಾಕೆಟ್ ಹಿಡಿದು ನಿಂತಿದ್ದ ಬಾಲೆ ಸೈನಾಳಿಗೆ ಕೆಲ ಹೊತ್ತು ಆಡಲು ಹೇಳಿದ ಪ್ರಸಾದ್ ಕೊನೆಗೆ ಹೇಳಿದ್ದಿಷ್ಟೆ:

"ಈ ಹುಡುಗಿಗೆ ನಾನೇ ತರಬೇತಿ ಕೊಡುತ್ತೇನೆ ಕಳಿಸಿ"

ಅವತ್ತೇ ಸೈನಾಳ ಬ್ಯಾಡ್ಮಿಂಟನ್ ಆಟದ ದೀರ್ಘ ಹಾಗೂ ಅತ್ಯಂತ ಕಷ್ಟದ ಪ್ರಯಾಣ ಶುರುವಾಯಿತು. ಎಲ್ಲೋ ಅಗೋಚರ ನೆಲೆಯಿಂದ ಹರಿಯಹೊರಟ ಸೈನಾ ಎನ್ನುವ ಝರಿ ವಿಶ್ವ ಬ್ಯಾಡ್ಮಿಂಟನ್ ಕ್ರೀಡೆಯ ಪ್ರಮುಖ ನದಿಯಾಗಿ ಈಗ ರಭಸದಿಂದ ಹರಿಯುತ್ತಿದೆ.

ಅವಳ ಮೊದಲ ಕೆಲ ವರ್ಷಗಳ ತರಬೇತಿಯ ವಿವರಗಳು ನಿಜಕ್ಕೂ ಸಾಮಾನ್ಯರ ವಿಲ್‌ಪವರ್‌ಗೆ ನಿಲುಕದಂತದ್ದು. ಸ್ಟೇಡಿಯಂನಿಂದ 25 ಕಿ.ಮೀ. ದೂರದಲ್ಲಿತ್ತು ಆಗ ಸೈನಾಳ ಮನೆ. ನಿತ್ಯ ಬೆಳಗಿನ ನಾಲ್ಕರ ಜಾವಕ್ಕೆ ಎದ್ದು ಸಿದ್ಧವಾಗಿ 6 ಗಂಟೆಗೆ ಸ್ಟೇಡಿಯಂನಲ್ಲಿರಬೇಕಿತ್ತು ಸೈನಾ. ಆಗ ಅವಳಿಗೆ ಅಪ್ಪನ ಸ್ಕೂಟರ್ರೇ ರಥ. ಅಲ್ಲಿ 8 ಗಂಟೆಯವರೆಗೆ ಪ್ರಾಕ್ಟೀಸ್ ಮಾಡಿ ಅಲ್ಲಿಂದಲೇ ನೇರವಾಗಿ 9 ಗಂಟೆ ವೇಳೆಗೆ ಶಾಲೆಗೆ ಹೋಗಬೇಕಾಗುತ್ತಿತ್ತು. 8 ವರ್ಷದ ಈ ಬಾಲೆ ನಿತ್ಯ ಬೆಳಗ್ಗೆ 4 ಗಂಟೆಗೆ ಏಳುತ್ತಿದ್ದಳೆಂದರೆ!

ಅನೇಕ ಸಾರಿ ನಿದ್ದೆ ಸಾಕಾಗದೆ ನಿತ್ಯದ 50 ಕಿ.ಮೀ.ಗಳ ಸ್ಕೂಟರ್ ಸವಾರಿಯ, up & down ವೇಳೆಯಲ್ಲೇ ಸೈನಾ ನಿದ್ದೆ ಮಾಡಿಬಿಡುತ್ತಿದ್ದಳಂತೆ. ಇದು ಡೇಂಜರ್ ಎನಿಸಿ ಕೊನೆಗೆ ಸೈನಾಳ ತಾಯಿ ಉಷಾ ಕೂಡ ಗಂಡ-ಮಗಳೊಂದಿಗೆ ಸ್ಕೂಟರ್ ಏರಿದರು. ತಂದೆ ಗಾಡಿ ಓಡಿಸುತ್ತಿದ್ದಾಗ



ಕೋಚ್ ಗೋಪಿಚಂದ್ ಜೊತೆ ಸೈನಾ...

ಅಪ್ಪ ಹರಬೀರ್ ಸಿಂಗ್ ಜೊತೆ ಸೈನಾ...





ಪುಟ್ಟ ಸೈನಾ ಆಟದ ಬಳಲಿಕೆಯಿಂದ ಅಮ್ಮನ ತೋಳಿನಲ್ಲೇ, ಸ್ಕೂಟರ್ ಮೇಲೆ ನಿದ್ದೆ ಮಾಡುವ ಸರ್ಕಸ್.

ಅವಳ ಅಪ್ಪ-ಅಮ್ಮ ಮಗಳ ಇಷ್ಟಕ್ಕೆ ಹೆಗಲು ನೀಡಲು ಪಟ್ಟ ಕಷ್ಟ ಅದೆಷ್ಟಿರಬಹುದು ಯೋಚಿಸಿ ನೋಡಿ?

ಇನ್ನೊಂದು ವಿಚಾರ ಏನೆಂದರೆ ಈ ಬ್ಯಾಡ್ಮಿಂಟನ್ ಆಟ ಕ್ರಿಕೆಟೋ ಇಲ್ಲಾ ಟೆನ್ನಿಸ್ ತರದ ಗ್ಲಾಮರ್, ಹಣ ಇದ್ದ ಆಟವಾಗಿರಲಿಲ್ಲ ಆಗ. ಆದರೂ ಮಗಳ ಆಸೆಗೆ ಇವರು ಸ್ಪಂದಿಸಿದ ವಿಧಾನ ಬೆರಗಾಗಿಸುವಂತಿವೆ. ಮುಂದೆ ಸೈನಾ ಆಟ ಕಲಿಯುತ್ತಾ ಹೋದಂತೆ ಅವಳ ತರಬೇತಿ ಬೆಳಗ್ಗೆ-ಸಂಜೆ ಎರಡೂ ಸಮಯಕ್ಕೆ ವಿಸ್ತರಿಸಿತು. ಅವತ್ತಿನ ಅವಳ ಕುಟುಂಬದ ಸಮಸ್ಯೆ ಸಮಯ ಅಥವಾ ಓಡಾಟದ್ದಾಗಿರಲಿಲ್ಲ, ಹಣದ್ದಾಗಿತ್ತು. ಸಾಧಾರಣ ಲೆವೆಲ್‌ನ ಕೆಲಸದಲ್ಲಿದ್ದ ಡಾ. ಹರವೀರ್ ತಮ್ಮ ತಿಂಗಳ ಆದಾಯದ ಅರ್ಧದಷ್ಟನ್ನು ಸೈನಾಳ ತರಬೇತಿಗೆ ಖರ್ಚು ಮಾಡುತ್ತಿದ್ದರು. ರ್‍ಯಾಕೆಟ್‌ಗಳು, ಶೂಸ್, ಪೌಷ್ಠಿಕ ಆಹಾರ, ಶಟಲ್ ಕಾಕ್‌ಗಳೆಂದು ತಿಂಗಳಿಗೆ ಹತ್ತು ಸಾವಿರ ರೂಪಾಯಿಯಷ್ಟು ಖರ್ಚು ಅವಳಿಗಿತ್ತು. ಸೈನಾಳ ಅಪ್ಪನಿಗೆ ತನ್ನ ಮಗಳ ಸಾಮರ್ಥ್ಯದ ಬಗ್ಗೆ ಅದೆಷ್ಟು confidence ಇತ್ತೆಂದರೆ ಜೇಬಿನಲ್ಲಿರುತ್ತಿದ್ದ ಕೊನೆಯ ರೂಪಾಯಿಯನ್ನು ಅವಳಿಗಾಗಿ ಖರ್ಚು ಮಾಡಿದ್ದಾರೆ. ಅವಳ ಖರ್ಚು ಜೋಡಿಸಲು ತನ್ನ ಪ್ರಾವಿಡೆಂಟ್ ಫಂಡ್ etc ದ ಉಳಿತಾಯದ ಹಣವನ್ನೆಲ್ಲಾ ಬಳಿಯ ತಂದು ಸುರಿದರು. ಹೀಗೆ ಬೆಳೆದ ಸೈನಾ ಬೇಗನೆ ನ್ಯಾಷನಲ್ ಜೂನಿಯರ್ ಚಾಂಪಿಯನ್ ಆದಳು. ಅಷ್ಟರಲ್ಲಿ ಇಂಡಿಯಾದ ಮಹಿಳಾ ಬ್ಯಾಡ್ಮಿಂಟನ್ ರಂಗದಲ್ಲಿ ಪೂನಾದ ಅಪರ್ಣಾ ಪೋಪಟ್ ಮತ್ತಿತರರ ಆಟ ಮುಗಿಯುತ್ತಾ ಬಂದಿತ್ತು. ನಮ್ಮ ದೇಶದ ಕ್ರೀಡಾ ಜಗತ್ತು ಎಷ್ಟು ಗಲೀಜಾಗಿದೆಯೆಂದರೆ 2003 ರಲ್ಲಿ ಸೈನಾಳ ತಾಕತ್ತು ಗಮನಿಸಿ ಭಾರತೀಯ ಕ್ರೀಡಾ ಪ್ರಾಧಿಕಾರ ಅವಳಿಗೆ ಧನಸಹಾಯ ಮಾಡಲು ಒಪ್ಪಿಕೊಂಡಿತು.

ಅದರ ಮೊತ್ತ ಎಷ್ಟು ಗೊತ್ತೆ?

ತಿಂಗಳಿಗೆ 300 ರೂಪಾಯಿ!

ಹೇಗಿದೆ ನೋಡಿ ಈ ವಿಪರ್ಯಾಸ. ಆಟದ ತಾಕ[illegible] ಬೆಳೆಸಿಕೊಳ್ಳಬೇಕಾದವರಿಗೆ ತಿಂಗಳಿಗೆ ಮುನ್ನೂರ[illegible] ರೂಪಾಯಿ! ಮತ್ತೊಂದೆಡೆ ಬೊಜ್ಜು ಬೆಳೆಸಿಕೊಂಡು ದೇ[illegible] ವನ್ನೇ ಹರಾಜಿಗಿಡುವ ರಾಜಕಾರಣಿಗಳಿಗೆ, ಅಪ್ರಾಮಾಣಿ[illegible] ಕ್ರೀಡಾ ಅಧಿಕಾರಿಗಳಿಗೆ ಕೋಟ್ಯಂತರ ರೂಪಾಯಿ!!

ಈ ನೀಚರು ಇಂಡಿಯಾ ದೇಶಕ್ಕೆ ಪದಕ ತಂದುಕೊಡು[illegible] ಪೈಕಿಯಾ?

ಅದು ಹಾಳಾಗಲಿ, ಸೈನಾ ಆಟ ಬೆಳೆದಂತೆ ಅವ[illegible] ರ್‍ಯಾಂಕಿಂಗ್ ಬೆಟರ್ ಆಗುತ್ತಿದ್ದಂತೆ ಅವಳಿಗೆ ಕೆಲವ[illegible] ಪ್ರಾಯೋಜಕರೂ ಸಿಕ್ಕರು. ಕ್ರೀಡಾ ಸಲಕರಣೆ ತಯಾರಿ[illegible] ಮಾರುವ ಯೋನೆಕ್ಸ್ ಕಂಪನಿ ಕೊನೆಗೆ ಸೈನಾ ನೆರವಿ[illegible] ಬಂತು. ಆನಂತರ ಮಿತ್ತಲ್ ಚಾಂಪಿಯನ್ ಟ್ರಸ್ಟ್‌ನವರು[illegible] ನೆರವಾದರು. ಸೈನಾ ನಿರಾಳವಾಗಿ ಆಟದತ್ತ ಗಮನ ಹರಿ[illegible] ಇನ್ನು ವೇಗವಾಗಿ ಮೇಲೇರತೊಡಗಿದಳು. 2006 ರ[illegible] ಅವಳ ಕರಿಯರ್‌ನ ಮೊದಲ ಮಹತ್ವದ break through ಬಂತು. ಫಿಲಿಪೈನ್ಸ್ ಓಪನ್ ಟೂರ್ನಿಯ[illegible] ಸೈನಾ 86 ನೇ ಸೀಡ್ ಆಗಿದ್ದವಳು ಎಲ್ಲರೂ ಶಾಕ್[illegible] ಆಗುವಂತೆ ಆಡಿ ಪ್ರಖ್ಯಾತ ಆಟಗಾರ್ತಿ ಜೂಲಿಯಾ[illegible] ಜ್ಯೆಯಾನುಮಳನ್ನು ಸದೆಬಡಿದು ಚಾಂಪಿಯನ್ ಆದಳು[illegible] ನಂತರ ಕಳೆದ ಎರಡು ವರ್ಷದಲ್ಲಿ ಇಂಡೋನೇಷಿಯಾ[illegible] ಸಿಂಗಪೂರ್ ಸೂಪರ್ ಟೂರ್ನಿ ಗೆದ್ದಿದ್ದಾಳೆ. ಈ ಆಟದಲ್ಲಿ[illegible] ಈಗಲೂ ಜಾಸ್ತಿ ಹಣ ಇಲ್ಲ. ಈ ಸೂಪರ್ ಸೀರಿಸ್‌ಗಳ[illegible] ಒಟ್ಟಾರೆ ಪ್ರೈಜ್‌ಮನಿ ಸರಾಸರಿ ಒಂದು ಕೋಟಿ[illegible] ರೂಪಾಯಿಗಳಷ್ಟಿರುತ್ತದೆ. ಅದರಲ್ಲಿ ಚಾಂಪಿಯನ್ ಆದವರಿಗೆ[illegible] ಅಂದಾಜು 7% ಹಣ ಸಿಗುತ್ತದೆ. ಆ ಲೆಕ್ಕದಲ್ಲಿ[illegible] ಬಹುಮಾನವಾಗಿ ಸೈನಾ 7 ಲಕ್ಷ ರೂಪಾಯಿ ಗಳಿಸಿದ್ದಾಳೆ[illegible]

ಹೊಳೆವ ಕಣ್ಣುಗಳ, ಮುಗ್ಧ ನಗೆಯ ಸೈನಾ ಈಗ[illegible] ಭಾರಿ ಫೇಮಸ್ ಆಗುತ್ತಿರುವುದರಿಂದ ಮುಂದೆ ಅವಳಿಗೆ[illegible] ಏನಾದರೂ ಜಾಹೀರಾತು ಮಾಡೆಲ್ಲಿಂಗ್‌ನ ಅವಕಾಶ ಸಿಕ್ಕರೂ[illegible] ಸಿಗಬಹುದು.

ಆದರೆ ಈ ಜಾಹೀರಾತು ಮಾಫಿಯಾಗೆ ಸಂಬಂಧಿಸಿದ[illegible] ಒಂದೆರಡು ವಿಚಾರಗಳನ್ನು ಇಲ್ಲೇ ಹೇಳಬಹುದು.

ಇದು ಸೈನಾಳ ಕೋಚ್ ಗೋಪಿಚಂದ್‌ನಿಗೆ[illegible] ಸಂಬಂಧಿಸಿದ್ದದು. ಈತ ಆಲ್ ಇಂಡಿಯಾ ಚಾಂಪಿಯನ್[illegible] ಆಗಿ ನಂತರ ಆಲ್ ಇಂಗ್ಲೆಂಡ್ ಚಾಂಪಿಯನ್‌ಶಿಪ್ ಗೆದ್ದು[illegible] ಬಂದಾಗ ಈತನ ಹೆಸರು ಎಲ್ಲೆಡೆ ಕೇಳಿಬರುತ್ತಿತ್ತು. ಆಗ[illegible] ಅಮೆರಿಕನ್ ಕೋಲಾ ಕಂಪನಿಯವರು ತಮ್ಮ ಕೋಲಾ[illegible] ಜಾಹೀರಾತಿನಲ್ಲಿ ಮುಖ ತೋರಿಸುವಂತೆ ಗೋಪಿಚಂದ್‌ಗೆ[illegible] ದುಂಬಾಲು ಬಿದ್ದರು. ಕನಿಷ್ಠ 25 ರಿಂದ 50 ಲಕ್ಷ ಹಣ[illegible] ಬರುವ ಆಫರ್ ಅದಾಗಿತ್ತು.

ಆದರೆ ಗೋಪಿಚಂದ್ 'ನಾನೊಲ್ಲೆ' ಎಂದುಬಿಟ್ಟ[illegible] 'ಚಿಕ್ಕ ಮಕ್ಕಳಿಗೆ ಇದು ಮಾರಕ, ನಾನು ಅಂತಹ ಡ್ರಿಂಕ್[illegible] ಕುಡಿಯಿರಿ ಎಂದು ಹೇಳುವ ತಪ್ಪು ಮಾಡಲಾರೆ' ಎಂದಿದ್ದ[illegible] ಟೈಟಾನಿಕ್ ಸಿನಿಮಾ ಹೀರೋ ಲಿಯೋನಾರ್ಡೊ ಡಿ[illegible] ಕ್ಯಾಪ್ರಿಯೊ ಸಹ ಇಂತದ್ದೆ ನಿಲುವು ತಾಳಿ ಈ ಕೋಲಾ[illegible] ವ್ಯಾಪಾರಿಗಳನ್ನು ಓಡಿಸಿದ್ದ ಘಟನೆ ನಿಮಗೆ ನೆನಪಿರಬಹುದು.

ಇಂತಹ ಗೋಪಿಚಂದ್‌ನನ್ನು ನಮ್ಮ ಸಚಿನ್, ಧೋನಿ[illegible] ತರದ ಲೋಭಿ ಕ್ರಿಕೆಟರ್‌ಗಳೊಂದಿಗೊಮ್ಮೆ ಹೋಲಿಸಿ ನೋಡಿ?

ಸೈನಾ ಈ ಗಟ್ಟಿತನದ, ಸ್ವಚ್ಛ ಮನಸ್ಸಿನ ಗೋಪಿಚಂದ್ ಗರಡಿಯಲ್ಲಿ ಪಳಗಿರುವವಳು. ಮೊನ್ನೆ ಪತ್ರಕರ್ತನೊಬ್ಬ "ನೀನು ಸಾನಿಯಾ ಮಿರ್ಜಾಗಿಂತ ಜಾಸ್ತಿ ಸಾಧನೆ ಮಾಡಿದ್ದೀಯ, ಆದರೆ ಸಾನಿಯಾಳೇ ನಿನಗಿಂತ ಜಾಸ್ತಿ ಪಾಪ್ಯುಲರ್ ಆಗಿದ್ದಾಳೆ. ಜಾಹೀರಾತು ಎಂಡಾರ್ಸ್‌ಮೆಂಟ್ ಗಳಿಂದ ಜಾಸ್ತಿ ಹಣ ಪಡೆಯುತ್ತಿದ್ದಾಳೆ. ನಿನಗೆ ಇದು ಬೇಸರ ತಂದಿದೆಯಾ?" ಅಂತ ಕೇಳಿದ.

ಆದಕ್ಕೆ ಸೈನಾ ಹೇಳಿದ್ದು: "ನೀವು ಹೇಳುತ್ತಿರುವುದು ಸತ್ಯ. ಇರಲಿ. ನಾನು ಇನ್ನೂ ನನ್ನ ಸಾಮರ್ಥ್ಯ ಬೆಳೆಸಿಕೊಳ್ಳುತ್ತೇನೆ. ನನಗೆ ಸಿಗಬೇಕಾದ ಕ್ರೆಡಿಟ್ ಸಿಗುತ್ತೆ ಬಿಡಿ"

ಭಾರತೀಯ ಮಹಿಳಾ ಕ್ರೀಡಾ ಜಗತ್ತಿನಲ್ಲಿ ಇದುವರೆಗೂ ಮಿಡಿಯೋಕರ್ ಲೆವೆಲ್‌ನ ಸಾನಿಯಾ ಮಿರ್ಜಾ ಮೆರೆಯುತ್ತಿದ್ದಳು. ಅವಳದ್ದು ಮಾತು ಜಾಸ್ತಿ ಸಾಧನೆ ಕಡಿಮೆ ಎಂಬಂತಿತ್ತು. ಅವಳ ವ್ಯಕ್ತಿತ್ವವೂ ಪೊಳ್ಳಾಗಿತ್ತು. ಆದರೆ ಸೈನಾ ನೆಹ್ವಾಲ್ ಹಾಗಿಲ್ಲ. ಸಾಮರ್ಥ್ಯ ಜೊತೆಗೆ ವಿನಯ ಅವಳಿಗಿದೆ. ಅದಮ್ಯ ಆತ್ಮವಿಶ್ವಾಸ ಅವಳ ಪ್ರತಿ ಮಾತು ಹಾಗೂ ಚಲನೆಯಲ್ಲಿ ಎದ್ದು ಕಾಣುತ್ತಿದೆ. ಸೈನಾಗೆ 2009ರಲ್ಲಿ ಅರ್ಜುನ ಅವಾರ್ಡು ಸಿಕ್ಕಿದೆ.

'ನಾನು ವಿಶ್ವದ ನಂಬರ್ ಒನ್ ಆಟಗಾರ್ತಿ ಆಗುತ್ತೇನೆ' ಎನ್ನುತ್ತಿದ್ದಾಳೆ ಸೈನಾ.


ಆ ಗಳಿಗೆ ಬೇಗ ಬರಲಿ.

ಬಿಜೆಪಿಯಲ್ಲೀಗ 'ಗೌಡರ ಗದ್ದಲ'

ಮೊನ್ನೆ ಒಕ್ಕಲಿಗ ಶಾಸಕರೆಲ್ಲರೂ ರಹಸ್ಯ ಸ್ಥಳದಲ್ಲಿ ಸಭೆ ಸೇರಿ ಸದಾನಂದ ಗೌಡರಿಗೆ ತಮ್ಮ ಬೆಂಬಲವನ್ನು ಸೂಚಿಸಿದರೂ, ವಾಸ್ತವವಾಗಿ ಅದರಿಂದಾಗಿ ಅವರಿಗೆ ಯಾವುದೇ ಲಾಭವಾಗುವ ಲಕ್ಷಣಗಳು ಕಾಣಿಸುತ್ತಿಲ್ಲ. ಯಾಕೆಂದರೆ ಮಂಗಳೂರು ಕಡೆಯ ಗೌಡರನ್ನು ಈ ಕಡೆಯ ಒಕ್ಕಲಿಗರು ಬೇರೆ ಜಾತಿಯವರಂತೆ ನೋಡುತ್ತಾರೆಯೇ ವಿನಃ ಇವರು ಎಂದೂ ಅವರನ್ನು ಸಂತೋಷದಿಂದ ಆಲಿಂಗನ ಮಾಡಿದ್ದೇ ಇಲ್ಲ.

ಲಿಂಗಾಯತರ ಪಕ್ಷವೆಂಬ ಹಣೆಪಟ್ಟಿ ಧರಿಸಿರುವ ಬಿಜೆಪಿಯಲ್ಲಿ ಈಗ 'ಗೌಡರ ಗದ್ದಲ' ಆರಂಭವಾಗಿದೆ. ಮೊದಲೇ ಭಿನ್ನಮತೀಯ ಚಟುವಟಿಕೆಯಿಂದ ಮುರಿದ ಮನೆಯಾಗಿರುವ ಬಿಜೆಪಿಗೆ ಈ ಗೌಡರ ಗದ್ದಲ ಇನ್ನೊಂದು ತಲೆನೋವಾಗಿದೆ.

ಈ ಬಾರಿ ಗೌಡರ ಪರವಾಗಿ ಭಿನ್ನಮತೀಯ ಬಾವುಟವನ್ನು ಹಾರಿಸಿರುವವರು ಬೇರಾರೂ ಅಲ್ಲ; ಒಂದು ಕಾಲದಲ್ಲಿ "ಪಕ್ಷದ ಶಿಸ್ತು ಮತ್ತು ಸಿದ್ಧಾಂತವೇ ನನ್ನ ಉಸಿರು" ಎಂದು ಹೇಳಿಕೊಂಡಿದ್ದ ಬಿಜೆಪಿಯ ಮಾಜಿ ರಾಜ್ಯಾಧ್ಯಕ್ಷ ಡಿ.ವಿ. ಸದಾನಂದ ಗೌಡ. ಬಿಜೆಪಿ ಮೊದಲಬಾರಿಗೆ ಅಧಿಕಾರಕ್ಕೆ ಬಂದಾಗ ಈ ಸದಾನಂದ ಗೌಡರೇ ಪಕ್ಷದ ಅಧ್ಯಕ್ಷರಾಗಿದ್ದು ಯಡಿಯೂರಪ್ಪನವರಿಗೆ ಹೆಗಲಿಗೆ ಹೆಗಲು ಕೊಟ್ಟಿದ್ದರು. ಯಡ್ಡಿಯನ್ನು ಬಹುತೇಕ ಎಲ್ಲ ಅಪಾಯದ ಸಂದರ್ಭದಲ್ಲೂ ಬಚಾವ್ ಮಾಡಿದ್ದು ಕೂಡಾ ಇದೇ ಡಿವಿ.


ಸದಾನಂದಗೌಡ

ಇಂತಹ ಡಿವಿ ಅಧ್ಯಕ್ಷರಾಗಿದ್ದಾಗ ಪಕ್ಷದ ಉಳಿದ ಶಾಸಕರಿಗೆ ಸಿಂಹಸ್ವಪ್ನ ಆಗಿದ್ದರು, ಭಿನ್ನಮತೀಯ ಚಟುವಟಿಕೆ ಚಿಗಿಯೆತ್ತಿದ್ದಾಗಲೆಲ್ಲಾ ಶಾಸಕರಿಗೆ ಪಕ್ಷದ ಶಿಸ್ತಿನ ಪಾಠ ಹೇಳಿಕೊಡುತ್ತಿದ್ದ ಮೇಷ್ಟ್ರು ಆಗಿದ್ದರು. ಪಕ್ಷದ ಉನ್ನತ ಹುದ್ದೆಯಲ್ಲಿದ್ದರೂ ಕೂಡ ಇವರ ಕೈ-ಬಾಯಿ ಶುದ್ಧವಾಗಿತ್ತು ಎಂಬುದು ಇವರಿಗೆ ಸಲ್ಲುವ ಗೌರವ.

ಇಂತಹ ಪುಣ್ಯಕೋಟಿ ಈಗ ಯಡಿಯೂರಪ್ಪನವರ ಸರ್ಕಾರದ ವಿರುದ್ಧ ಭಿನ್ನಮತೀಯ ಬಾವುಟವನ್ನು ಹಾರಿಸಿರುವುದನ್ನು ನೋಡಿದರೆ ಬಿಜೆಪಿ ಪಕ್ಷ ಎಷ್ಟೊಂದು ಕುಟ್ಟಿಹೋಗಿದೆ ಎಂಬುದು ಸ್ಪಷ್ಟವಾಗುತ್ತದೆ. ಸದಾನಂದ ಗೌಡರನ್ನು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸುವಾಗ "ನಿಮಗೆ ಕೆಎಂಎಫ್ ಅಥವಾ ಬಿಡಿಎ ಅಧ್ಯಕ್ಷ ಸ್ಥಾನವನ್ನು ನೀಡುತ್ತೇವೆ" ಎಂದು ಯಡ್ಡಿ ಭರವಸೆ ನೀಡಿದ್ದರು. ಆದರೆ ರೆಡ್ಡಿ ಸೋದರರು ಅತ್ಯಂತ ಜಾಣತನದಿಂದ ಕೆಎಂಎಫ್ ಅಧ್ಯಕ್ಷ ಸ್ಥಾನವನ್ನು ಹೈಜಾಕ್ ಮಾಡಿದಾಗ, ತನ್ನ ಅಸಹಾಯಕತೆಯನ್ನು ಪ್ರದರ್ಶಿಸಿದ ಯಡ್ಡಿ "ನಿಮಗೆ ಆದಷ್ಟು ಬೇಗ ಸೂಕ್ತ ಸ್ಥಾನಮಾನ ನೀಡುತ್ತೇವೆ" ಎಂದು ಭರವಸೆ ನೀಡಿದ್ದರು.

ಯಡ್ಡಿಯ ಮಾತನ್ನು ಕೇಳಿ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿದ ಸದಾನಂದ ಗೌಡರು ಒಂದಿಷ್ಟು ಕಾಲ ಯಡ್ಡಿಯ ಫೋನ್‌ಗಾಗಿ ಕಾದು ಕುಳಿತರು. ನಾಲ್ಕು ವರ್ಷಗಳ ಕಾಲ ತನ್ನ ಆರೋಗ್ಯವನ್ನು ನಿರ್ಲಕ್ಷಿಸಿ ಅಹೋರಾತ್ರಿ ಪಕ್ಷಕ್ಕಾಗಿ ದುಡಿದ ಸದಾನಂದ ಗೌಡರಿಗೆ ಪಕ್ಷ ಮತ್ತು ಯಡ್ಡಿ ತನ್ನನ್ನು ನಿರ್ಲಕ್ಷಿಸುತ್ತಿದೆ ಎಂದು ದಿಢೀರನೆ ಜ್ಞಾನೋದಯವಾಯಿತು. ಇದರ ಫಲವಾಗಿಯೇ ಹಲವಾರು ದಶಕಗಳಿಂದ ಶಿಸ್ತಿನ ಸಿಪಾಯಿಯಾಗಿದ್ದ ಸದಾನಂದ ಗೌಡರು ಈಗ ರೆಬೆಲ್ ಆಗಿದ್ದಾರೆ.

ಮೊನ್ನೆ ಮೊನ್ನೆ "ರಾಜ್ಯಸಭೆಯ ಚುನಾವಣೆಯಲ್ಲಿ ನಾವು ವಿಜಯ ಮಲ್ಯರಿಗೆ ಮತ ಹಾಕುವುದಿಲ್ಲ" ಎಂದು ಆರಂಭದಲ್ಲಿ ಟಿವಿ ಚಾನೆಲ್‌ಗಳಿಗೆ ಬೈಟ್ ನೀಡಿದ್ದೂ ಇದೇ ಗೌಡರು. ರಾಜ್ಯ ಸಭೆ ಚುನಾವಣೆ ಭಿನ್ನಮತೀಯ ಚಟುವಟಿಕೆಗೆ ಸೂಕ್ತ ವೇದಿಕೆ ಎಂದೇ ಗೌಡರು ಭಾವಿಸಿದ್ದರು. ಆದರೆ ಯಾವಾಗ ಪಕ್ಷದ ದೆಹಲಿ ವರಿಷ್ಠರು ಮಲ್ಯನ ಹಣದ ಥೈಲಿಗೆ ಕೈಚಾಚಿದರೋ ಅಲ್ಲಿಗೆ ಗೌಡರ ಗೇಮ್ ಪ್ಲಾನ್ ಠುಸ್ಸಾಯಿತು. ಅದಾದನಂತರ ಮೊನ್ನೆ ಲೋಕಾಯುಕ್ತ ರಾಜೀನಾಮೆ ನೀಡಿದ ಬೆನ್ನಿಗೆ ಕೆಎಂಎಫ್ ನಿರ್ದೇಶಕನ ಸ್ಥಾನಕ್ಕೆ ರಾಜೀನಾಮೆ ನೀಡಿ ಅದೊಂದು ದೊಡ್ಡ ಸುದ್ದಿಯಾಗುವಂತೆ ನೋಡಿಕೊಂಡರು. ಸಹಜವಾಗಿಯೇ ಸದಾನಂದ ಗೌಡರ ರಾಜೀನಾಮೆ ಬಿಜೆಪಿ ಪಾಳಯದಲ್ಲಿ ಭಾರೀ ಸುದ್ದಿ ಮಾಡಿತು.


ಇದರ ಫಲವಾಗಿಯೇ ಮೊನ್ನೆ ಸಾರಿಗೆ ಸಚಿವ ಅಶೋಕ್ ನೇತೃತ್ವದಲ್ಲಿ ಕೆಲವು ಒಕ್ಕಲಿಗ ಶಾಸಕರು ಸೇರಿ ಸಮಾಲೋಚನೆ ನಡೆಸಿದ್ದಾರೆ. ಅವರೆಲ್ಲರ ಡಿಮ್ಯಾಂಡ್ ಒಂದೇ ಆಗಿತ್ತು; ಅದೇನೆಂದರೆ ಪಕ್ಷಕ್ಕಾಗಿ ದುಡಿದ ಸದಾನಂದ ಗೌಡರನ್ನು ಯೋಗ್ಯ ಸ್ಥಾನದಲ್ಲಿ ಕುಳ್ಳಿರಿಸಬೇಕೆಂದು ಯಡ್ಡಿಯನ್ನು ಒತ್ತಾಯಿಸುವುದು.

ಶಿಸ್ತಿನ ಸಿಪಾಯಿಯೆಂದೇ ಖ್ಯಾತಿ ಗಳಿಸಿದ್ದ ಸದಾನಂದ ಗೌಡರು ಮೂಲತಃ ಆರೆಸ್ಸೆಸ್‌ನವರು. ಆದರೆ ಇಂದು ಆರೆಸ್ಸೆಸ್‌ನವರಿಗೂ ಈ ಗೌಡ ಬೇಕಾಗಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆರೆಸ್ಸೆಸ್ ಕಲ್ಲಡ್ಕ ಪ್ರಭಾಕರ್ ಭಟ್ಟರ ಕೈಯಲ್ಲಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಯಾಕೋ ಏನೋ ಪ್ರಭಾಕರ್ ಭಟ್ಟರು ಇತ್ತೀಚೆಗೆ ಸದಾನಂದ ಗೌಡರನ್ನು ಸಂಪೂರ್ಣವಾಗಿ ಕೈಬಿಟ್ಟಿದ್ದಾರೆ. ಕಳೆದ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಸದಾನಂದ ಗೌಡರು ಮಂಗಳೂರು ಬದಲಿಗೆ ಉಡುಪಿಯಿಂದ ಸ್ಪರ್ಧಿಸಬೇಕೆಂದು ಆದೇಶ ನೀಡಿದವರೇ ಇದೇ ಪ್ರಭಾಕರ್ ಭಟ್ಟರು.

ಆರಂಭದಲ್ಲಿ ಸದಾನಂದ ಗೌಡರಿಗೆ ಇದು ಅಷ್ಟೇನೂ ಇಷ್ಟವಿರಲಿಲ್ಲ. ತನ್ನ ಸ್ವಂತ ಕ್ಷೇತ್ರ ಬಿಟ್ಟು ಹೊಸ ಕ್ಷೇತ್ರಕ್ಕೆ ಹೋಗಿ ಗೆಲ್ಲುವುದು ಹೇಗೆ ಎಂದು ಅವರು ತಲೆಕೆಡಿಸಿಕೊಂಡಿದ್ದರು. ಕೊನೆಗೆ ಆರೆಸ್ಸೆಸ್ ವರಿಷ್ಠರು ಮತ್ತು ಪಕ್ಷದ ನಾಯಕರ ಒತ್ತಡಕ್ಕೆ ಮಣಿದು ಉಡುಪಿಯಿಂದ ಸ್ಪರ್ಧಿಸಿ ಗೆದ್ದಿದ್ದರು.

ಯಾವಾಗ ಆರೆಸ್ಸೆಸ್ ನಾಯಕರೂ ಈಗ ಗೌಡರನ್ನು ದೂರ ಇಟ್ಟಿದ್ದಾರೆಂಬ ಸುದ್ದಿ ಯಡ್ಡಿಗೆ ತಲುಪಿತ್ತೋ? ಆ ಕೂಡಲೇ ಯಡ್ಡಿ ಕೂಡಾ ತನ್ನ ರಾಜಕೀಯ ಚತುರತೆಯನ್ನು ಪ್ರದರ್ಶಿಸುತ್ತಾ ಒಂದು ಕಾಲದ ತಮ್ಮ ಆಪತ್ಬಾಂಧವನನ್ನು ನಿರ್ಲಕ್ಷಿಸುತ್ತಾ, ಅವರನ್ನು ಮೂಲೆಗುಂಪು ಮಾಡುತ್ತಾ ಬಂದರು. ಈ ನಿಟ್ಟಿನಲ್ಲೇ ಮಂಗಳೂರು ಜಿಲ್ಲೆಯವರೇ ಆದ ಮಾಜಿ ಲೋಕಸಭಾ ಸದಸ್ಯ ಧನಂಜಯ ಕುಮಾರ್ ಅವರನ್ನು ಯಡಿಯೂರಪ್ಪ ತನ್ನ ಪರಮಾಪ್ತ ಬಳಗದಲ್ಲಿ ಸೇರಿಸಿಕೊಂಡು ಅವರಿಗೆ ಎಲ್ಲಿಲ್ಲದ ಪ್ರಾಮುಖ್ಯತೆಯನ್ನು ನೀಡಿದರು. ಅಷ್ಟೇನೂ ಜನ ಬೆಂಬಲವಿಲ್ಲದ ಮತ್ತು ಜಾತಿ ಬೆಂಬಲವಿಲ್ಲದ ಧನಂಜಯ ಕುಮಾರ್ ಪ್ರವರ್ಧಮಾನಕ್ಕೆ ಬರುತ್ತಿರುವುದು ಸಹಜವಾಗಿ ಸದಾನಂದ ಗೌಡರಿಗೆ ಇರಿಸುಮುರಿಸು ಉಂಟುಮಾಡಿತು. ಅದು ಹೇಗೋ ಧನಂಜಯ ಕುಮಾರ್‌ಗೆ ಬಡ್ತಿ ನೀಡಿದ್ದನ್ನು ಸಹಿಸಿಕೊಂಡ ಸದಾನಂದ ಗೌಡರಿಗೆ ನಿಜವಾಗಿಯೂ ನುಂಗಲಾರದ ತುತ್ತಾಗಿದ್ದು ದಕ್ಷಿಣ ಕನ್ನಡದವರೇ ಆದ ಮತ್ತು ತನ್ನ ಸ್ವಜಾತಿ ಬಂಧು ಆದ ಶೋಭಾ ಕರಂದ್ಲಾಜೆ ಬಗ್ಗೆ ಮುಖ್ಯಮಂತ್ರಿ ತೋರಿಸುತ್ತಿರುವ ಅಪಾರವಾದ ಮಮತೆ.

ಮಂತ್ರಿ ಸ್ಥಾನದಿಂದ ಕೆಳಗಿಳಿದ ನಂತರವೂ ಶೋಭಾ ಕರಂದ್ಲಾಜೆ ಈ ರಾಜ್ಯದ ಆಗು ಹೋಗುಗಳನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರವಹಿಸಲು ಸಾಧ್ಯವಾಗುವುದಾದರೆ, ಪಕ್ಷದ ಅಧ್ಯಕ್ಷ ಸ್ಥಾನವಹಿಸಿದ ತನ್ನನ್ನೇಕೆ ಮೂಲೆಗುಂಪು ಮಾಡಲಾಗುತ್ತಿದೆ ಎಂಬ ಚಿಂತೆ ಗೌಡರನ್ನು ದಿನದಿನಕ್ಕೆ ಕಾಡಲಾರಂಭಿಸಿತು.


ಯಡಿಯೂರಪ್ಪ

ಸದ್ಯದಲ್ಲೇ ನಡೆಯಲಿರುವ ರಾಜ್ಯ ಸಚಿವ ಸಂಪುಟ ಪುನರ್ರಚನೆಯಲ್ಲಿ ಶೋಭ ಕರಂದ್ಲಾಜೆಗೆ ಮತ್ತೆ ಮಂತ್ರಿ ಪದವಿ ಸಿಗಬಹುದೆಂಬ ಸುದ್ದಿ ಕೇಳಿ ಸಹಜವಾಗಿಯೇ ಸದಾನಂದ ಗೌಡರು ವಿಲಿವಿಲಿಗೊಂಡಿದ್ದಾರೆ. ತನ್ನ ಸ್ವಜಾತಿ ಬಂಧುವಾದ ಶೋಭಾ ಕರಂದ್ಲಾಜೆ ಮಂತ್ರಿ ಸ್ಥಾನ ಪಡೆದರೆ ಅದೇ ಸಮುದಾಯಕ್ಕೆ ಸೇರಿದ ತನಗೆ ಯಾವುದೇ ದೊಡ್ಡ ಹುದ್ದೆ ದೊರೆಯಲಾರದು ಎಂಬ ತೀರ್ಮಾನಕ್ಕೆ ಸದಾನಂದ ಗೌಡರು ಬಂದಿದ್ದಾರೆ. ಈ ಕಾರಣಕ್ಕಾಗಿಯೇ ಶೋಭಾ ಕರಂದ್ಲಾಜೆಗೆ ಮಂತ್ರಿ ಸ್ಥಾನ ಸಿಗುವ ಮೊದಲೇ ಯಾವುದಾದರೂ ನಿಗಮ ಮಂಡಳಿಗೆ ತಾನೂ ಅಧ್ಯಕ್ಷನಾಗಬೇಕು ಎಂಬುದೇ ಸದ್ಯಕ್ಕೆ ಗೌಡರ ಒಲವು. ಆದ್ದರಿಂದಲೇ ಕೆಎಂಎಫ್ ನಿರ್ದೇಶಕ ಸ್ಥಾನಕ್ಕೆ ರಾಜೀನಾಮೆ ನೀಡಿ ಗೌಡರು ತಮ್ಮ ಅಸಮಾಧಾನವನ್ನು ಮುಖ್ಯಮಂತ್ರಿಯವರಿಗೆ ತಲುಪುವಂತೆ ನೋಡಿಕೊಂಡಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಬಿಜೆಪಿ ಪಾಳಯದಲ್ಲಿ ಇಂದು ಧನಂಜಯ ಕುಮಾರ್ ಮತ್ತು ಶೋಭ ಕರಂದ್ಲಾಜೆ ಅತ್ಯಂತ ನಿರ್ಣಾಯಕ ಪಾತ್ರಗಳನ್ನು ನಿರ್ವಹಿಸುತ್ತಿದ್ದಾರೆ. ಆದರೆ ಒಂದು ಕಾಲದಲ್ಲಿ ಇಡೀ ರಾಜ್ಯದಲ್ಲಿ ಪಕ್ಷದ ಜವಾಬ್ದಾರಿ ನಿರ್ವಹಿಸುತ್ತಿದ್ದ ಸದಾನಂದ ಗೌಡರ ಮಾತಿಗೆ ಈಗ ದಕ್ಷಿಣ ಕನ್ನಡ ಬಿಜೆಪಿಯಲ್ಲೇ ಯಾರೂ ಕ್ಯಾರೇ ಅನ್ನುತ್ತಿಲ್ಲ. ಅದರಲ್ಲೂ ಮುಖ್ಯವಾಗಿ ಪುತ್ತೂರು ಅಸೆಂಬ್ಲಿ ಕ್ಷೇತ್ರದಲ್ಲಿ ಬಿಜೆಪಿ ಕಾರ್ಯಕರ್ತರು ಸದಾನಂದ ಗೌಡರ ಈ ಅತಂತ್ರ ಸ್ಥಿತಿಯನ್ನು ನೋಡಿ ಸಂತೋಷಪಡುತ್ತಿದ್ದಾರೆ. ಇದಕ್ಕೆ ಮುಖ್ಯ ಕಾರಣ ಸದಾನಂದ ಗೌಡರ ಸ್ವಹಿತಾಸಕ್ತಿಯಿಂದಾಗಿಯೇ ಪುತ್ತೂರಿನ ಬಿಜೆಪಿ ಎರಡು ಹೋಳಾಗಿಹೋಗಿದ್ದು. ಅಲ್ಲಿಯ ಮಾಜಿ ಶಾಸಕಿ ಶಕುಂತಲಾ ಶೆಟ್ಟಿಯನ್ನು ತನ್ನ ರಾಜಕೀಯ ಪ್ರಭಾವ ಮತ್ತು ಶಕ್ತಿಯನ್ನು ಬಳಸಿಕೊಂಡು ಸದಾನಂದ ಗೌಡ ಮಟ್ಟಹಾಕಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಮೊನ್ನೆ ಒಕ್ಕಲಿಗ ಶಾಸಕರೆಲ್ಲರೂ ರಹಸ್ಯ ಸ್ಥಳದಲ್ಲಿ ಸಭೆ ಸೇರಿ ಸದಾನಂದ ಗೌಡರಿಗೆ ತಮ್ಮ ಬೆಂಬಲವನ್ನು ಸೂಚಿಸಿದರೂ, ವಾಸ್ತವವಾಗಿ ಅದರಿಂದಾಗಿ ಅವರಿಗೆ ಯಾವುದೇ ಲಾಭವಾಗುವ ಲಕ್ಷಣಗಳು ಕಾಣಿಸುತ್ತಿಲ್ಲ. ಯಾಕೆಂದರೆ ಮಂಗಳೂರು ಕಡೆಯ ಗೌಡರನ್ನು ಈ ಕಡೆಯ ಒಕ್ಕಲಿಗರು ಬೇರೆ ಜಾತಿಯವರಂತೆ ನೋಡುತ್ತಾರೆಯೇ ವಿನಃ ಇವರು ಎಂದೂ ಅವರನ್ನು ಸಂತೋಷದಿಂದ ಆಲಿಂಗನ ಮಾಡಿದ್ದೇ ಇಲ್ಲ.


ಸದಾನಂದ ಗೌಡರಂತಹ ಶಿಸ್ತಿನ ಮನುಷ್ಯ ಈಗ ಪಕ್ಷದಲ್ಲಿ ಏಕಾಂಗಿಯಾಗಿರುವುದು ಮತ್ತು ಜಾತಿಯ ಆಧಾರದ ಮೇಲೆ ಬಂಡಾಯದ ಬಾವುಟ ಹಾರಿಸುತ್ತಿರುವುದನ್ನು ನೋಡಿದರೆ ಬಿಜೆಪಿಯಲ್ಲಿ ಇಂದು ಯಾವುದೂ ಸುಸೂತ್ರವಾಗಿ ಸಾಗುತ್ತಿಲ್ಲ ಎಂದು ಸುಲಭವಾಗಿ ಅರ್ಥೈಸಬಹುದು. ಪ್ರಸ್ತುತ ಗೌಡರ ಗದ್ದಲದ ಕಾರಣದಿಂದಾಗಿ ಪಕ್ಷದಲ್ಲಿ ಲಿಂಗಾಯತ ಶಾಸಕರು ಇನ್ನಷ್ಟು ಒಗ್ಗಟ್ಟಿನಿಂದ ತನ್ನನ್ನು ಬೆಂಬಲಿಸಬಹುದು ಎಂಬ ದೂರದೃಷ್ಟಿ ಯಡ್ಡಿಯದ್ದು. ಅಂದರೆ ಲಿಂಗಾಯತ V/s ಒಕ್ಕಲಿಗ ಎಂಬ ಹೊಸ ಸಮರ ಮುಂಬರುವ ದಿನಗಳಲ್ಲಿ ಪಕ್ಷದಲ್ಲಿ ಇನ್ನಷ್ಟು ತೀವ್ರಗೊಳ್ಳಬಹುದು.

ಸದಾಕಾಲ ನಗುನಗುತ್ತಾ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಸೂತ್ರವನ್ನು ಕಂಡುಹಿಡಿಯುತ್ತಿದ್ದ ಯಡ್ಡಿಯ ಮಿತ್ರ ಸದಾನಂದ ಗೌಡ ಈಗ ನಗುವ ಬದಲು ಮುನಿಸಿಕೊಂಡಿರುವುದೇ ಇದಕ್ಕೆ ನಾಂದಿ ಹಾಡಲಿದೆ. ಆದರೆ ಗೌಡರ ಅಸಮಾಧಾನವನ್ನು ಅಷ್ಟೇನೂ ತಲೆಗೆ ಹಚ್ಚಿಕೊಳ್ಳದ ಪಕ್ಷದ ಅಧ್ಯಕ್ಷ ಈಶ್ವರಪ್ಪ ಮತ್ತು ಮುಖ್ಯಮಂತ್ರಿ ಯಡ್ಡಿ "ಅಧಿವೇಶನದ ನಂತರ ಸದಾನಂದ ಗೌಡರಿಗೆ ಯೋಗ್ಯವಾದ ಸ್ಥಾನಮಾನ ನೀಡುತ್ತೇವೆ" ಎಂದು ತಣ್ಣಗೆ ಪ್ರತಿಕ್ರಿಯಿಸಿದ್ದಾರೆ. ಇದರಿಂದ ಸಮಾಧಾನಗೊಳ್ಳದ ಗೌಡರು ಮುಂದಿನ ದಿನಗಳಲ್ಲಿ ಹೇಗೆ ಮುಂದುವರೆಯಬೇಕು ಎಂದು ತನ್ನ ಪರಮಾಪ್ತ ಶಾಸಕರ ಜೊತೆ ಸಮಾಲೋಚನೆಯಲ್ಲಿ ತೊಡಗಿದ್ದಾರೆ. ಅಲ್ಲಿಯತನಕ ಗೌಡರ ಗದ್ದಲಕ್ಕೆ ಒಂದು ಪುಟ್ಟ ಅಲ್ಪವಿರಾಮ.

• ಸದಾಶಿವ ಶೆಣೈ

ವೈದ್ಯಕೀಯ ಸಚಿವನಿಗೆ ಇದೆಂಥಾ ವ್ಯಾಧಿ?

ಯಡಿಯೂರಪ್ಪನ ಕ್ಯಾಬಿನೆಟ್ಟನ್ನು ಎತ್ತ ಕಡೆಯಿಂದ ಅದಿಟ್ಟಿಸಿದರೂ ತಲೆ ನೆಟ್ಟಗಿರುವ ಆಸಾಮಿಗಳನ್ನು ಪತ್ತೆಹಚ್ಚಲಾಗುತ್ತಿಲ್ಲ. ಇಲ್ಲಿ ಎಂತೆಂಥ ಪ್ರಭೃತಿಗಳಿವೆಯೆಂದರೆ ಘನತೆಯನ್ನು ಮರೆತು ಸಾರ್ವಜನಿಕವಾಗೇ ಏನೇನೋ ಹಾರಿಕೊಳ್ಳಬಲ್ಲವು, ಮರುಕ್ಷಣವೇ ಮಳ್ಳತನದಿಂದ ನುಸುಳಿಕೊಳ್ಳಲೂಬಲ್ಲವು. ಇಂಥಾ ವ್ಯಾಧಿ ವೈದ್ಯಕೀಯ ಶಿಕ್ಷಣ ಸಚಿವ ರಾಮಚಂದ್ರಗೌಡರಿಗೂ ಉಲ್ಬಣಿಸಿಬಿಟ್ಟಿದೆ!



ಇದಕ್ಕೆ ಮೊನ್ನಿನ ವಿಧಾನಮಂಡಲ ಅಧಿವೇಶನ ಪಕ್ಕಾ ಸಾಕ್ಷಿಯಾಯಿತು. ಪ್ರತಿಪಕ್ಷನಾಯಕ ಸಿದ್ಧರಾಮಯ್ಯ, ಲೋಕಾಯುಕ್ತರಿಗೆ ಪರಮಾಧಿಕಾರ ನೀಡುವ ಕುರಿತು ಬಿಜೆಪಿ ತನ್ನ ಪ್ರಣಾಳಿಕೆಯಲ್ಲಿ ಭರವಸೆ ನೀಡಿತ್ತೋ ಇಲವೋ ಅಂತೊಂದು ಪ್ರಶ್ನೆ ಕೇಳಿದರು ನೋಡಿ, ಈ ಪುಣ್ಯಾತ್ಮ ರಾಮಚಂದ್ರಗೌಡ ಇಂಥ ಗಂಭೀರ ಪ್ರಶ್ನೆಗೆ ಪೆಪ್ಪರ್‌ಮಿಂಟ್ ಲೆವೆಲ್ಲಿನ ಉತ್ತರ ನೀಡಿ 'ಪ್ರೌಢಿಮೆ' ಮೆರೆದರು! 'ಮಕ್ಕಳಿಗೆ ಪೆಪ್ಪರ್‌ಮೆಂಟ್ ತೆಕ್ಕೊಡ್ತೀವಿ ಅಂತೀವಿ. ಇಲ್ಲಾ ಚಂದ್ರನ್ನೇ ತಂದ್ಕೊಡ್ತೀವಿ ಅಂದಿರ್ತೀವಿ. ಆದ್ರೆ ಅದೆಲ್ಲಾನೂ ಮಾಡಕ್ಕಾಗುತ್ತಾ' ತೀರಾ ಅಬ್ಬೇಪಾರಿಯ ಆಣಿಮುತ್ತಿನಂತಿರುವ ಈ ಸ್ಲೋಗನ್ನು ರಾಮಚಂದ್ರಗೌಡರು ಸಿದ್ದು ಪ್ರಶ್ನೆಗೆ ನೀಡಿದ ಉತ್ತರ!

ಸಚಿವನೊಬ್ಬ ನಡೆದುಕೊಳ್ಳಬೇಕಾದ ರೀತಿಯಾ ಇದು? ಈತನ ಮಾತಿನ ಅರ್ಥವೇನು? ಪರಮಾಧಿಕಾರ ಕೇಳಿದ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಹಾಗೂ ಅದನ್ನು ಮನಸಾರೆ ಬಯಸಿದ ಈ ನೆಲದ ಪ್ರಜ್ಞಾವಂತರು ಏನೂ ಅರಿಯದ ಮಕ್ಕಳು, ಅವು ರಚ್ಚೆ ಹಿಡಿದಾಗ ರೈಲು ಹತ್ತಿಸಿ ಪುಸಿ ಹೊಡೆಯುವುದು ಅಧಿಕಾರಶಾಹಿಯ ಕೆಲಸ ಅಂತಾಯ್ತು ತಾನೆ? ಇದಿಷ್ಟೇ ಅಲ್ಲದೆ ಈ ಅವಿವೇಕಿಗಳು ಜನರನ್ನು, ಅವರಿಗೆ ನೀಡುವ ಭರವಸೆಗಳನ್ನು ಯಾವ ಮಟ್ಟದಲ್ಲಿಟ್ಟು ನೋಡುತ್ತಾರೆಂಬುದೂ ಸಾಬೀತಾಗಿದೆ.

ಈ ಅವಿವೇಕಿಯ ಮಾತಿನ ಪ್ರಕಾರ ನೋಡಹೋದರೆ ಬಿಜೆಪಿಯ ಯಾವ ಭರವಸೆಯನ್ನೂ ನಂಬುವಂತಿಲ್ಲ. ಏನೋ, ಅಧಿಕಾರ ಹಿಡಿಯಬೇಕಿತ್ತು, ಅದಕ್ಕೊಂದು ಪ್ರಣಾಳಿಕೆ ಎಸೆಯಲಾಗಿದೆಯಷ್ಟೇ. ಅವು ಜಾರಿಯಾಗಿಲ್ಲ ಅಂತ ತಕರಾರೆತ್ತುವಂತಿಲ್ಲ, ಯಾಕೆಂದರೆ ಅವೆಲ್ಲ ಕೈಗೆಟುಕದ ಪೆಪ್ಪರ್‌ಮೆಂಟುಗಳು!


ಸಂತೋಷ್ ಹೆಗ್ಡೆ


ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಂದಿನಿಂದಲೂ ಇದೊಂದು ಗಂಭೀರ ಘಟನೆಯಲ್ಲ ಅಂತ ಬಿಂಬಿಸಲು ಬಿಜೆಪಿ ಮಂದಿ ಹೆಣಗಾಡುತ್ತಿದ್ದಾರೆ. ಆ ಕಾರಣದಿಂದಲೇ ಜೊಳ್ಳು ಹೇಳಿಕೆ ಉದುರಿಸುತ್ತಾ ಅದಕ್ಕಿಂತ ಕಡೆಯಾಗಿ ಹೋಗುತ್ತಿದ್ದಾರೆ. ವೈದ್ಯಕೀಯ ಶಿಕ್ಷಣ ಸಚಿವನಾಗಿದ್ದುಕೊಂಡೇ ಈತ ಈ ಪರಿಯ ಹೇಳಿಕೆ ಎಸೆಯುತ್ತಾರೆಂದರೆ ಈ ಸರ್ಕಾರದ ನೈತಿಕತೆ ಅದೆಂಥಾ ಪಾತಾಳ ತಲುಪಿದೆಯೋ ಯೋಚಿಸಿ.

ಸಂಪುಟ ಸಚಿವರುಗಳು ಹಾದಿತಪ್ಪಿ ನಡೆದಾಗ ಮುಖ್ಯಮಂತ್ರಿಯಾದಾತ ಜವಾಬ್ದಾರಿಯಿಂದ ವರ್ತಿಸಬೇಕು. ಆದರೆ ಖುದ್ದು ಯಡಿಯೂರಪ್ಪನೇ ಅಂಥ ಮೂರ್ಖ ಶಿಖಾಮಣಿಗಳ ಮುಂದಾಳತ್ವ ವಹಿಸಿದ್ದಾರೆ. ಅದಿಲ್ಲದೆ ಹೋಗಿದ್ದರೆ ತೀರಾ ಪುಢಾರಿಯಂತೆ ಉದ್ಧಟತನ ತೋರಿದ ರಾಮಚಂದ್ರಗೌಡನನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದರು.


ಸುಖಾಸುಮ್ಮನೆ ಅತ್ತು ನಾಟಕವಾಡುವ ಯಡಿಯೂರಪ್ಪ ಕನಿಷ್ಠ ಘನತೆಯಿಂದ ವರ್ತಿಸುವುದನ್ನು ಕಲಿಯಬೇಕಿದೆ. ಆನಂತರವಾದರೂ ರಾಮಚಂದ್ರಗೌಡನಂಥವರು ನಾಲಿಗೆಗೆ ಲಗಾಮು ಹಾಕಿಕೊಂಡಾರು. •

ಅದಿರು ಕಳ್ಳರ ಕಾಪಾಡಲು ಸಿಐಡಿ ಛೂಬಿಟ್ಟಿರುವ ಯಡ್ಡಿ!

ಕರ್ನಾಟಕ ಸಿಂಹಾಸನಾಧೀಶ್ವರ ಶ್ರೀಮಾನ್ ಯಡ್ಡಿಜೀ ಅಧಿಕಾರದ ಅಮಲಿನಲ್ಲಿ ಕನಿಷ್ಠ ಲಜ್ಜೆಗೂ ಎಳ್ಳುನೀರು ಬಿಟ್ಟುಬಿಟ್ಟಿದ್ದಾರೆ! ಈ ಯಡ್ಡಿಯ ಬಕಾಸುರ ಬಟಾಲಿಯನ್‌ನ ಭ್ರಷ್ಟತೆ-ಭಂಡತನ-ಭಾನಗಡಿಗಳ ಆಟಗಳಿಗೆ ಹೇಸಿಗೆಪಟ್ಟು ಸಂತೋಷ ಹೆಗ್ಡೆಯೇ ಲೋಕಾಯುಕ್ತಕ್ಕೆ ರಾಜೀನಾಮೆ ಬಿಸಾಕಿ ಮಂಗಳಾರತಿ ಎತ್ತಿದರೂ ಯಡವಟ್ಟು ಯಡ್ಡಿಗೆ ಬುದ್ಧಿ ಬಂದಂತಿಲ್ಲ. ಹೆಗ್ಡೆಯ ಪೀಠ ತ್ಯಾಗಕ್ಕೆ ಅಂತಿಮವಾಗಿ ನೈತಿಕ ಒತ್ತಡ ಹೇರಿದ್ದ ಬೇಲೇಕೇರಿ ಬಂದರಿನ ಅದಿರು ದರೋಡೆ ಸ್ಕ್ಯಾಂಡಲ್ ಅನ್ನು ಇನ್ನಷ್ಟು ಸಿಕ್ಕುಸಿಕ್ಕಾಗಿಸುವ ಪಾತಕಕ್ಕೀಗ ಖುದ್ದು ಸಿಎಂ ಯಡ್ಡಿಯೇ ಕೈಹಾಕಿದ್ದಾರೆ!


ಜನಾರ್ಧನರೆಡ್ಡಿ

ಕುಖ್ಯಾತ ಬೇಲೇಕೇರಿ ಬಂದರಿಂದ ಬರೋಬ್ಬರಿ 250 ಕೋಟಿ ರೂ.ಗಳ ಕಬ್ಬಿಣದ ಅದಿರು ಕಳ್ಳಸಾಗಾಣಿಕೆ ಆಗಿರುವ ಹಗರಣ ದಿನಕ್ಕೊಂದು ಆಯಾಮ ಪಡೆಯುತ್ತಿದೆ. 5 ಲಕ್ಷ ಮೆಟ್ರಿಕ್ ಟನ್ ಅದಿರನ್ನು 11 ಅದಿರು ರಫ್ತುದಾರರು ವಿದೇಶಕ್ಕೆ ಕದ್ದು ಸಾಗಿಸಿದ್ದಾರೆ. ಇದರಿಂದ ಸರ್ಕಾರಿ ಬೊಕ್ಕಸಕ್ಕೆ ದೊಡ್ಡ ಹಾನಿಯಾಗಿದೆ. ಈ ಬಗ್ಗೆ ಕ್ರಮ ಕೈಗೊಳ್ಳಿಯೆಂದು ಲೋಕಾಯುಕ್ತ ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ಆದರೆ ಅನಾಹುತಕಾರಿ ಯಡ್ಡಿ ಸರ್ಕಾರ ಅಕ್ರಮ ಸಕ್ರಮಗೊಳಿಸಲು ಹವಣಿಸಿತೇ ಹೊರತು ಖದೀಮರಿಗೆ ಕೋಳ ತೊಡಿಸಿ ರಾಜ್ಯದ ಸಂಪತ್ತು ಉಳಿಸುವ ಕರ್ತವ್ಯ ಪಾಲನೆ ಮಾಡಲೇ ಇಲ್ಲ! ಎಂಥ ದ್ರೋಹ?!


ಕೃಷ್ಣಾಪಾಲೇಮಾರ್

ಲೋಕಾಯುಕ್ತರ ವರದಿ ಪರಿಗಣಿಸಿದರೆ ತನ್ನ ಸರ್ಕಾರದ ಮೂಗುದಾರ ಹಿಡಿದು ಕೂತಿರುವ ಅದಿರು ಮಾಫಿಯಾದ ಕಿಂಗ್‌ಪಿನ್ ರೆಡ್ಡಿಗಳ ಚಡ್ಡಿ ರಾಡಿಯಾಗುತ್ತದೆಂಬುದು ಯಡ್ಡಿಗೆ ಖಾತ್ರಿಯಾಗಿ ಹೋಗಿತ್ತು. ಹಾಗೇನಾದರು ಆದರೆ ತನ್ನ ವ್ಯಾಮೋಹದ ಸಿಎಂ ಕುರ್ಚಿಗೇ ಗಂಡಾಂತರ ಎಂದು ಬೆಚ್ಚಿಬಿದ್ದರು ಯಡ್ಡಿ ಮಹಾತ್ಮ! ಬಚಾವಾಗಲು ಅದಿರು ಕಳ್ಳರ ಕಾಪಾಡುವ ಕಾರ್ಯಾಚರಣೆ ಶುರು ಹಚ್ಚಿಕೊಂಡರು. ಲೋಕಾಯುಕ್ತರಿಂದ ಜಗಜ್ಜಾಹೀರಾದ ಬೇಲೇಕೇರಿ ಬಂದರಿನ ಲೂಟ್‌ಮಾರ್ ಹಗರಣದಲ್ಲಿ ಗೊಂದಲ- ಗಡಿಬಿಡಿ ಮೂಡಿಸಿದರೆ ತಾನು 'ಸಂಭಾವಿತ'ನೆಂದು ಭ್ರಮೆ ಮೂಡಿಸಬಹುದೆಂಬ ದೂ(ದು)ರಾಲೋಚನೆ ಯಡ್ಡಿ ಹಾಕಿದರು. ಲೋಕಾಯುಕ್ತ ತನಿಖೆಗೆ ಪರ್ಯಾಯವಾಗಿ ತನ್ನ ಅಧೀನದಲ್ಲಿರುವ ಹೋಪ್‌ಲೆಸ್ ಸಿಐಡಿ ಪೊಲೀಸರಿಂದ 'ಅನುಕೂಲಕರ' ತನಿಖೆ ಮಾಡಿಸಿ ತಿಪ್ಪೆ ಸಾರಿಸುವ ಹಿಕಮತ್ತೀಗ ಮುಖ್ಯಮಂತ್ರಿ ನಡೆಸಿದ್ದಾರೆ!!

ಸಿಐಡಿ ನಾಟಕ

ಸಿಐಡಿ ಕಾರ್ಯದಕ್ಷತೆ ನಿಮಗೆ ಗೊತ್ತು! ಆಳುವವರ ಮೂಗಿನ ನೇರಕ್ಕೆ ತನಿಖೆ ನಾಟಕ ಆಡುವ ತಂಡವಿದು. ಅಧಿಕಾರಸ್ಥ ರಾಜಕಾರಣಿಗಳ ಅಂಕೆಯಲ್ಲಿರುವ ಈ ಸಿಐಡಿ ಶೂರರನ್ನು ಆಳುವವರು ತಮಗೆದುರಾದ ಪೇಚಿನಿಂದ ಪಾರಾಗಲು ಛೂಬಿಡುವುದು 'ಸಂಪ್ರದಾಯ' ಜನ ನಂಬುವ ಸ್ವತಂತ್ರ ಸಂಸ್ಥೆ-ಸಂತೋಷ ಹೆಗ್ಡೆಯ ಲೋಕಾಯುಕ್ತವೆಲ್ಲಿ? ಆಳುವವರ ಗುಲಾಮಗಿರಿ ಮಾಡುವ ಸಂಶಯಾಸ್ಪದ ಸಿಐಡಿ ಎಲ್ಲಿ? ಅಂತೂ ಈ ಸಿಐಡಿ ತಂಡ ಯಡ್ಡಿ ಆದೇಶದಂತೆ ಅದಿರು ಕಳ್ಳತನ ಆಗಿದೆಯೋ? ಇಲ್ಲವೋ? ಎಂಬ 'ಸತ್ಯಾಸತ್ಯತೆ' ಕಂಡುಹಿಡಿಯಲು ಬೇಲೇಕೇರಿ ಬಂದರಿನಲ್ಲೀಗ ಅಂಡಲೆಯುತ್ತಿದೆ!

ಸಾಕ್ಷಾತ್ ಸಿಐಡಿ ಐಜಿ ಎಂ.ಎನ್. ರೆಡ್ಡಿಯೇ ಟೀಮು ತೆಗೆದುಕೊಂಡು ಬೇಲೇಕೇರಿಗೆ ಬಂದಿದ್ದಾರೆ. ಅಂಕೋಲಾದ ಎಸಿಎಫ್ ನರೇಂದ್ರ ಹಿತ್ತಲಮಕ್ಕಿ ಬೇಲೇಕೇರಿ ಬಂದರಿನಲ್ಲಿ ಅರಣ್ಯ ಇಲಾಖೆ ಸೀಜ್ ಮಾಡಿದ್ದ ಕಬ್ಬಿಣದ ಅದಿರು ಕಳ್ಳತನವಾಗಿದೆ ಎಂದು ಕೊಟ್ಟಿರುವ ಪೊಲೀಸ್ ಕಂಪ್ಲೇಂಟಿನ ಮೇಲೇ ಸಿಐಡಿ ತನಿಖೆ ನಡೆಸುತ್ತದಂತೆ. ಆ ನಂತರವೇ ಲೋಕಾಯುಕ್ತರು ಹೆಸರಿಸಿರುವ 11 ಪಕ್ಕಾ ಅದಿರು ಕಳ್ಳ ಎಕ್ಸ್‌ಪೋರ್ಟರ್ಸ್ ಬಂಧಿಸಬೇಕೋ, ಬೇಡವೋ ಎಂಬ ತೀರ್ಮಾನವಂತೆ. ಹೇಗಿದೆ ಯಡ್ಡಿ ಬಳಗದ ಮಾರ್ಜಾಲ ನ್ಯಾಯ?


ಲೋಕಾಯುಕ್ತದ ಭಯ

ಲೋಕಾಯುಕ್ತದ ಮೇಲೆ ಯಡ್ಡಿ ಸರ್ಕಾರಕ್ಕೆ ನಂಬಿಕೆಯೇ ಇಲ್ಲ. ಲೋಕಾಯುಕ್ತದ ವಿಶೇಷ ತನಿಖಾಧಿಕಾರಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಉದಯ್ ವೀರ್‌ಸಿಂಗ್ ಬೇಲೇಕೇರಿ ಬಂದರಿನಲ್ಲಿ ಸೀಜ್ಡ್ ಅದಿರಲ್ಲಿ ಕಳುವಾದ ನಂತರ ಉಳಿದಿರುವುದೆಷ್ಟೆಂಬ ಮೌಲ್ಯಮಾನ ಮಾಡುತ್ತಿರುವ ಹೊತ್ತಲ್ಲೇ ಬೇಲೇಕೇರಿಗೆ ಸಿಐಡಿ ತಂಡ ಕಳಿಸಿರುವ ಯಡ್ಡಿಗೆ ನ್ಯಾ. ಹೆಗ್ಡೆ ಬಗ್ಗೆ ಇರುವ ಭಯವನ್ನು ನಿಸ್ಸಂಶಯವಾಗಿ ಬಿಂಬಿಸುವಂತಿದೆ. ಯಡ್ಡಿಯ ಲೋಕಾಯುಕ್ತ ಫೋಬಿಯಾ ಅದೆಲ್ಲಿಗೆ ತಲುಪಿದೆಯೆಂದರೆ, ಸಂತೋಷ್ ಹೆಗ್ಡೆ ಎಂದರೆ ಸಾಕು ಯಡ್ಡಿ ನಿದ್ದೆಯಲ್ಲೂ ಎದ್ದು ಚಿಟ್ಟನೆ ಚೀರುವಂತಾಗಿದೆ, ಪಾಪ!

ಕಳೆದ ಮಾರ್ಚ್‌ನಲ್ಲೇ ಲೋಕಾಯುಕ್ತ ಹೆಗ್ಡೆ ಕಣ್ಣು ಬೇಲೇಕೇರಿ ಬಂದರಿನ ಅದಿರು ಕಳ್ಳ ಸಾಗಾಣಿಕೆ ಮೇಲೆ ಬಿದ್ದಿತ್ತು. ಲೋಕಾಯುಕ್ತರ ಆದೇಶದಂತೆ ನಿಷ್ಠುರ- ಸಾಹಸಿ ಅರಣ್ಯ ಅಧಿಕಾರಿ ಉದಯ ವೀರ್‌ಸಿಂಗ್ ಬೇಲೇಕೇರಿಯ ಅದಿರು ರಫ್ತು ದಾರರ ಕಳ್ಳ ಅಡ್ಡೆಗಳ ಮೇಲೆ ರೇಡು ಬಿದ್ದಿದ್ದರು. 99 ಅದಿರು ಸಾಗಾಣಿಕಾ ಪರ್ಮಿಟ್ ಇಲ್ಲದ ಲಾರಿಗಳನ್ನು ಹಿಡಿದಿದ್ದರು. ಬೇಲೇಕೇರಿಯ ದಗಾಕೋರ ಅದಿರು ರಫ್ತುದಾರರ ಅಡ್ಡೆಗಳಿಂದ 40 ಗೋಣಿಚೀಲಗಳಷ್ಟು ಕಳ್ಳ ವಹಿವಾಟಿನ ದಾಖಲೆ ವಶಪಡಿಸಿಕೊಂಡಿದ್ದರು.


ಈ ಖೋಟಾ ದಾಖಲೆಗಳ ಆಧಾರದಲ್ಲೇ ಅರಣ್ಯ ಅಧಿಕಾರಿಗಳು ಬೇಲೇಕೇರಿ ಬಂದರಿನಲ್ಲಿ ದಾಸ್ತಾನಿದ್ದ 24 ರಾಶಿಗಳ ಒಟ್ಟು 8 ಲಕ್ಷ ಮೆಟ್ರಿಕ್ ಟನ್ ಕಬ್ಬಿಣದ ಅದಿರನ್ನು ಮುಟ್ಟುಗೋಲು ಹಾಕಿಕೊಂಡಿದ್ದರು. ಇದು ಅದಿರು ಮಾಫಿಯಾ ದೊರೆ ರೆಡ್ಡಿ ಬಳಗದ ಸ್ಥಳೀಯ 11 ರಫ್ತುದಾರ ಸಹಚರರ ಕಬ್ಜಾದಲ್ಲಿತ್ತು. ಇದನ್ನು ರಫ್ತು ಮಾಡದಂತೆ ಲೋಕಾಯುಕ್ತ ತಂಡ ನಿರ್ಬಂಧ ಹೇರಿತ್ತು. ಮಾರ್ಚ್ 26 ಮತ್ತು 29 ರಂದು ಸೀಜ್ ಮಾಡಲಾಗಿದ್ದ ಅದಿರಿನಲ್ಲಿ ಸುಮಾರು 5 ಲಕ್ಷ ಮೆಟ್ರಿಕ್ ಟನ್‌ನಷ್ಟು ಜೂನ್ ಮೊದಲ ವಾರದ ಹೊತ್ತಿಗೆ ನಾಪತ್ತೆಯಾಗಿತ್ತು!!

ಅಂಕೋಲಾ ಎಸಿಎಫ್ ನರೇಂದ್ರ ಹಿತ್ತಲಮಕ್ಕಿ ತನ್ನ ಮೇಲಧಿಕಾರಿ ಖಡಕ್ ಡಿಸಿಎಫ್ ಆರ್. ಗೋಕುಲ್ ಆದೇಶದಂತೆ ಸೀಜ್ ಮಾಡಿದ ಅದಿರು ಕಳ್ಳತನವಾಗಿದೆ ಎಂದು ಅಂಕೋಲಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದರು. ಈ ದೂರಿನಲ್ಲಿ 11 ರಫ್ತುದಾರರೇ ಸದ್ರಿ ಅದಿರು ಕದ್ದಿದ್ದಾರೆಂತಲೂ ಹೇಳಲಾಗಿತ್ತು. ಆಗ ಕಂಗಾಲು ಬತ್ತು ಆದಿರು ಮಾಫಿಯಾ! ತಕ್ಷಣ ಅದಿರು ಮಾಫಿಯಾದ 'ಡಾನ್' ಬಂದರು ಮಂತ್ರಿ ಕೃಷ್ಣ ಪಾಲೇ ಮಾರ್ ಎಂಬ ಲೇವಾದೇವಿದಾರನ ಬುಕ್ ಮಾಡಿದ!! ಆತ ಓಡೋಡಿ ಬೇಲೇಕೇರಿಗೆ ಬಂದವನೇ ಕಳ್ಳರಿಗೆ ಕುಮ್ಮಕ್ಕು ಕೊಡುವಂತೆ ಪ್ರಾಮಾಣಿಕ ಅರಣ್ಯ ಅಧಿಕಾರಿಗಳ ಹಂಗಿಸಿ ಮಾತಾಡಿದ. ಅಷ್ಟೇ ಅಲ್ಲ, ತಾನು ಕರೆದಿದ್ದ ಕಳ್ಳ ಸಾಗಾಣಿಕೆದಾರರ ದುಂಡುಮೇಜಿನ ಪರಿಷತ್ತಿಗೆ ಬರದ ಕಾನೂನು ನಿಷ್ಠ ಅಧಿಕಾರಿ ಗೋಕುಲರ ಸಸ್ಪೆಂಡ್ ಮಾಡುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರವೂ ಗೀಚಿಬಿಟ್ಟ!! ಈ ಸರ್ಕಾರಿ ಪ್ರಣೀತ ಪಾತಕ ನೋಡಲಾಗದೆ ಲೋಕಾಯುಕ್ತ ನ್ಯಾ. ಹೆಗ್ಡೆ ಹುದ್ದೆಗೆ ರಾಜೀನಾಮೆ ಬಿಸಾಕಿದರು. ಇದೆಲ್ಲ ಈಗ ಇತಿಹಾಸ!


ಯಡಿಯೂರಪ್ಪ

ಲೋಕಾಯುಕ್ತ V/s ಸಿಐಡಿ

ವರ್ತಮಾನ ಪ್ರಹಸನ ಇನ್ನಷ್ಟು ಅಸಹ್ಯಕರವಾಗಿ-ಘೋರವಾಗಿ ಮುಂದುವರಿದಿದೆ! ಇಡೀ 250 ಕೋಟಿಯ ರಾಬರಿ ಪ್ರಕರಣವನ್ನೇ ಬೇಲೇಕೇರಿಯ ಅರಬ್ಬೀ ಸಮುದ್ರಕ್ಕೆ ಎಸೆಯಲು ದೇಶಭಕ್ತರ ಬಿಜೆಪಿ ಸರ್ಕಾರದ ಸರದಾರರು ಸುಮುಹೂರ್ತ ಹುಡುಕುತ್ತಿದ್ದಾರೆ! ಒಂದೆಡೆ ಲೋಕಾಯುಕ್ತರ ವಿಶೇಷ ತನಿಖಾ ತಂಡ ಕಳ್ಳತನದ ಬಳಿಕ ಉಳಿದಿರುವ ಅದಿರೆಷ್ಟು-ಕಳ್ಳ ಜಾಡ್ಯಾವು ದೆಂದು ಹುಡುಕುತ್ತಿದ್ದರೆ, ಇವೆಲ್ಲ ವ್ಯರ್ಥವಾಗಿ ಸಲು ಸಿಐಡಿ ಪೊಲೀಸರನ್ನು ಬೇಲೇಕೇರಿಗೆ ಯಡ್ಡಿ ಬಳಗ ಛೂಬಿಟ್ಟದೆ!


ಸಂತೋಷ್‌ಹೆಗ್ಡೆ

ಕಳ್ಳರನ್ನು ಸಾಕ್ಷ್ಯಾಧಾರ ಸಮೇತ ಹಿಡಿದುಹಾಕುವ ಲೋಕಾಯುಕ್ತದ ವಿಶೇಷ ತನಿಖಾಧಿಕಾರಿ ಉದಯ ವೀರ್‌ಸಿಂಗ್‌ರ ಟೀಮಿನ ಡ್ಯೂಟಿಗೆ ಯಡ್ಡಿ ಗ್ಯಾಂಗು ಅಡ್ಡಗಾಲು ಹಾಕುತ್ತಿದೆ. ಲೋಕಾಯುಕ್ತ ತನಿಖೆಗೆ ಸಮಾನಾಂತರವಾಗಿ ಸಿಐಡಿ ಪೊಲೀಸರು 'ತನಿಖೆ' ಶುರು ಹಚ್ಚಿಕೊಂಡಿದ್ದಾರೆ. ಅದಿರು ಕಳ್ಳರ ಮೇಲೆ ಕೇಸು ಜಡಿದ ಡಿಸಿಎಫ್ ಗೋಕುಲರ ಅಮಾನತ್ತಿಗೆ ಪ್ರಯತ್ನಿಸಿ ಸಿಕ್ಕಿಬಿದ್ದ ಯಡ್ಡಿಯ ಮಂತ್ರಿಗಳು ಈಗ ಎಸಿಎಫ್ ನರೇಂದ್ರ ಹಿತ್ತಲಮಕ್ಕಿಯನ್ನು 1000 ಕಿ.ಮೀ. ದೂರದ ಬೀದರ್‌ಗೆ ವರ್ಗಾಯಿಸಿ ಸೇಡು ತೀರಿಸಿಕೊಂಡಿದೆ. ಈ ಎಸಿಎಫ್ ಸಾಹೇಬರ ನಿರ್ದೇಶನದಂತೆ ಪೊಲೀಸರಿಗೆ ಕಂಪ್ಲೇಂಟು ಕೊಟ್ಟ ಫಿರ್ಯಾದುದಾರ!

ಎಂಥ ವಿಪರ್ಯಾಸ ನೋಡಿ. ನಾಲ್ಕು ತಿಂಗಳ ಹಿಂದೆಯೇ ಲೋಕಾಯುಕ್ತರೇ ಬೇಲೇಕೇರಿಗೆ ಬಳ್ಳಾರಿ ಕಡೆಯಿಂದ ಅಕ್ರಮ ಅದಿರು ಬರುತ್ತಿದೆ; ಭರ್ಜರಿ ಗೋಲ್‌ಮಾಲ್ ಆಗುತ್ತಿದೆ. ಸಿಐಡಿ ತನಿಖೆ ನಡೆಸಿ ಎಂದು ಸರ್ಕಾರವನ್ನು ಕೋರಿದ್ದರು. ಆಗ ಬುದ್ಧಿಪೂರ್ವಕವಾಗೇ ಸುಮ್ಮನಿದ್ದ ಬಿಜೆಪಿ ಸರ್ಕಾರದ ಪ್ರಭೃತಿಗಳು ಈಗ ಏಕಾಏಕಿ ಸಿಐಡಿ ತನಿಖೆಯ ನಾಟಕ ಆಡುತ್ತಿದ್ದಾರೆ. ಕೊಳ್ಳೆ ಹೊಡೆದಾದ ಮೇಲೆ ದಿಡ್ಡಿ ಬಾಗಿಲು ಹಾಕಿದರು ಅಂತಾರಲ್ಲ ಹಾಗಿದೆ ಯಡ್ಡಿ ಅಡ್ಡ ಕಸುಬು. ಲೋಕಾಯುಕ್ತದವರು ಅಕ್ರಮ ಅದಿರು ಸೀಜು ಮಾಡಿದ ಮೇಲೆ, ಆ ಅದಿರನ್ನು ರಫ್ತುದಾರ ರೌಡಿಗಳು ಕಳ್ಳ ಸಾಗಾಣಿಕೆ ಮಾಡಿದ ಮೇಲೆ, ಆ ಖದೀಮರ ಮೇಲೆ ಅರಣ್ಯ ಇಲಾಖೆ ಕಂಪ್ಲೇಂಟು ಕೊಟ್ಟ ಮೇಲೆ, ಇದೆಲ್ಲ ಲೋಕಾಯುಕ್ತದವರು ಬಹಿರಂಗಪಡಿಸಿದ ಮೇಲೆ, ಇದಕ್ಕೆ ಬೇಸತ್ತು ಲೋಕಾಯುಕ್ತ ಸಂತೋಷ ಹೆಗ್ಡೆಯೇ ರಾಜೀನಾಮೆ ಬಿಸಾಡಿದ ಮೇಲೆ ಯಡ್ಡಿ ಸರ್ಕಾರ ಸಿಐಡಿ ತನಿಖೆಗೆ ಆದೇಶ ಮಾಡಿದೆ!

ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿವಂತಿದೆ ಯಡ್ಡಿಯ ಕಳ್ಳಾಟಗಳೆಲ್ಲ! ಕೆಲಸಕ್ಕೆ ಬಾರದ ಸಿಐಡಿ ತನಿಖೆಯ ನಾಟಕದ ಮುಖ್ಯ ಉದ್ದೇಶವೇ 11 ಅದಿರು ಕಳ್ಳ ಎಕ್ಸ್‌ಪೋರ್ಟ್ ಕಂಪನಿಗಳನ್ನು ರಕ್ಷಿಸುವುದು; ಆ ಚೋರರ ಬೆನ್ನಿಗೆ ನಿಂತಿರುವ ಆದಿರು ಲಾಬಿಯ ಡಾನ್ ಡಾಕೂಗಳಾದ ರೆಡ್ಡಿಗಳ ಮುಖ ಉಳಿಸುವುದಕ್ಕೆ, ತನ್ಮೂಲಕ ತನ್ನ ವ್ಯಾಮೋಹದ ಸಿಎಂ ಪೀಠ ಬಚಾಯಿಸಿಕೊಳ್ಳುವುದಕ್ಕಷ್ಟೇ ಯಡ್ಡಿ ಸಿಐಡಿ ತನಿಖೆಯ ಜೂಟಾಟ ಆಡುತ್ತಿದ್ದಾರೆ!

ಕಸ್ಟಮ್ಸ್ ಕಿತಾಪತಿ

ಈ ಮಧ್ಯೆ ಸೀಮಾಸುಂಕ (ಕಸ್ಟಮ್ಸ್) ಇಲಾಖೆ ಅದಿರು ಕಳ್ಳರಿಗೆ ಅನುಕೂಲವಾಗುವಂಥ ಅವಾಂತರ ಒಂದನ್ನು ಸೃಷ್ಟಿಸಿದೆ. ಕೇಂದ್ರ ಸರ್ಕಾರದ ಈ ಕಸ್ಟಮ್ಸ್ ಇಲಾಖೆಯ ಧನ ದಾಹಿಗಳು ಲಾಗಾಯ್ತಿನಿಂದಲೂ ಬೇಲೇಕೇರಿ ಬಂದರಿನ ಅದಿರು ಮಾಫಿಯಾದ ಮೋಸ-ವಂಚನೆ-ತೆರಿಗೆ ತಪ್ಪಿಸುವ ದಗಲುಬಾಜಿತನಕ್ಕೆ ನೆರವಾಗಿ ಬಕ್ಷೀಸು ಪಡೆಯುತ್ತಲೇ ಬಂದಿದ್ದಾರೆ. ಉತ್ತಮ ದರ್ಜೆಯ ಅದಿರನ್ನು ಕಳಪೆ ದರ್ಜೆಯದೆಂದು ಟೆಸ್ಟಿಂಗ್ ರಿಪೋರ್ಟ್ ಕೊಟ್ಟು ವಿದೇಶಕ್ಕೆ ರಫ್ತು ಮಾಡಲು ಕಸ್ಟಮ್ಸ್ ಅಧಿಕಾರಿಗಳು ದೋ ನಂಬರ್ ಅದಿರು ದಂಧೆದಾರರಿಗೆ ಅವಕಾಶ ಕೊಡುತ್ತಿದ್ದಾರೆ. ಇದೊಂದು ಕೋಟ್ಯಂತರ ರೂಪಾಯಿ ತೆರಿಗೆ ವಂಚಿಸುವ ಜಾಲ. ಇದರದೇ ಪ್ರತ್ಯೇಕ ಪುರಾಣವಿದೆ.

ಈ ಕಸ್ಟಮ್ಸ್ ಇಲಾಖೆಯವರು ಬೇಲೇಕೇರಿ ಅದಿರು ಕಳ್ಳಸಾಗಾಣಿಕೆಯ ಹಗರಣದಲ್ಲಿ ಪ್ರಮುಖ ಆರೋಪಿಗಳು! ಅರಣ್ಯ ಇಲಾಖೆ-ಲೋಕಾಯುಕ್ತರು ಮುಟ್ಟುಗೋಲು ಹಾಕಿದ ಅದಿರನ್ನು ರಫ್ತು ಮಾಡದಂತೆ ಸದ್ರಿ ಕಸ್ಟಮ್ಸ್‌ನವರಿಗೆ ಮೊದಲೇ ಹೇಳಿದ್ದರು. ಆದರೆ ಅದಿರು ಲಾಬಿಯಲ್ಲಿರುವ ಕಸ್ಟಮ್ಸ್ ಅಧಿಕಾರಿಗಳು ಇದ್ಯಾವುದಕ್ಕೂ ಕೇರ್ ಮಾಡಲಿಲ್ಲ. ತಮ್ಮದು ಕೇಂದ್ರ ಸರ್ಕಾರದ ಇಲಾಖೆ-ಲೋಕಾಯುಕ್ತರಿಗೆ ತಮ್ಮ ಮೇಲೆ ಯಾವುದೇ ಹಕ್ಕಿಲ್ಲವೆಂಬ ಅಹಂಕಾರ ಈ ಕಳ್ಳ ಕಸ್ಟಮ್ಸ್‌ನವರಿಗೆ. ಈ ಸೊಕ್ಕಿನಲ್ಲೇ ಕಸ್ಟಮ್ಸ್ ಬೇಲೇಕೇರಿ ಅಧೀಕ್ಷಕ, ಕಾರವಾರದ ಕಸ್ಟಮ್ಸ್ ಅಸಿಸ್ಟೆಂಟ್ ಕಮಿಷನರ್‌ಗಳು ಬರೋಬ್ಬರಿ 5 ಲಕ್ಷ ಮೆಟ್ರಿಕ್ ಟನ್ ಅಕ್ರಮ ಅದಿರು ಚೀನಾ-ಇಂಡೋನೇಷಿಯಾಕ್ಕೆ ಏಕಪಕ್ಷೀಯವಾಗಿ ಕಳಿಸಿ ಸಿಕ್ಕಿಬಿದ್ದಿದ್ದಾರೆ.

ಹಾಗೆ ನೋಡಿದರೆ ಅದಿರು ಕದ್ದು ಸಾಗಿಸಿದ ಎಕ್ಸ್‌ಪೋರ್ಟ್ ಕಂಪೆನಿಗಳಿಗಿಂತ ಗುರುತರವಾದ ಅಪರಾಧ ಕಸ್ಟಮ್ಸ್ ಇಲಾಖೆಯ ಖದೀಮ ಅಧಿಕಾರಿಗಳದು. ಇದೊಂದು ಕಳ್ಳ ಅದಿರು-ಕೋರ್ಟಿನಲ್ಲಿ ಕೇಸಾಕಿ ಕರ್ನಾಟಕದ ಲೋಕಾಯುಕ್ತರು ನಿಷ್ಠುರವಾಗಿ ಈ ಕೇಸು ಪರಿಗಣಿಸಿದ್ದಾರೆ... ಎಂಬುದೆಲ್ಲ ಗೊತ್ತಿದ್ದೂ ಬೇಲೇಕೇರಿ ಮತ್ತು




ಸಿಬಿಐನಿಂದಷ್ಟೇ ಸಾಧ್ಯ!

ಉತ್ತರ ಕನ್ನಡದ ಕಾರವಾರದ ಬೈತಖೋಲ್ ಬಂದರು ಮತ್ತು ಅಂಕೋಲದ ಬೇಲೇಕೇರಿ ಬಂದರಿನಲ್ಲಿ ನಡೆದಿರುವ ಕಳ್ಳ ಅದಿರು ರಫ್ತು ವಹಿವಾಟು ಸಣ್ಣ-ಸಾಮಾನ್ಯ ಕರ್ಮಕಾಂಡವಲ್ಲ! ಇದೊಂದು ಬರೋಬ್ಬರಿ 1750 ಕೋಟಿ ರೂ.ಗಳ ಹಗಲು ದರೋಡೆ ಸ್ಕ್ಯಾಂಡಲ್!! ಕಾರವಾರ ಬಂದರಿನಿಂದ 2009 ನವೆಂಬರ್‌ದಿಂದ 2010 ಫೆಬ್ರವರಿತನಕದ ಅವಧಿಯಲ್ಲಿ 6,62,953 ಮೆಟ್ರಿಕ್ ಟನ್ ಅದಿರು ಉಳಿದಿತ್ತು, ಹಾಗೆಯೇ ಇದೇ ಅವಧಿಯಲ್ಲಿ ಬೇಲೇಕೇರಿ ಬಂದರಿಂದ 40,28,256 ಮೆ.ಟನ್ ಅದಿರು ರಫ್ತಾಗಿದ್ದರೆ, ಬಂದರಿನಲ್ಲಿ ರಫ್ತು ವಹಿವಾಟು ಸ್ಥಗಿತವಾದಾಗ 8,52,034 ಮೆಟ್ರಿಕ್ ಟನ್ ಅದಿರಿತ್ತು, ಎರಡೂ ಬಂದರಿನಲ್ಲಿ ನಾಲ್ಕು ತಿಂಗಳಲ್ಲಿ ಒಟ್ಟು 57,17,379 ಮೆಟ್ರಿಕ್ ಟನ್ ಅದಿರು ವ್ಯವಹಾರವಾಗಿದೆ ಎಂದಾಯ್ತು,

ಆದರೆ ಸರ್ಕಾರ ಅನುಮತಿ ನೀಡಿದ್ದು ಬರೀ 21,85,452 ಮೆ. ಟನ್ ಅದಿರು ಸಾಗಾಣಿಕೆ-ರಫ್ತಿಗೆ. ಅಂದರೆ ಈ ಬಂದರುಗಳಿಂದ ಕಳೆದು ರಫ್ತು ವರ್ಷದಲ್ಲಿ 35,31918 ಮೆ.ಟನ್ ಅದಿರು ಕಳ್ಳ ಸಾಗಾಣಿಕೆಯಾಗಿದೆ ಎಂಬುದನ್ನು ಸರ್ಕಾರಿ ಅಂಕಿ-ಅಂಶಗಳೇ ದೃಢಪಡಿಸುತ್ತವೆ. ಲೋಕಾಯುಕ್ತ ನ್ಯಾ ಸಂತೋಷ್ ಹೆಗ್ಡೆ ಉತ್ತರ ಕನ್ನಡದ ಎರಡು ಬಂದರಿಂದ 35 ಲಕ್ಷ ಅದಿರು ಕಳ್ಳ ಸಾಗಾಣಿಕೆ ಆಗಿದೆಯೆಂದು ನಾಲ್ಕೈದು ತಿಂಗಳ ಹಿಂದೆಯೇ ಹೇಳಿದ್ದರು. ಆಗ ಆಳುವವರು-ವಿರೋಧ ಪಕ್ಷದವರು-ಹೋರಾಟಗಾರರ್‍ಯಾರೂ ಇದನ್ನು ಅಷ್ಟು ಗಂಭೀರವಾಗಿ ಪರಿಗಣಿಸಿರಲಿಲ್ಲ.

ಲೋಕಾಯುಕ್ತ ಸಂತೋಷ್ ಹೆಗ್ಡೆ ರಾಜೀನಾಮೆ ಸುತ್ತ ಬೇಲೇಕೇರಿ ಅದಿರು ಕಳ್ಳ ಸಾಗಾಣಿಕೆ ಕತೆ ಗಿರಕಿ ಹೊಡೆಯುತ್ತಿರುವ ಈ ಹೊತ್ತಲ್ಲಿ ಉತ್ತರ ಕನ್ನಡದ ಜಿಲ್ಲಾಧಿಕಾರಿ ಅದಿರು ಪ್ರಕರಣ ಒಂದಕ್ಕೆ ಸಂಬಂಧಿಸಿದ ಕೇಸ್‌ನಲ್ಲಿ ಇದೇ ಅಂಕಿ-ಸಂಖ್ಯೆ ಹೈಕೋರ್ಟಿಗೆ ಅಫಿಡವಿತ್ ನಲ್ಲಿ ಒಪ್ಪಿಸಿದೆ. ಅಲ್ಲಿಗೆ ಉತ್ತರ ಕನ್ನಡದ ಎರಡೂ ಬಂದರಿನಲ್ಲಿ 35,31,918 ಮೆ. ಟನ್ ಅದಿರು ಕಳ್ಳ ಸಾಗಾಣಿಕೆ ಆಗಿದೆಯೆಂದು ಯಡ್ಡಿಯ ದೇಶಭಕ್ತರ ಸರ್ಕಾರವೇ ಒಪ್ಪಿಕೊಂಡಂತಾಯ್ತು! ಯಡ್ಡಿ ಸರ್ಕಾರ ನಿಯಂತ್ರಿಸುತ್ತಿರುವ 'ಮಿರಾಕಲ್ ಮ್ಯಾನ್'ಗಳ ಅದಿರು ಲೂಟಿ ಲಫಡಾ ಸಾಬೀತಾದಂತಾಯ್ತು!



ಅದಿರು ಮಾಫಿಯಾದ ಪಾತಕದಿಂದ ಉತ್ತರ ಕನ್ನಡದಲ್ಲಾಗಿರುವ ಅನಾಹುತ ಒಂದೆರಡಲ್ಲ. ಪ್ರತಿ ದಿನ ಬಳ್ಳಾರಿ ಕಡೆಯಿಂದ ಬೇಲೇಕೇರಿ ಬಂದರಿಗೆ 1000 ಅದಿರು ಲಾರಿ ಮತ್ತು ಕಾರವಾರಕ್ಕೆ 400 ಲಾರಿಗಷ್ಟೇ ಬರಲು ಪರ್ಮಿಟ್ ಕೊಡಲಾಗಿತ್ತು. ಜಿಲ್ಲಾಡಳಿತ ಈ ಆದೇಶವನ್ನು ಕೇರ್ ಮಾಡದೆ ಪ್ರತಿ ದಿನ 4000 ಅದಿರು ಲಾರಿಗಳು ಕಾರವಾರ-ಅಂಕೋಲೆಗೆ ನುಗ್ಗಿ ಬರುತ್ತಿದ್ದವು. ಈ ಲಾರಿಗಳ ದಟ್ಟಣೆಯಿಂದ ಜಿಲ್ಲೆಯ ಜನಜೀವನ ಮೇಲಾದ ಘೋರ ಪರಿಣಾಮ ಹೇಳತೀರದು. ನೂರಾರು ಜನರು ಈ ಅದಿರು ಲಾರಿಗೆ ಬಲಿಯಾದರು. ರಸ್ತೆಗಳು ನರಕದಂತಾಗಿ ಹೋಗಿದ್ದವು. ಅತ್ತ ಬೇಲೇಕೇರಿ- ಕಾರವಾರದಲ್ಲಂತೂ ಅದಿರು ಧೂಳಿಂದ ಪರಿಸರ ಸಂಪೂರ್ಣ ವಿಷವಾಗಿ ಹೋಯ್ತು, ಕುಡಿವ ನೀರಿನ ಬಾವಿಗಳು ಮಲೀನವಾದವು; ಗಾಳಿ

ಾರ-ಮಂಗಳೂರಿನ ಕಸ್ಟಮ್ಸ್ ಅಧಿಕಾರಿಗಳು ೀಶಕ್ಕೆ 'ವಿವಾದಾತ್ಮಕ' ಅದಿರು ಸಾಗಿಸಿದ್ದಾರೆ. ದಲ್ಲೂ ಮುಖ್ಯವಾಗಿ ಈ ಸೀಜ್ಡ್ ಅದಿರು ರದೇಶಕ್ಕೆ ರಫ್ತುಮಾಡಲು ಅವಕಾಶ ಕೊಡ ಯೆಂದು ಅರಣ್ಯ ಇಲಾಖೆ-ಲೋಕಾಯುಕ್ತ ರಿಕೆ ಕೊಟ್ಟಾಗಲೂ ಕಸ್ಟಮ್ಸ್‌ನವರು ಬುದ್ಧಿ ರ್ವಕವಾಗೇ ಅದನ್ನು ಕಡೆಗಣಿಸಿ ಎಂಜಲು ಬಾಚಿದ್ದಾರೆ.

ದಗಲ್ಬಾಜಿ ದಂಧೆಗೆ ಅವಕಾಶ ಕೊಟ್ಟ ೋಪ ಕಳಂಕದಿಂದ ಪಾರಾಗಲು ಕಸ್ಟಮ್ಸ್ ಖೆಯ ಅಡ್ಡ ಕಸುಬಿಗಳು ಸಲ್ಲದ ಸಬೂಬು ುತ್ತಿದ್ದಾರೆ! ಅಕ್ರಮ ಅದಿರು ಪ್ರಕರಣದ ಾಧಿಕಾರಿ ಅಂಕೋಲದ ಎಸಿಎಫ್‌ಗೆ ಬೇಲೇ ಯ ಕಸ್ಟಮ್ಸ್‌ನ ಅಧಿಕಪ್ರಸಂಗಿ ಅಧೀಕ್ಷಕ ್ 21, 2010ರಂದು ಪತ್ರವೊಂದನ್ನು ು-"ಸೀಜ್ಡ್ ಅದಿರು ಅರಣ್ಯ ಉತ್ಪನ್ನವೇ ೆಂದು" ವಾದಿಸಿದ್ದಾನೆ. ಈತ ಆ ಪತ್ರದಲ್ಲಿ ಎಷ್ಟು ದರವಾಗಿ ಸುಳ್ಳುಗಳನ್ನು ಬರೆದಿದ್ದಾರೆಂದರೆ -ಸಾಲುಗಳೂ ಅದಿರು ಕಳ್ಳಸಾಗಣೆದಾರರ ಪರ ಬತ್ತು ಮಾಡುವಂತಿದೆ.

ಅರಣ್ಯ ಇಲಾಖೆ ಬೇಲೇಕೇರಿ ಬಂದರಿನಲ್ಲಿ ಅಕ್ರಮ ನ್ನು ಮಾರ್ಚ್ 26 ಮತ್ತು 29ರಂದು ಸೀಜ್ ಿದ ಸಂದರ್ಭದಲ್ಲಿ ಪಂಚನಾಮೆ ಸಿದ್ಧಪಡಿಸಿತ್ತು. ಆದರಲ್ಲಿ ಕ್ಷ ಮೆಟ್ರಿಕ್ ಟನ್ ಅದಿರು ಮುಟ್ಟುಗೋಲು ಕೊಳ್ಳಲಾಗಿದೆ ಎಂದು ನಮೂದಿಸಲಾಗಿದೆ. ಆದರೆ ್ಸ್ ಅಧಿಕಾರಿಗಳು ಇದು ಶುದ್ಧ ಸುಳ್ಳು-ಅಂದು ರ್ಟ್ ದಾಖಲೆಗಳ ಪ್ರಕಾರ ಬೇಲೇಕೇರಿ ಬಂದರಲ್ಲಿ ು 2,85,050.22 ಮೆಟ್ರಿಕ್ ಟನ್ ಅದಿರಷ್ಟೇ ದು ವಾದಿಸುತ್ತಾರೆ. ಎಸಿಎಫ್ ಪತ್ರದಲ್ಲಿ ಸೀಜ್ಡ್ ಾನಲ್ಲಿ ಎಷ್ಟೆಷ್ಟು, ಯಾವ್ಯಾವ ರಫ್ತುದಾರನೆಂದು ಹೇಳಿಲ್ಲ, ! ಸೀಜ್ಡ್ ಅದಿರಿನಲ್ಲಿ ಅರಣ್ಯ ಇಲಾಖೆಯ ಜಾಗದಿಂದ ಷ್ಟೆಂದು ಹೇಳಿಲ್ಲ ಎಂದು ಕಸ್ಟಮ್ಸ್ ಸೂಪರಿಂಟೆಂಡೆಂಟ್ ಖೆಪ ಮುಂದೊಡ್ಡಿದ್ದಾನೆ. ಅದಿರು ಕಳ್ಳ ಸಾಗಾಣಿಕೆದಾರರ ರ್ಥಿಸುವ ಮತ್ತು ತಮ್ಮ ತಪ್ಪನ್ನು ಮುಚ್ಚಿಕೊಳ್ಳುವ ಪ 'ಅಡುಗೋಲಜ್ಜಿ ಕತೆ' ಕಸ್ಟಮ್ಸ್ ಅಧೀಕ್ಷಕ ಬರು ಪತ್ರದಲ್ಲಿ ಹೇಳಿದ್ದಾರೆ. ಅರಣ್ಯ ಇಲಾಖೆಯವರು


ಬೇಲೇಕೇರಿಯಲ್ಲಿ ಸಿಬಿಐ ತಂಡ

ಮಾಡಿದ ಅದಿರನ್ನು ಎಕ್ಸ್‌ಪರ್ಟ್ ಅಳತೆದಾರರಿಂದ ನ ಮಾಡಿಸಿಲ್ಲವಂತೆ. ಹಾಗೆಯೇ ಮುಟ್ಟುಗೋಲು ೊಂಡ ಅದಿರನ್ನು ಕಸ್ಟಮ್ಸ್‌ನವರು ರಫ್ತು ಮಾಡಲೇ ಂತೆ. ಒಂದಿಷ್ಟು ಅದಿರನ್ನು ಕೋರ್ಟ್ ಪರವಾನಗಿ ವಿದೇಶಕ್ಕೆ ಕಳಿಸಲಾಗಿದೆಯಂತೆ....

! ನಂತರ ಕಸ್ಟಮ್ಸ್ ಕಾನೂನಿನ ಪಾಂಡಿತ್ಯ ಪ್ರದರ್ಶನ ಲ್ಲಿ ತೋರಿಸಲಾಗಿದೆ. ವಿದೇಶಿ ವ್ಯಾಪಾರ ನೀತಿಯಂತೆ ರಿ ಏಜೆನ್ಸಿಯಿಂದ ರಫ್ತಿಗೆಂದು ತಂದ ಸರಕನ್ನು ಡಿಯಲು ಅಥವಾ ವಿಳಂಬ ಮಾಡಲು ರಾಜ್ಯ ಕ್ಕೆ ಅಧಿಕಾರವಿಲ್ಲ, ಬೇಲೇಕೇರಿ ಬಂದರು ಕಸ್ಟಮ್ಸ್‌ನ ಿತ ಪ್ರದೇಶ. ಇಲ್ಲಿಗೆ ಒಮ್ಮೆ ಬಂದ ಸರಕನ್ನು ರಫ್ತು ದಂತೆ ತಡೆಹಿಡಿಯಲು ಸಾಧ್ಯವಿಲ್ಲ, ಕೇಂದ್ರ ಸರ್ಕಾರ

heaps. On 20.03.2010 there were more than 60 heaps of iron ore at Belekeri port. Now your claim of seizure of entire iron ore at Belekeri port is contrary to your marked seizure and not acceptable because no authority can seize the cargo existed on back date of more than 2 months. Moreover entire quantity of iron ore present on 20.03.2010 is not a forest produce and you have not segregated the forest produce from mineral produce. So there could not be any reasonable belief of violation of forest rules on entire cargo stocked in the port as on 20.03.2010. So entire cargo can not be confiscated department to ensure that forest laws are not violated ...

Customs notified area and to collect the forest development tax at the point of origin where the forest land has given on lease. It is suggested that minutes of the meeting held with Principal Secretary to Forest, Ecology and environment and with other department on 13.04.2010 has to be enforced strictly.

Yours faithfully,

Superintendent of Customs
Custom House: Belekeri.

ಕಸ್ಟಮ್ಸ್ ಅಧಿಕಾರಿ ಬರೆದಿರುವ ಪತ್ರ

ನಿಷೇಧಿಸಿರುವ ವಸ್ತುಗಳನ್ನು ಮಾತ್ರ ರಫ್ತು ಮಾಡದೇ ತಡೆಹಿಡಿಯಬಹುದು. ಕಬ್ಬಿಣದ ಅದಿರು ಕೇಂದ್ರದ ನಿಷೇಧಿತ ಸರಕಲ್ಲ... ಎಂದೆಲ್ಲ ಕಸ್ಟಮ್ಸ್ ಅಧೀಕ್ಷಕ ಕಾಯ್ದೆ ಮಂಡಿಸಿದ್ದಾರೆ. ಅಂದರೆ ಬಂದರು ಪ್ರದೇಶಕ್ಕೆ ಅಕ್ರಮ ಅದಿರು ಬಂದರೆ ಸಾಕು, ಅದು ಕಳ್ಳ ಅದಿರೇ, ಕಾನೂನು ಬದ್ಧವೇ ಎಂದು ನೋಡದೆ ಈ ಅಧಿಕ ಪ್ರಸಂಗಿ ಅಧೀಕ್ಷಕ ರಫ್ತು ಮಾಡುತ್ತಾನೆಂದಾಯ್ತಲ್ಲವೇ?

ಕಾನೂನನ್ನು ತನ್ನ ತಲೆ ಉಳಿಸಿಕೊಳ್ಳಲು ಬೇಕಾದಂತೆ ಅದಿರು ಕಳ್ಳರ ಬಚಾಯಿಸಲು ಬೇಕಾದಂತೆ ಅರ್ಥೈಸುವ ಈ ಅಧೀಕ್ಷಕ ಲೋಕಾಯುಕ್ತರು ಅದಿರನ್ನೇಕೆ ಸೀಜ್ ಮಾಡಿ ರಫ್ತು ಮಾಡದಂತೆ ಹೇಳಿದ್ದಾರೆಂಬ ಮೂಲಭೂತ ಅಂಶವನ್ನೇ ಮರೆಮಾಚಿದ್ದಾನೆ! ಅರಣ್ಯ ಇಲಾಖೆ ಬಂದರಿನಲ್ಲಿ ಅದಿರು ಸೀಜ್ ಮಾಡಿದ್ದೇ ಅದಕ್ಕೆ ರಫ್ತಾಗುವ ಪರವಾನಗಿ ಇಲ್ಲವೆಂಬ ಕಾರಣಕ್ಕೆ ಅಲ್ಲದೇ, ಬಂದರು ಏರಿಯಾಕ್ಕೆ ಬಂದ ಮಾತ್ರಕ್ಕೆ ಸರಕು ರಫ್ತು ಮಾಡಲೇ ಬೇಕೆಂದೇನೂ ನಿಯಮವಿಲ್ಲ, ಕಾನೂನಿನ ಅಡೆತಡೆ, ನ್ಯಾಯಾಲಯದ ತಡೆಯಾಜ್ಞೆಗಳಿದ್ದರೆ ಅಂತ ಸರಕು ವಿವಾದ ಮುಗಿಯುವವರೆಗೂ ರಫ್ತು ಮಾಡುವಂತಿಲ್ಲ!

ಎಲ್ಲಕ್ಕಿಂತ ಮಹತ್ವದ ಸುಳ್ಳು ಯಾವುದೆಂದರೆ ಬಂದರಿಗೆ ಬರುವ ಮೊದಲೇ ಅದಿರು ಅಕ್ರಮವೇ-ಸಕ್ರಮವೇ ಎಂದು ಅರಣ್ಯ ಇಲಾಖಾಧಿಕಾರಿಗಳು ನಿಗಾವಹಿಸಬೇಕಿತ್ತೆಂದು ಸೀಮಾಸುಂಕದ ಸೂಪರಿಂಟೆಂಡೆಂಟ್ ಆಕ್ಷೇಪ ಎತ್ತಿದ್ದಾನೆ. ಇದನ್ನೇ ಬಂದರು ಮಂತ್ರಿ ಪಾಲೇಮಾರ್ ಬೇಲೇಕೇರಿ ಬಂದರಿನಲ್ಲಿ ನಿಂತು ಒತ್ತಿ ಒತ್ತಿ ಹೇಳಿ ಅರಣ್ಯ ಅಧಿಕಾರಿಗಳನ್ನು ಮೂದಲಿಸಿದ್ದರು. ಮಂತ್ರಿ ಪಾಲೇಮಾರ್ ಮತ್ತು ಕಸ್ಟಮ್ಸ್ ಅಧಿಕಾರಿಯ ಮಾತುಗಳ 'ಧ್ವನಿ' ಒಂದೇ ಆಗಿರುವುದರ ಹಿಂದೆ ಅದಿರು ಮಾಫಿಯಾದ ಮಸಲತ್ತಿರುವ ಅನುಮಾನ ಮೂಡಿಸದೇ? ಇಂಥ ಅಡ್ನಾಡಿ ಪತ್ರವನ್ನು ಕಸ್ಟಮ್ಸ್‌ನವರಿಂದ ಅದಿರು ಕಳ್ಳಸಾಗಾಣಿಕೆ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಂಡಿರುವ ಅರಣ್ಯಾಧಿಕಾರಗಳಿಗೆ ಬರೆಯಿಸಿ 'ಬೆದರಿಸುವುದು' ಅದಿರು ಮಾಫಿಯಾಕ್ಕೆ ದೊಡ್ಡ ಕೆಲಸವೇನಲ್ಲ.

ಕಸ್ಟಮ್ಸ್ ಅಧಿಕಾರಿಗಳ ಅವಾಂತರ, ಅದಿರು ಕಳ್ಳರ ಗೋಲ್‌ಮಾಲ್ ನೋಡಿದರೆ ಸದ್ರಿ ಪತ್ರದ ಹಿಂದೆ ಅದಿರು ಮಾಫಿಯಾದ ಕೈವಾಡ ಅಡಗಿರುವ ಸಂಶಯ ಕಾಡುತ್ತದೆ. ಕಸ್ಟಮ್ಸ್‌ನವರು ಅರಣ್ಯ ಅಧಿಕಾರಿಗಳು ಅಕ್ರಮ ಅದಿರು ಸೀಜ್ ಮಾಡಿದ ದಿನ ಬಂದರಲ್ಲಿ ಕೇವಲ ಎರಡೇ ಎರಡು ಲಕ್ಷ ಮೆಟ್ರಿಕ್ ಟನ್ ಅದಿರಿತ್ತೆನ್ನುತ್ತಾರೆ ಸರಿ! 2 ಲಕ್ಷವೇ ಆಗಿರಲಿ, ಅರಣ್ಯ ಅಧಿಕಾರಿಗಳ ಪ್ರಕಾರ 5 ಲಕ್ಷವೇ ಆಗಿರಲಿ ಕಳ್ಳತನ ಕಳ್ಳತನವೇ! ಬೊಕ್ಕಸಕ್ಕೆ ಹಾನಿ ಹಾನಿಯೇ!! ತೆರೆ ವಂಚನೆ ವಂಚನೆಯೇ ತಾನೆ? ಅದಿರು ಲಾಬಿಯವರು ಕ್ರಿಮಿನಲ್‌ಗಳೇ ತಾನೇ?

• ವಿವೇಕಾನಂದ ತಾಂಡೇಲ


ತವಾಗಿ ಹೃದಯ ಸಂಬಂಧಿ. -ಕ್ಷಯ-ಶ್ವಾಸಕೋಶ ಡ್ಯಾಮೇಜಿನಿಂದ ಹಲವು ಹಾಸಿಗೆ ಹಿಡಿದರು. ಮೀನುಗಾರ ಾಧಾರ ಕಸುಬಿಗೆ ಕಲ್ಲು ಬಿತ್ತು, ಗಾರಿಕೆ-ಬಂದರುಗಳನ್ನು ಅದಿರು ಮಾಫಿಯಾ ಗಿರಿಯಿಂದ ಕಬ್ಜಾ ಮಾಡಿಕೊಂಡು ಬಡಬೆಸ್ತರ ಾಲಾಗಿಸಿತು.

ಷ್ಟೆಲ್ಲ ಅಕ್ರಮ-ಅನಾಹುತ-ಅವಾಂತರವಾದರೂ ಖೂಳರಿಗೇನೂ ಅನ್ನಿಸಲೇ ಇಲ್ಲ! ಯುಕ್ತರ ರಾಜೀನಾಮೆ ನಂತರ ಬೇಲೇಕೇರಿ ು ಸುದ್ದಿಯಾಗುತ್ತಿದೆ. ಈ ಬೇಲೇಕೇರಿ ಬಂದರು ಪಕ್ಕದ ಕಾರವಾರ ಬಂದರಿನಲ್ಲಾಗಿರುವ 1750 ಸ್ಕ್ಯಾಂಡಲ್‌ನ ತನಿಖೆ ಸಿಬಿಐಯಿಂದ ಸಾಧ್ಯವೇ ಈ ಹಗರಣದಲ್ಲಿ ಕೇಂದ್ರದ ಕಸ್ಟಮ್ಸ್ ಾಧಿಕಾರಿಗಳೂ ಶಾಮೀಲಾಗಿದ್ದಾರೆ. ಸರೇ ಕಳ್ಳ ಅದಿರನ್ನು ಗೊತ್ತಿದ್ದೂ ಗೊತ್ತಿದ್ದೂ ಕಳಿಸಿ, ತಿಸಿ ತುಂಬಿಕೊಂಡಿದ್ದಾರೆ. ರಾಜ್ಯ ಸರ್ಕಾರದ ಸರದಾರರಾದ ರೆಡ್ಡೀಸ್ ಎಂಬ ಅದಿರು ಮಾಫಿಯಾ ಡಾನ್‌ಗಳು ಈ ಹಗರಣದ ಹಿಂದಿದ್ದಾರೆ.

ಇದೆಲ್ಲ ನೋಡಿದರೆ ಬೇಲೇಕೇರಿ-ಕಾರವಾರ ಬಂದರುಗಳ ಅದಿರು ಕಳ್ಳ ಸಾಗಾಣಿಕೆ ಕೇಸ್ ತನಿಖೆ ಸಿಬಿಐನಿಂದ ಮಾತ್ರ ಸಾಧ್ಯ ಅನ್ನಿಸುತ್ತದೆ! ಲೋಕಾಯುಕ್ತರ ರಾಜೀನಾಮೆ ರಾಷ್ಟ್ರೀಯ ದುರಂತವೆಂಬಂತೆ ಚಿತ್ರಿಸಿ ರಾಜಕೀಯ ಮಾಡುತ್ತಿರುವ ವಿರೋಧ ಪಕ್ಷದ ಕಾಂಗ್ರೆಸ್-ಜೆಡಿಎಸ್ ಪುಢಾರಿಗಳಿಗೇನಾದರೂ ಅದಿರು ಅವ್ಯವಹಾರದ ಬಗ್ಗೆ ಪ್ರಾಮಾಣಿಕ ಕಳಕಳಿಯಿದ್ದರೆ, ಅವರೆಲ್ಲ ಬೇಲೇಕೇರಿ ಬಂದರು ಭಾನ್ಗಡಿ ಸಿಬಿಐಗೆ ಒಪ್ಪಿಸುವಂತೆ ನೋಡಿಕೊಳ್ಳಬೇಕು. ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರವಿರುವುದರಿಂದ ರಾಜ್ಯ ಕಾಂಗ್ರೆಸಿಗರು ಸಿಬಿಐ ತನಿಖೆಗೆ ಪ್ರಯತ್ನಿಸುವುದು ಕಷ್ಟವೇನಲ್ಲ.

ಸಿಬಿಐ ತನಿಖೆಗೆ ಸಿದ್ಧವಾಗುವ ಧೈರ್ಯ ಪಾಪಪ್ರಜ್ಞೆಯ ಯಡ್ಡಿಗಂತೂ ಇಲ್ಲ ಬಿಡಿ; ವಿರೋಧ ಪಕ್ಷದವರಿಗೂ ಏಕಿಲ್ಲ? •

ಕಾರ್ಟೂನ್ ಕಾರ್ನರ್




ಲಂಕೇಶ್ ಪ್ರಕಾಶನ

ನಂ.9, ಇ.ಎ.ಟಿ.ರಸ್ತೆ, ಬಸವನಗುಡಿ, ಬೆಂಗಳೂರು-4 ಫೋನ್: 26676427

ಶೀರ್ಷಿಕೆ	ಬೆಲೆ
ನೀಲು ಕಾವ್ಯ -ಸಂಗ್ರಹ 1	150.00
ನೀಲು ಕಾವ್ಯ -ಸಂಗ್ರಹ 2	150.00
ನೀಲು ಕಾವ್ಯ -ಸಂಗ್ರಹ 3	200.00
ಚಿತ್ರ ಸಮೂಹ	90.00
ಮರೆಯುವಮುನ್ನ-ಸಂಗ್ರಹ1	150.00
ಮರೆಯುವಮುನ್ನ-ಸಂಗ್ರಹ2	150.00
ಮನಕೆ ಕಾರಂಜಿಯ ಸ್ಪರ್ಶ	150.00
ಈ ನರಕ ಈ ಪುಲಕ	125.00
ಆಟ-ಜೂಜು-ಮೋಜು!	150.00
ಟೀಕೆ-ಟಿಪ್ಪಣಿ 1	200.00
ಟೀಕೆ-ಟಿಪ್ಪಣಿ 2	200.00
ಟೀಕೆ-ಟಿಪ್ಪಣಿ 3	200.00
ಸಾಹಿತಿ-ಸಾಹಿತ್ಯ	300.00
ರೂಪಕ ಲೇಖಕರು	70.00
ಕಂಡದ್ದು ಕಂಡಹಾಗೆ	125.00
ಪ್ರಸ್ತುತ	80.00
ಹುಳಿಮಾವಿನ ಮರ	200.00
ಮುಸ್ಸಂಜೆಯ ಕಥಾ ಪ್ರಸಂಗ	250.00
ಬಿರುಕು	60.00
ಅಕ್ಕ	80.00
ಮಂಜು ಕವಿದ ಸಂಜೆ	85.00
ಉಮಾಪತಿ ಸ್ಕಾಲರ್‌ಶಿಪ್ ಯಾತ್ರೆ	70.00
ಕಲ್ಲು ಕರಗುವ ಸಮಯ	125.00
ನಾನಲ್ಲ	70.00
ಕೆರೆಯ ನೀರನು ಕೆರೆಗೆ ಚೆಲ್ಲಿ	60.00
ಉಲ್ಲಂಘನೆ	80.00
ಪಾಪದ ಹೂಗಳು	60.00
ಬಿರುಕು	40.00
ಸಂಕ್ರಾಂತಿ	45.00
ತೆರೆಗಳು	50.00
ಈಡಿಪಸ್ ಮತ್ತು ಅಂತಿಗೊನೆ	80.00
ಟಿ. ಪ್ರಸನ್ನನ ಗೃಹಸ್ಥಾಶ್ರಮ	35.00
ಗುಣಮುಖ	60.00
ಕ್ರಾಂತಿ ಬಂತು ಕ್ರಾಂತಿ	40.00
ಕಪ್ಪು ಮಲ್ಲಿಗೆ	75.00
ಕಂಡಹಾಗೆ	125.00
ದರವೇಶಿ ಕತೆಗಳು	90.00
ಬಸವರಾಜಮಾರ್ಗ	40.00
ಬೆನಜೀರ್	25.00
ಆವರಣ ಎಂಬ ವಿ-ಕೃತಿ	100.00
ಜೈಲೆಂಬ ಲೋಕದಲ್ಲಿ	75.00
ವೇದಾಂತ ರೆಜಿಮೆಂಟ್	60.00
ಕಳೆದುಕೊಂಡವಳು	45.00
ನೂರುಸ್ವರ	60.00
ಟ್ರೇನ್ ಟು ಪಾಕಿಸ್ತಾನ್	125.00
ಮಿಡತೆಗಳ ಬರವಿಗೆ....	100.00
ಡಿಸೆಂಬರ್ 13	150.00
ಮನುಸ್ಮೃತಿ	20.00
ರೈತರ ಆತ್ಮ-ಹತ್ಯೆ	10.00
ಆರೋಗ್ಯ ಮತ್ತು ಜೀವನ	125.00
ದನವಂತ್ರಿ ಚಿಕಿತ್ಸೆ	50.00
ಮುತ್ತುರಾಜನ ಮುತ್ತು	150.00
ಏಷ್ಟು ನೂರೊಂದು ನೆನಪು	150.00
ಓ ಈಳಂ	250.00
ಖೈರ್ಲಾಂಜಿ	200.00
ಕಮಲಾ ದಾಸ್ ಕಥೆಗಳು	60.00
ಮಾಂಟೊ ಕಥೆಗಳು	80.00
ಕೋಮುವಾದ	60.00
ಜಾತಿ ಪದ್ಧತಿ	125.00
ರಾಮಾಯಣ ವಿಷವೃಕ್ಷ	75.00
ಅರೇಬಿಯನ್ ನೈಟ್ಸ್	150.00
ಜಿಮ್‌ಕಾರ್ಬೆಟ್-ಶಿಕಾರಿ ಕತೆಗಳು	80.00
ಚೆಕ್‌ಪೋಸ್ಟ್	100.00
Some-ಪದ	80.00
ಗೋವು ಪವಿತ್ರ ಎಂಬ ಮಿಥ್ಯೆ	80.00
ಕರ್ಕರೆಯನ್ನು ಕೊಂದವರ್ಯಾರು?	200.00
ಅಸ್ಪೃಶ್ಯ ವಸಂತ	200.00

ಗೋಲ್‌ಮಾಲ್ ಬಿಬಿಎಂಪಿ

ಮೀನಾ ಓಡಿಸಿ ಸಿದ್ಧಯ್ಯ ಬಂದ ಬೋಗಸ್ ಬಿಲ್ಲಿಗೆ ಜೈಜೈ ಎಂದ!






ಭರತ್‌ಲಾಲ್ ಮೀನ

ಯಾರೂ ಎಣಿಸದ ರೀತಿಯಲ್ಲಿ ಬಿಬಿಎಂಪಿ ಕಮೀಶನರ್ ಭರತ್‌ಲಾಲ್ ಮೀನಾ ಎತ್ತಂಗಡಿಯಾಗಿದ್ದಾರೆ. ಆ ಜಾಗಕ್ಕೆ ಸಿದ್ಧಯ್ಯ ಬಂದು ಕೂತಿದ್ದಾರೆ. ಇದ್ದುದರಲ್ಲಿ ನಿಷ್ಠುರಿ ಅಧಿಕಾರಿ ಮೀನಾರನ್ನು ಕಿತ್ತು ಸಕಲಕಲಾ ಪ್ರವೀಣ ಸಿದ್ಧಯ್ಯನವರನ್ನು ಬಿಬಿಎಂಪಿಗೆ ತಂದದ್ದು ಮುಖ್ಯಮಂತ್ರಿ ಯಡ್ಡಿಗೆ ಇಷ್ಟವೋ ಅನಿಷ್ಟವೋ ಗೊತ್ತಿಲ್ಲ; ಆದರೆ ಮಂತ್ರಿ ಅಶೋಕ್ ಎಂಬ ದೊಣ್ಣೆ ನಾಯಕನಿಗಂತೂ ಮೀನಾರನ್ನು ಸಾಗಹಾಕದೇ ಬೇರೆ ದಾರಿಯೇ ಇರಲಿಲ್ಲ.

ಸಿದ್ಧಯ್ಯ ಮಂತ್ರಿ ಅಶೋಕರ ಪರಮಾಪ್ತ ಮತ್ತು ನಿಯತ್ತಿನ ಐಎಎಸ್ ಅಧಿಕಾರಿ ಎಂಬುದರಲ್ಲಿ ಎರಡು ಮಾತಿಲ್ಲ. ಸದ್ಯ ಹೈಕೋರ್ಟ್ ವಿಚಾರಣೆಗೆ ಸಿಲುಕಿರುವ 3548 ಕೋಟಿ ರೂಪಾಯಿಗಳ ರಾತ್ರೋರಾತ್ರಿ ಟೆಂಡರ್ ಗೋಲ್‌ಮಾಲ್ ಹಗರಣಕ್ಕೆ ಕೋರ್ಟು ವಿಧಿಸಿದ ತಡೆಯಾಜ್ಞೆ ತೆರವಾಗಲು ಇನ್ನೊಂದು ವಾರ ಬಾಕಿಯಿದೆ ಎನ್ನುವಾಗ ನಿಷ್ಠುರಿ ಮೀನಾರನ್ನು ಕಿತ್ತು ಆ ಜಾಗಕ್ಕೆ ಸಿದ್ಧಯ್ಯನವರನ್ನು ತಂದ ಅಶೋಕ್ ಹುನ್ನಾರದ ಹಿಂದೊಂದು ಕಾಣದ ಕೈಯಿದೆ.

ಅದು ಬಿಬಿಎಂಪಿ ಕಾಂಟ್ರಾಕ್ಟ್ ಮಾಫಿಯಾ. 3548 ಕೋಟಿಯ ಟೆಂಡರ್ ಅಕ್ರಮಗಳ ವಿಚಾರಣೆ ತಡೆಯಾಜ್ಞೆ ತೆರವುಗೊಳ್ಳುವುದು ಖಚಿತವಾಗುವುದಕ್ಕೂ, ಇಂಥದ್ದೇ ಬೋಗಸ್ ಬಿಲ್ ದಂಧೆಗೆ ಅನುಕೂಲಕಾರಿಯಾಗಿ ಸಿದ್ಧಯ್ಯ ಕಮೀಶನರಾಗಿ ಬರುವುದಕ್ಕೂ ಸಂಬಂಧವಿದೆ!



ಸತೀಶ್ ರೆಡ್ಡಿ

ಹಳೇ ಕಲ್ಲು ಹೊಸ ಬಿಲ್ಲು ಎಂಬುದು ಈತನಕ ಬೆಂಗಳೂರು ಪಾಲಿಕೆಯ ವಂಚಕ ಧರ್ಮವಾಗಿತ್ತು, ಈಗ ಧರ್ಮವೇ ಬದಲಾಗಿದೆ. ಹಳೇ ಕಲ್ಲು ಕೂಡ ಬೇಕಾಗಿಲ್ಲ, ಕಾಗದದ ಚೂರೇ ಸಾಕು. ಅದು ಬೋಗಸ್ ಬಿಲ್ಲು. ರಿಪೇರಿಯಾದ ಮೂರೇ ತಿಂಗಳಿಗೆ ಮತ್ತೆ ರಿಪೇರಿ, ಟಾರು ಹಾಕಿದ ಆರು ತಿಂಗಳಿಗೇ ಮತ್ತೆ ಡಾಂಬರು, ಮೋರಿ ಹೂಳೆತ್ತಿದ್ದಕ್ಕೆ, ಫುಟ್ ಪಾತಿಗೆ ಕಲ್ಲು ಜೋಡಿಸಿದ್ದಕ್ಕೆ, ಪಾರ್ಕ್ ಕಟ್ಟೆ ಕುಸಿದಿದ್ದಕ್ಕೆ, ಹಳ್ಳ ಮುಚ್ಚಿಸಿದ್ದಕ್ಕೆ, ರಸ್ತೆ ಅಗಲಗೊಳಿಸಿದ್ದೇವೆಂದು, ಎಲ್ಲೆಲ್ಲೋ ಕಟ್ಟೆ ಕಟ್ಟಿಸಿದ್ದೇವೆಂದು ... ಹೀಗೆ ಎಲ್ಲೆಲ್ಲಿ ಬೋಗಸ್ ಬಿಲ್ ಜಡಿಯಲು ಸಾಧ್ಯವೋ ಹಾಗೇ ಬಿಲ್ಲಿನ ಮೇಲೆ ಬಿಲ್ಲು ಬರೆದೂ ಬರೆದೂ ಸರಿಸುಮಾರು ಮೂರು ಸಾವಿರ ಕೋಟಿಗೂ ಅಧಿಕ ಮೊತ್ತದ ಹಗಲು ದರೋಡೆಯೊಂದನ್ನು ಬಿಬಿಎಂಪಿಯ ಬಕಾಸುರರು ಸದ್ದಿಲ್ಲದೇ ಮಾಡಿ ಮುಗಿಸಿದ್ದಾರೆ.

ಇದು ಬೆಳಕಿಗೆ ಬಂದಿದ್ದು ಮೊನ್ನೆ ಅಂದರೆ ಪಾಲಿಕೆ ಎಲೆಕ್ಷನ್ ಕಳೆದು ಒಂದು ತಿಂಗಳಿಗೆ. ಕಾರ್ಪೊರೇಷನ್ ಪಕ್ಕದಲ್ಲೇ ಇರುವ ಧರ್ಮರಾಯಸ್ವಾಮಿ ದೇವಸ್ಥಾನ ವಾರ್ಡಿಗೆ ಹೊಸದಾಗಿ ಗೆದ್ದು ಬಂದ ಬಿಜೆಪಿ ಕೌನ್ಸಿಲರ್ ಧನರಾಜ್ ತನ್ನ ವಾರ್ಡಿನಲ್ಲಿ ಈ ಹಿಂದಾದ ಕಾಮಗಾರಿಗಳ ವಿವರ ಪಡೆದು ವಾಸ್ತವ ಸ್ಥಿತಿ ಪರಿಶೀಲಿಸಿದ್ದಾರೆ. ಈ ಪೈಕಿ 21.99 ಲಕ್ಷದ ಚರಂಡಿ ನಿರ್ಮಾಣ ಕಾಮಗಾರಿ ಮತ್ತು ಯಲ್ಲಮ್ಮ ದಾಸಪ್ಪ ಆಸ್ಪತ್ರೆಯ ಕಾಂಪೌಂಡ್ ಮತ್ತು ಆವರಣದ ಅಭಿವೃದ್ಧಿಗೆ ಮತ್ತೆ 21.99 ಲಕ್ಷದ ಕಾಮಗಾರಿಗಳಿಗೆ ಆ ಮೊತ್ತದ ಬಿಲ್ ಮಾತ್ರ ಪಾವತಿಯಾಗಿತ್ತೇ ಹೊರತು ಅಸಲಿಗೆ ಕಾಮಗಾರಿಯೇ ನಡೆದಿರಲಿಲ್ಲ!

ಇನ್ನೂ ವಿಚಿತ್ರವೆಂದರೆ ಇಂಥದ್ದೊಂದು ಬೋಗಸ್ ಬಿಲ್ ಕೈಚಳಕ ಮೆರೆದಿದ್ದ ಸಹಾಯಕ ಇಂಜಿನಿಯರ್ ಮೋಹನ್ ತಾನೇ ಎಇಇಯ ಸಹಿಯನ್ನೂ ಫೋರ್ಜರಿ ಮಾಡಿ ಬಿಲ್ಲಿನ ದುಡ್ಡನ್ನು ಲಪಟಾಯಿಸಿದ್ದ!

ನಡೆಯದ ಕಾಮಗಾರಿಗೆ ಬಿಲ್ ದುಡ್ಡು ಮಂಜೂರಾಗಿದ್ದೂ ಅಲ್ಲದೇ ಸಹಾಯಕ ಇಂಜಿನಿಯರ್ ಒಬ್ಬ ತನ್ನ ಮೇಲಧಿಕಾರಿಯ ಸಹಿಯನ್ನೇ ಫೋರ್ಜರಿ ಮಾಡಿ ದುಡ್ಡು ಹೊಡೆದಿದ್ದ. ಇದು ಗೊತ್ತಾಗಿದ್ದೇ ಬಿಜೆಪಿ ಕೌನ್ಸಿಲರ್ ಧನರಾಜ್ ಈ ಬಗ್ಗೆ ಮೇಯರ್‌ಗೆ ದೂರು ಕೊಟ್ಟಿದ್ದಾರೆ. ಸ್ವತಃ ಮೇಯರ್ ನಟರಾಜರೇ ಸ್ಥಳಕ್ಕೆ ಬಂದು ಪರಿಶೀಲಿಸಿದರೆ ಕಾಮಗಾರಿ ಹಾಳಾಗಲಿ ಅಲ್ಲಿ ಅಗೆತದ ಅವಶೇಷ ಕೂಡ ಇರಲಿಲ್ಲ. ಅಷ್ಟಕ್ಕೂ ಬೋಗಸ್ ಬಿಲ್ ಜಡಿದು ಕಾಸು ನುಂಗಿದ್ದ ಸಹಾಯಕ ಇಂಜಿನಿಯರ್ ಮೋಹನ್‌ನೇ ನಾಪತ್ತೆಯಾಗಿದ್ದ. ತಡಮಾಡದೇ ಎ.ಇ. ಮೋಹನ್‌ನನ್ನು ಮೇಯರ್ ಸಸ್ಪೆಂಡ್ ಮಾಡಿದ್ದಾರೆ.

ಇದು ಬಿಬಿಎಂಪಿ ಹಗಲು ದರೋಡೆಗೆ ಸಣ್ಣ ಸ್ಯಾಂಪಲ್ ಮಾತ್ರ. ಈ ವರ್ಷ ಒಂದೇ ಮೂರು ಸಾವಿರದ ಐನೂರ ನಲವತ್ತೆಂಟು ಕೋಟಿಯ ವಿವಿಧ ಕಾಮಗಾರಿಗಳಿಗೆ ಪಾಲಿಕೆ ಟೆಂಡರ್ ಕೊಟ್ಟಿದ್ದು, ಅದಕ್ಕೂ ಹಿಂದಿನ ವರ್ಷ ಕಮೀಷನರ್ ಆಗಿದ್ದ ಸುಬ್ರಹ್ಮಣ್ಯಂ ಕಾಲದಲ್ಲಿ ಮತ್ತೆ ಎರಡು ಸಾವಿರದ ಏಳು ನೂರು ಕೋಟಿಯ ಇಂಥದ್ದೇ ಕಾಮಗಾರಿ ಟೆಂಡರ್‌ಗಳ ಹಣೆಬರಹ ಏನಾಯಿತೆಂಬುದಕ್ಕೆ ಈಗ ಬೆಳಕಿಗೆ ಬಂದ ಕರ್ಮಕಾಂಡ ಉದಾಹರಣೆಯಷ್ಟೇ. ಒಂದು ಮೂಲದ ಪ್ರಕಾರ ಕಳೆದ ಮೂರು ವರ್ಷಗಳಿಂದ ಈ ರೀತಿ ಬೋಗಸ್ ಬಿಲ್ ಜಡಿದು ಪಾಲಿಕೆ ದುರುಳರು ನುಂಗಿ ಹಾಕಿದ ಮೊತ್ತವೇ ಮೂರು ಸಾವಿರ ಕೋಟಿ!

ಈಗ ಹೈಕೋರ್ಟ್ ತಡೆ ಕೊಟ್ಟಿರುವ 3548 ಕೋಟಿಗಳ ಕಾಮಗಾರಿ ಶುರುವಾದರೆ ಈ ಮೊತ್ತ ದುಪ್ಪಟ್ಟಾಗುತ್ತದೆ.


ಹೀಗೆ ಸಾವಿರ ಕೋಟಿಗಳ ಲೆಕ್ಕದ ಅಸಂಖ್ಯಾತ ಕಾಮಗಾರಿಗಳನ್ನು ಪಾಲಿಕೆ ಏಕಾಏಕಿ ಕೈಗೊಂಡಿದ್ದಕ್ಕೂ ಕಾರಣವಿದೆ. ಅದು ಗ್ರೇಟರ್ ಬೆಂಗಳೂರು ಕಾರಣದ ಕಾಮಗಾರಿಗಳ ಮಹಾಮೇಳ. ಈ ಹಿಂದ ಪಾಲಿಕೆ ವ್ಯಾಪ್ತಿಯಿಂದ ಹೊರಗಿದ್ದ ದಾಸರಹಳ್ಳಿ, ಮಹದೇವಪುರ, ಯಲಹಂಕ, ಬ್ಯಾಟರಾಯನಪುರ, ರಾಜರಾಜೇಶ್ವರಿ ನಗರ, ಬೊಮ್ಮನಹಳ್ಳಿ ಇತ್ಯಾದಿ ಸಿಎಂಸಿಗಳೆಲ್ಲ ಗ್ರೇಟರ್ ಬೆಂಗಳೂರೆಂದು ಬಿಬಿಎಂಪಿಗೆ ಸೇರಿದ ನಂತರ ಅಲ್ಲಿ ಅಭಿವೃದ್ಧಿ ಮಾಡಬೇಕಲ್ಲ, ಅದಕ್ಕೆಂದೇ ಸಾವಿರ ಸಾವಿರ ಕೋಟಿಗಳ ಲೆಕ್ಕದ ವಿವಿಧ ಪ್ರಾಜೆಕ್ಟುಗಳನ್ನು ರೂಪಿಸಲಾಯಿತು. 2008, 2009 ಮತ್ತು 2010ನೇ ಸಾಲಿಗೆಂದು ಇನ್ನೂ ಅಭಿವೃದ್ಧಿ ಕಾಣದ ಹೊರವಲಯದ ಸಿಎಂಸಿ ಏರಿಯಾಗಳಲ್ಲಿ ಬೇಕಾಬಿಟ್ಟಿ ಕಾಮಗಾರಿಗಳು ಶುರುವಾದವು. ಅದಕ್ಕೂ ಮುನ್ನ ಕುಮಾರಸ್ವಾಮಿ ಸರ್ಕಾರವಿದ್ದಾಗಲೇ ಇಂಥ ಸಿಎಂಸಿ ಏರಿಯಾಗಳ ಉದ್ಧಾರಕ್ಕೆಂದು ಸಾವಿರಕ್ಕೂ ಅಧಿಕ ಕೋಟಿ ರೂಪಾಯಿಗಳ ಪ್ರಾಜೆಕ್ಟನ್ನು ಬಿಡಿಎ ರೂಪಿಸಿತ್ತು, ಅದೂ ಸಾಲದೆಂಬಂತೆ ಯಡ್ಡಿ ಮುಖ್ಯಮಂತ್ರಿಯಾದ ಮೇಲೆ ಸುಬ್ರಹ್ಮಣ್ಯಂ ಪಾಲಿಕೆಗೆ ಕಮಿಷನರಾಗಿ ಬಂದು ಮತ್ತೆ ಎರಡು ಸಾವಿರ ಕೋಟಿಗೂ ಅಧಿಕ ಮೊತ್ತದ ತರಹೇವಾರಿ ಪ್ರಾಜೆಕ್ಟುಗಳನ್ನು ರೂಪಿಸಿದರಲ್ಲ; ಅಂಥ ಕಾಮಗಾರಿಗಳ ಹೆಸರಲ್ಲಿ ನಡೆದ ಗೋಲ್‌ಮಾಲ್‌ನ ವಿವರಗಳು ಎಂಥವರನ್ನೂ ಬೆಚ್ಚಿ ಬೀಳಿಸುತ್ತವೆ.

ಬೇಕಾಬಿಟ್ಟಿ ಅಂಡರ್‌ಪಾಸ್‌ಗಳು, ವಿನಾಕಾರಣದ ಜಂಗಲ್ ಕಟ್ಟಿಂಗ್, ಅಗತ್ಯವೇ ಇಲ್ಲದ ಡೀಸಿಲ್ಟಿಂಗ್, ತೋರಿಕೆಗಷ್ಟೇ ಡಾಂಬರೀಕರಣದ ಹೆಸರಲ್ಲಿ ಪಾಲಿಕೆಯ ಇಂಜಿನಿಯರ್‌ಗಳು ದೋಚಿದ್ದರ ಮುಂದೆ ಧರ್ಮರಾಯಸ್ವಾಮಿ ವಾರ್ಡಿನ ಅಸಿಸ್ಟೆಂಟ್ ಇಂಜಿನಿಯರ್ ಮೋಹನ್ ಕಬಳಿಸಿದ್ದು ಯಾವ ಲೆಕ್ಕ?


ಶೋಭಾ ಕರಂದ್ಲಾಜೆಯ ಯಶವಂತಪುರ ಒಂದಕ್ಕೇ ಕಳೆದೆರಡು ವರ್ಷಗಳಿಂದ 250 ಕೋಟಿ ರೂಪಾಯಿಗಳ ಕಾಮಗಾರಿ ಬಿಲ್ ಮಂಜೂರಾಗಿತ್ತು, ಅಶೋಕ್ ಶಿಷ್ಯ ಮುನಿರಾಜು ಆಳ್ವಿಕೆಯಿರುವ ದಾಸರಹಳ್ಳಿಗೆ 280 ಕೋಟಿ ರೂಪಾಯಿಗಳ ಕೋಡ್‌ವರ್ಕ್ ನಿಗದಿಯಾಯಿತು. ಕೃಷ್ಣ ಭೈರೇಗೌಡರ ಬ್ಯಾಟರಾಯನಪುರಕ್ಕೆ ಒಟ್ಟು 260 ಕೋಟಿ ರೂಪಾಯಿಗಳು ಮಂಜೂರಾದರೆ ಖದೀಮ ಶಾಸಕ ವಿಶ್ವನಾಥ್‌ನ ಯಲಹಂಕ ಒಂದಕ್ಕೆ ಮುನ್ನೂರು ಕೋಟಿ ರೂಪಾಯಿಗಳ ಪ್ರಾಜೆಕ್ಟು ಬಂತು.

ಎಂ. ಶ್ರೀನಿವಾಸ್ ಎಮ್ಮೆಲ್ಲೆಯಾಗಿರುವ ರಾಜರಾಜೇಶ್ವರಿ ಕ್ಷೇತ್ರಕ್ಕೆ 260 ಕೋಟಿ ರೂಪಾಯಿ, ಅವರ ತಮ್ಮ ಕೃಷ್ಣಪ್ಪ ಪ್ರತಿನಿಧಿಸುವ ಬೆಂಗಳೂರು ದಕ್ಷಿಣಕ್ಕೆ, 290 ಕೋಟಿ, ಸತೀಶ್ ರೆಡ್ಡಿಯ ಬೊಮ್ಮನಹಳ್ಳಿಗೆ 300 ಕೋಟಿ, ಲಿಂಬಾವಳಿಯ ಮಹದೇವಪುರಕ್ಕೆ 230 ಕೋಟಿ, ಅವರ ಬಾಮೈದ ರಘು ಗೆದ್ದಿರುವ ಸಿ.ವಿ. ರಾಮನ್ ನಗರಕ್ಕೆ 240 ಕೋಟಿ, ನಂದೀಶ್ ರೆಡ್ಡಿಯ ಕೃಷ್ಣರಾಜಪುರಕ್ಕೆ, 270 ಕೋಟಿ; ಹೀಗೆ ನೂರಾರು ಕೋಟಿ ರೂಪಾಯಿಗಳ ಏನೇನೋ ಕಾಮಗಾರಿಗಳ ಮಹಾಪೂರವೇ ಸುಬ್ರಹ್ಮಣ್ಯಂ ಬಿಬಿಎಂಪಿಗೆ ಬಂದ ಮೇಲೆ ಶುರುವಾಗಿತ್ತು.

ಇಡೀ ಬಿಬಿಎಂಪಿಗೆ ಲೆಕ್ಕ ಹಾಕಿದರೆ ಇದು ಸಾವಿರಾರು ಕೋಟಿ ರೂಪಾಯಿಗಳ ಪ್ರವಾಹ ಸದೃಶ ಅಭಿಯಾನದಂತಿತ್ತು. ಇನ್ನೇನು ಬೆಂಗಳೂರು ಸಿಂಗಾಪೂರ್ ಆಗೇ ಬಿಟ್ಟಿತೆಂದು ಜನ ಖುಷಿಪಟ್ಟಿದ್ದರು. ಮುಖ್ಯಮಂತ್ರಿ ಯಡ್ಡಿ ಕೂಡ ಬೆಂಗಳೂರು ಅಭಿವೃದ್ಧಿಯ ಹೆಸರಲ್ಲಿ ಸಾವಿರಾರು ಕೋಟಿಯ ಕಾಮಗಾರಿ ಯೋಜನೆಗಳನ್ನು ಘೋಷಿಸಿದ್ದೇ ಘೋಷಿಸಿದ್ದು. 2008 ರಿಂದ ಶುರುವಾದ ಇಂಥ ಅಭಿವೃದ್ಧಿ ಪ್ರಾಜೆಕ್ಟುಗಳ ಅಸಲೀ ಬಣ್ಣ ಬಯಲಾದದ್ದು 2010 ರಲ್ಲಿ, ಸಾವಿರಾರು ಕೋಟಿಗಳ ಕಾಮಗಾರಿಗಳ ಬಿಲ್ಲು ಮಾತ್ರ ಮಂಜೂರಾಗಿತ್ತೇ ಹೊರತು ಕೆಲಸ ಮಾತ್ರ ಕಣ್ಣಿಗೆ ಕಾಣುತ್ತಿರಲಿಲ್ಲ.



ಎಂ.ಶ್ರೀನಿವಾಸ್



ಆರ್.ಅಶೋಕ್

ಕೇವಲ ಕಾಗದದಲ್ಲಷ್ಟೇ ರೂಪುಗೊಂಡ ಕೋಟಿ ಲೆಕ್ಕದ ಯೋಜನೆಗಳೆಲ್ಲ ಕಾಗದದಲ್ಲೇ ಪರ್ಯಾವಸಾನಗೊಂಡಿದ್ದವು. ಹಕೀಕತ್ತೆಂದರೆ ಸಂತೆಗೆ ಮುನ್ನ ಗಂಟು ಕಳ್ಳರು ಸೇರಿದಂತೆ ಇಂಥ ಸಾವಿರ ಕೋಟಿಯ ಟೆಂಡರ್ ಪ್ರಕ್ರಿಯೆ ನಡೆಯುವ ಮೊದಲೇ ನುಂಗುಬಾಕ ಇಂಜಿನಿಯರ್‌ಗಳೆಲ್ಲ ಆಯಕಟ್ಟಿಗೆ ಬಂದು ಕೂತಿದ್ದರು. ಅಂದರೆ ಹೊಸದಾಗಿ ಸೇರ್ಪಡೆಯಾದ ಏರಿಯಾಗಳ ಪ್ರತಿ ಎಮ್ಮೆಲ್ಲೆಯೂ ತನಗೆ ಬೇಕಾದ ಇಂಜಿನಿಯರುಗಳನ್ನೇ ಹಾಕಿಸಿಕೊಂಡು ಕೊಳ್ಳೆಗೆ ಅಣಿಯಾಗಿ ನಿಂತಿದ್ದ. ರಾಜರಾಜೇಶ್ವರಿ ನಗರಕ್ಕೆ ಎಕ್ಸಿಕ್ಯೂಟಿವ್ ಇಂಜಿನಿಯರಾಗಿದ್ದ ನಾರಾಯಣನನ್ನು ಶಾಸಕ ಎಂ. ಶ್ರೀನಿವಾಸ್ ಪುತ್ರ ವೆಂಕಟೇಶ್ ಬಾಬುವೇ ಹಾಕಿಸಿಕೊಂಡಿದ್ದ. ಕೆಂಗೇರಿ ವಲಯಕ್ಕೆ ಇ.ಇ. ಆಗಿ ಬಂದಿದ್ದ ಬಸವರಾಜೇಗೌಡ ಕರಂದ್ಲಾಜೆಯ ಛೇಲಾ ರವೀಂದ್ರನಿಗೆ ದೊಡ್ಡಮಟ್ಟದಲ್ಲಿ ಪ್ರಸಾದ ತಿನ್ನಿಸಿದ್ದ. ದಾಸರಹಳ್ಳಿಗೆ ಎಕ್ಸಿಕ್ಯೂಟೀವ್ ಇಂಜಿನಿಯರ್ ಆಗಿದ್ದ ಮಂಜುನಾಥ್ ಯಾಪಾಟಿ ಭೋಗಸ್ ಬಿಲ್ಲು ನುಂಗಿದನೆಂದರೆ, ಆತನ ಖಮಾಯಿ ಮುಂದೆ ತನಗೆ ಬರುತ್ತಿದ್ದ ಕಮೀಷನ್ ಏನೇನೂ ಅಲ್ಲ ಎಂದು ಭಾವಿಸಿದ ಶಾಸಕ ಮುನಿರಾಜು ಮಂಜುನಾಥ್‌ನನ್ನು ಎತ್ತಂಗಡಿ ಮಾಡಿ ಆತನಿಗಿಂತಲೂ ಪರಮ ಭ್ರಷ್ಟನಾದ ಕೀರಾನಾಯಕ್ ಎಂಬುವವನನ್ನು ಕರೆತಂದ.

ಈ ಕೀರಾನಾಯಕ್ ಈ ಹಿಂದೆ ಒಂದಲ್ಲ ನಾಲ್ಕು ಬಾರಿ ಬೋಗಸ್ ಬಿಲ್ ಕಾರಣಕ್ಕೇ ಸಸ್ಪೆಂಡಾಗಿದ್ದ. ಗಿಲಿಗಿಲಿ ವೆಂಕಟೇಶ್ ಉರುಫ್ ಎಂ.ಎಸ್. ವೆಂಕಟೇಶ್ ಎಂಬ ಕಂಟ್ರಾಕ್ಟದಾರನನ್ನು ತನ್ನ ಪಾರ್ಟನರ್ ಮಾಡಿಕೊಂಡು ಆತನನ್ನು ಮುಂದಿಟ್ಟುಕೊಂಡೇ ಬೇನಾಮಿ ಕಾಂಟ್ರಾಕ್ಟ್ ಹಿಡಿಯುತ್ತಾನೆ. ಇಂಥ ಕಳ್ಳರನ್ನು ದಾಸರಹಳ್ಳಿಗೆ ಹಾಕಿಸಿಕೊಂಡ ಮುನಿರಾಜು ಥರವೇ ಬ್ಯಾಟರಾಯನಪುರಕ್ಕೆ, ಮುಖ್ಯ ಇಂಜಿನಿಯರಾಗಿ ಬಂದವನು ಪೇಜರ್ ನಾಗರಾಜ್ ಎಂಬ ಮತ್ತೊಬ್ಬ ಬಕಾಸುರ. ಯಲಹಂಕ ಶಾಸಕ ವಿಶ್ವನಾಥ್ ಬಿ.ಎಸ್. ಪ್ರಹ್ಲಾದ್ ಮತ್ತು ಪರಮೇಶ್ವರ್ ಎಂಬಿಬ್ಬರು ಪ್ರಳಯಾಂತಕ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳನ್ನು ಯ[ಲ]ಹಂಕದಲ್ಲಿ ಪ್ರತಿಷ್ಠಾಪಿಸಿಕೊಂಡು ಪಕ್ಕದ ಕೃಷ್ಣ ಭೈರೇಗೌಡ[ರ] ಬ್ಯಾಟರಾಯನಪುರಕ್ಕೂ ಕೈಯಿಟ್ಟರು.

ಹೀಗೆ ಬೆಂಗಳೂರು ನಗರದ ಪ್ರತಿಯೊಬ್ಬ ಬಿಜೆ[ಪಿ] ಶಾಸಕನೂ ತನ್ನ ಲೂಟಿಗೆ ಅನುವಾಗುವಂತೆ ಆಯ[ಕಟ್ಟಿಗೆ] ಇಂಜಿನಿಯರ್‌ಗಳನ್ನು ತಂದುಕೊಂಡಂತೆ ಇಡೀ ಬಿಬಿಎಂಪಿ[ಯ] ಕಾಮಗಾರಿ, ಟೆಂಡರ್ ಮತ್ತು ಬೋಗಸ್ ಬಿಲ್ ದಂಧೆ[ಗೆ] ಅನುಕೂಲವಾಗುವಂತೆ ಇಂಜಿನಿಯರ್ ಇನ್ ಚೀಫ್ ಹುದ್ದೆ[ಗೆ] ಆರ್. ಅಶೋಕ್ ತಂದದ್ದು ಗೋಪಾಲಸ್ವಾಮಿ ಎಂ[ಬ] ನರಿಬುದ್ಧಿಯ ಇಂಜಿನಿಯರ್ ಮಹಾಶಯನನ್ನು!

ಕೆ.ಆರ್. ಪುರಂ ಶಾಸಕ ನಂದೀಶ್ ರೆಡ್ಡಿ ಹಾಕಿಸಿಕೊಂ[ಡ] ಎಕ್ಸಿಕ್ಯೂಟಿವ್ ಇಂಜಿನಿಯರ್ ವೇಣುಗೋಪಾಲ್ ಮತ್ತು ಸಿ.ವಿ. ರಾಮನ್‌ನಗರದ ಶಾಸಕ ರಘು ಸಾಹೇಬ[ರ] ಮರ್ಜಿಯನ್ನೂ ಲೆಕ್ಕಿಸದೇ ನೇಮಕಗೊಂಡ ನಾಗೇಂದ್ರ ಮೂಲತಃ ಸಚ್ಚರಾದರೂ ಅವರ ಕೈಕೆಳಗಿದ್ದ ಎಇಇ-ಜೇಇಗಳ ನೇರವಾಗಿ ಶಾಸಕರನ್ನೇ ಬುಟ್ಟಿಗೆ ಹಾಕಿಕೊಂಡಿದ್ದರು. ಇಂ[ಥ] ಕಿರಾತಕ ಇಂಜಿನಿಯರ್‌ಗಳನ್ನಿಟ್ಟುಕೊಂಡೇ ಒಂದು ರೌಂಡ್ ಎತ್ತುವಳಿ ಮಾಡಿದ ಕಮೀಷನರ್ ಸುಬ್ರಹ್ಮಣ್ಯಂ ಒಂದೇ ಏಟಿಗೆ ನೂರಾ ಎಂಭತ್ತು ಕೋಟಿಯಷ್ಟು ಕಮೀಷನ್ ಜೇಬಿಗಿಳಿಸಿಬಿಟ್ಟ.

ಇನ್ನು ಇಂಜಿನಿಯರ್‌ಗಳನ್ನು ಕೇಳಬೇಕೆ ಒಂದೇ ಕಾಮಗಾರಿಗೆ ಬೇರೆಬೇರೆ ಹೆಸರ[ು] ಕೊಟ್ಟು ಬಿಲ್ಲು ನುಂಗಿದರು. ಹಿಂದೆ ಬಿಡಿ[ಎ] ಪೂರೈಸಿದ್ದ ಕಾಮಗಾರಿಗಳಿಗೇ ಮತ್ತೆ ಪಾಲಿ[ಕೆ] ವತಿಯಿಂದ ಹೊಸ ಕಾಮಗಾರಿಯ ಪ[ಟ್ಟ] ಕಟ್ಟಿ ಮತ್ತೆ ಮತ್ತೆ ಬಿಲ್ಲು ಹಾಕಿ ನುಂಗಿದರು. ಬೊಮ್ಮನಹಳ್ಳಿಯ ಶಾಸಕ ಸತೀಶ್ ರೆಡ್ಡಿಯ ಛೇಲಾನಂತೆ ಅವತರಿಸಿದ ಮತ್ತೊಬ್ಬ ಎಕ್ಸಿಕ್ಯೂಟಿವ್ ಇಂಜಿನಿಯರ್ ಶ್ರೀನಿವಾಸ ಮೂರ್ತಿ ಒಬ್ಬನೇ 200 ಕೋಟಿ ಮೊತ್ತ[ದ] ಬೋಗಸ್ ಬಿಲ್ ನುಂಗಿಬಿಟ್ಟ. ಈ ಪೈ[ಕಿ] ದೊಡ್ಡ ಪಾಲನ್ನು ಶಾಸಕ ಸತೀಶ್ ರೆಡ್ಡಿಯೇ ಕಬಳಿಸಿದ್ದ. ಇನ್ನೇನು ಇಡೀ ಬೋಗಸ್ ಬಿಲ್ ಕರ್ಮಕಾಂಡವೇ ಬಯಲಾಗಲಿದೆ ಎನ್ನುವಾಗಲೇ ಹುಷಾರಾದ ಯಡ್ಡಿ ವ್ಯವಸ್ಥಿತವಾಗಿ ಕಮಿಷನರ್ ಸುಬ್ರಹ್ಮಣ್ಯಂರನ್ನು ಸಾಗಹಾಕಿ ಆ ಜಾಗಕ್ಕೆ ಮೀನಾರನ್ನು ತಂದರು.

ಮೀನಾ ಎಷ್ಟೇ ನಿಷ್ಠುರಿ ಅಧಿಕಾರಿಯಾದರೂ ಪಾಲಿಕೆಯ ಕಾಂಟ್ರಾಕ್ಟ್ ಮಾಫಿಯಾದ ಕೂದಲನ್ನೂ ಕೊಂಕಿಸ[ಲು] ಲಾಗಲಿಲ್ಲ, ಏಕೆಂದರೆ ಅಶೋಕ್ ಮತ್ತು ಕಟ್ಟಾ ಎಂಬ ಮಂತ್ರಿದ್ವಯರೇ ಇಡೀ ಕಾಂಟ್ರಾಕ್ಟ್ ಮಾಫಿಯಾದ ಮೂಲ ಪುರುಷರಂತಿದ್ದರು. ಇವರ ಮರ್ಜಿಗೆ ತಕ್ಕಂತೆ ಮೂರನೆ ರೌಂಡಿನ ಇನ್ನೊಂದು ಪ್ರಾಜೆಕ್ಟ್‌ಗೆ ಕಾಂಟ್ರಾಕ್ಟ್ ಮಾಫಿಯಾ ಕೈಯಿಟ್ಟಿತು. ಅದು 3548 ಕೋಟಿಯ ನಡುರಾತ್ರಿ ಟೆಂಡರ್ ಹಗರಣ!

ಈಗ ಮೀನಾರನ್ನು ಎತ್ತಂಗಡಿ ಮಾಡಿ ಅಲ್ಲಿ[ಗೆ] ಸಿದ್ಧಯ್ಯನವರನ್ನು ಅಶೋಕ್ ಕರೆ ತಂದಿದ್ದಾರೆ. ಇಷ್ಟರಲ್ಲಿ 3548 ಕೋಟಿಯ ಟೆಂಡರ್ ಪ್ರಕ್ರಿಯೆಗೆ ಹೈಕೋರ್ಟ್ ಕೊಟ್ಟಿದ್ದ ತಡೆಯಾಜ್ಞೆಯೂ ತೆರವಾಗಲಿದೆ. ಈ ಪಾ[ಟಿ] ಮೊತ್ತದ ಬೋಗಸ್ ಬಿಲ್ ಹಂಗಾಮಾಕ್ಕೆ ಮೀನಾಗಿಂತಲೂ ಸಿದ್ಧಯ್ಯ ಇದ್ದರೇನೇ ಅನುಕೂಲ ಎಂಬುದು ಬಿಜೆಪಿ ಧಣಿಗಳ ನಿರ್ಧಾರವಂತೆ. ಈ ಹಿಂದೆ ನಡೆದಿದ್ದ ಬೋಗಸ್ ಬಿಲ್ ಕರ್ಮಕಾಂಡವನ್ನೂ ಮುಚ್ಚಿದಂತಾಯ್ತು ಬೃಹತ್ ಮೊತ್ತದ ಹೊಸ ಟೆಂಡರ್ ಲೂಟಿಗೆ ಚಾಲನೆಯೂ ಸಿಕ್ಕಂತಾಯ್ತು. ಸಿದ್ಧಯ್ಯನವರಂಥ ಅನುಕೂಲಕಾರಿ ಮತ್ತು ಗುಲಾಮಗಿರಿಯ ಕಮೀಷನರ್ ಇರುವ ತನಕ ಬಿಜೆಪಿ ಲೂಟಿಗ[ೆ] ತಡೆಯೆಲ್ಲುಂಟು?

• ರಾ. ಸೋಮನಾಥ್

ಬನ್ನೇರುಘಟ್ಟ ಗ್ರಾಪಂ: ಮಾಜಿ ಅಧ್ಯಕ್ಷ ಇನ್ನೂರೈವತ್ತು ಕೋಟಿ ನುಂಗಿದ!




ಬಡವರ ಸೂರು ಕಸಿದುಕೊಂಡ

ಕೋಟಿಗಳ ಲೆಕ್ಕದಲ್ಲಿ ಸರ್ಕಾರಿ ಜಮೀನು ಕಬಳಿಕೆಯ ಮೂಲಕ ಹಣ ಹೊಡೆದುಕೊಂಡಿರುವ ಜಯರಾಂನದ್ದು ಇಂಗದ ಧನದಾಹ. ಅದಕ್ಕಾಗಿ ಈತ ತೀರಾ ಬಡಜನರಿಗೆ ನ್ಯಾಯಯುತವಾಗಿ ದಕ್ಕಬೇಕಿರುವ ಆಶ್ರಯ ಸೂರಿಗೂ ಕೊಕ್ಕೆಯಿಕ್ಕಲು ಹೇಸುವುದಿಲ್ಲ!

ಈತ ಅಧ್ಯಕ್ಷನಾಗಿದ್ದ ಅವಧಿಯಲ್ಲಿ ಬನ್ನೇರುಘಟ್ಟ ಗ್ರಾಪಂ ವ್ಯಾಪ್ತಿಯ ಕಡುಬಡವರಿಗೆ ಭಾರೀ ಮೋಸ ಮಾಡಿದ್ದ. ಉತ್ತಮವಾದ ಜಮೀನು ಕಬಳಿಸಿ ಬೇಲಿ ಸುತ್ತಿದ್ದ ಈ ಹಲಾಲುಕೋರ ಆಶ್ರಯ ಯೋಜನೆ ಜಾರಿಗೆ ತಕ್ಕುದಾದ ಜಾಗಕ್ಕೆಲ್ಲಾ ಅದೇ ಗತಿ ಕಾಣಿಸಿದ್ದ. ಕೆಲ ಭಾಗದಲ್ಲಿ ಲೇಔಟ್‌ಗಳನ್ನೂ ನಿರ್ಮಿಸಿದ್ದ.

ವಿಚಾರ ಹೀಗಿರುವುದರಿಂದಲೇ ಬಡವರಿಗೆ ಆಶ್ರಯ ಒದಗಿಸಲು ಸರ್ವೆ ನಂ. 2 ಮತ್ತು 57 ರಲ್ಲಿ ನಿವೇಶನಗಳ ಪಟ್ಟಿ ಮಾಡಿಸಿದ. ಅದು ನಿವೇಶನ ನಿರ್ಮಿಸುವುದಿರಲಿ, ಅಡ್ಡಾಡಲೂ ಯೋಗ್ಯವಲ್ಲದ ಜಾಗ. ಗುಡ್ಡ ಮತ್ತು ನೂರು ಅಡಿಗಳ ಹಳ್ಳಗಳಿರುವ್ವ ಜಾಗವಿದು.

ಆದರೆ ಆಶ್ರಯ ಕಮಿಟಿಯ ಮಂದಿ ಅದೆಂಥ ಪ್ರಸಾದ ತಿಂದಿದ್ದರೋ, ಸ್ಥಳ ಪರಿಶೀಲನೆ ಮಾಡದೇನೆ ಹಕ್ಕುಪತ್ರ ಸಿದ್ಧಪಡಿಸಿದ್ದರು! ಅಂಥ ಹಕ್ಕುಪತ್ರದಲ್ಲೂ ಮಾಲೂರು ಮುಂತಾದೆಡೆಗಳ ಜಯರಾಂ ಛೇಲಾಗಳ ಹೆಸರೇ ತುಂಬಿದ್ದುದನ್ನು ಕಂಡ ಅನೇಕರು ತಕರಾರೆತ್ತಿದರು. ಪ್ರಕರಣ ಸಪ್ಪಗಾಯಿತು. ಆದರೆ ಬಡಬಗ್ಗರಿಗೆ ಇಂದಿಗೂ ನ್ಯಾಯ ಸಿಕ್ಕಿಲ್ಲ.




ಇದು ಎಂಥವರನ್ನೂ ಬೆಚ್ಚಿಬೀಳಿಸಬಲ್ಲ ಬೃಹತ್ ನೆಲಗಳ್ಳತನ ವೃತ್ತಾಂತ. ಜಯರಾಂ ಎಂಬಾತ ಈ ಭಾನಗಡಿಯ ಪ್ರಮುಖ ಸೂತ್ರದಾರ. ಆ ಆಸಾಮಿ ಬನ್ನೇರುಘಟ್ಟದ ಹಸಿರು ವಲಯದ ಸರ್ಕಾರಿ ಜಾಗದಲ್ಲಿ ಅಖಂಡ ಇನ್ನೂರೈವತ್ತು ಕೋಟಿ ಮೊತ್ತದ ಲೇಔಟ್ ನಿರ್ಮಿಸಿ ಕಂಡವರಿಗೆ ಮಾರಿ ಕೈತೊಳೆದುಕೊಂಡಿದ್ದನಾದರೂ ಇದೀಗ ಸರಿಯಾಗಿ ತಗುಲಿಕೊಂಡಿದ್ದಾನೆ. ಇಂಥಾ ಪರಾಕ್ರಮಿ ಜಯರಾಂ ಬನ್ನೇರುಘಟ್ಟ ಗ್ರಾಮ ಪಂಚಾಯ್ತಿಯ ಮಾಜಿ ಅಧ್ಯಕ್ಷ!


1995ರ ಆಸುಪಾಸಲಿ ಬನ್ನೇರುಘಟ್ಟ ಗ್ರಾಮ ಪಂಚಾಯ್ತಿಗೆ ಅಟಕಾಯಿಸಿಕೊಂಡ ಜಯರಾಂ ಸರ್ಕಾರಿ ಜಮೀನಿಗೆ ಮೋಕ್ಷ ಕಾಣಿಸುವುದನ್ನೇ ಕಾಯಕ ಮಾಡಿಕೊಂಡಾತ. ಆನೇಕಲ್ ನಾರಾಯಣಸ್ವಾಮಿ ಹಾಗೂ ಎಂ. ಕೃಷ್ಣಪ್ಪನ ಪಕ್ಕಾ ಶಿಷ್ಯನಾದ ಜಯರಾಂ ಲಾಗಾಯ್ತಿನಿಂದಲೂ ಸಾಕ್ಷಿಗೆಂಬಂತೆ ಒಂದು ಐದಾರು ಎಕರೆ ಜಮೀನು ಖರೀದಿಸಿ ಅದರ ಸುತ್ತಲಿನ ಸರ್ಕಾರಿ ಜಾಗವನ್ನು ಕಬ್ಜಾ ಮಾಡಿಕೊಳ್ಳುವುದನ್ನೇ ದಂಧೆಯನ್ನಾಗಿಸಿಕೊಂಡಾತ. ಇಂಥ ದಂಧೆ ಪರಾಕಾಷ್ಠೆ ತಲುಪಿದ್ದರಿಂದಾಗಿಯೇ 'ಅತಿಥಿ', 'ಬಾಲಾಜಿ', 'ವೆಂಕಟರಮಣ' ಅಂತೆಲ್ಲ ಅಕ್ರಮ ಬಡಾವಣೆಗಳು ತಲೆ ಎತ್ತಿ ಜಯರಾಂನ ಹುಂಡಿ ತುಂಬಿಸಿದವು.

ಜಯರಾಂ ತನ್ನ ಹಡಬೆ ಹಣದ ಪವರ್‌ನಿಂದ ಶಾಸಕರು, ಮುಖಂಡರುಗಳನ್ನು ಬುಟ್ಟಿಗೆ ಹಾಕಿಕೊಂಡಿದ್ದಲ್ಲದೆ, ತನ್ನ ವಿರುದ್ಧ ದನಿಯೆತ್ತುವವರನ್ನು ದರ್ಪದ ಮೂಲಕವೇ ಮಟ್ಟಹಾಕಹತ್ತಿದ. ಆದುದರಿಂದ ಈತನ ವಿರುದ್ಧ ಸಿಡಿದೇಳುವ ಮಂದಿಯೆ ಇಲ್ಲವಾದರು ಕೆಲವರು ದಾಖಲೆ ಸಮೇತ ದೂರು ನೀಡಿ ಧೈರ್ಯ ಮೆರೆದರಾದರೂ ಅವೆಲ್ಲ ಕಸದಬುಟ್ಟಿ ಸೇರಿದವು. ಆದರೆ ಅದೃಷ್ಟವೆಂಬಂತೆ ಎ.ಟಿ. ರಾಮಸ್ವಾಮಿ ವರದಿ ಸಹ ಈ ಅಕ್ರಮದ ಮೇಲೆ ಬೆಳಕು ಚೆಲ್ಲಿತು. ಇಷ್ಟರಲ್ಲಿ ಬನ್ನೇರುಘಟ್ಟ ಕಳ್ಳಕಾಕರ ಪಾಲಾಗುತ್ತಿದ್ದುದನ್ನು ತಡೆಯಲು ಸರ್ಕಾರಿ ಜಮೀನು ಸಂರಕ್ಷಣಾ ಕಾರ್ಯಪಡೆ ರಚನೆಯಾಗಿ, ಅದಕ್ಕೆ ನಿಷ್ಠಾವಂತ ಅಧಿಕಾರಿ ಬಾಲ ಸುಬ್ರಮಣಿಯನ್ ಮುಖ್ಯಸ್ಥರಾಗಿ ಬಂದರು.

ಹಾಗೆ ಅಖಾಡಕ್ಕಿಳಿದ ಸುಬ್ರಮಣಿಯನ್ ಒಂದೇ ಏಟಿಗೆ ಜಯರಾಂನ ಅಕ್ರಮಗಳ ಬುಡಕ್ಕೆ ಕೈಹಾಕಿದ್ದಾರೆ. ಇದರಿಂದಾಗಿ ಜಯರಾಂನ ಅಕ್ರಮ ಕೂಸು 'ಅತಿಥಿ' ಅಲ್ಲಾಡಿದೆಯಲ್ಲದೆ, ಕಷ್ಟಪಟ್ಟು ಸೈಟು ಕೊಂಡ ಮಂದಿಯೂ ನಡುಗಿ ಹೋಗಿದ್ದಾರೆ. ಯಾಕೆಂದರೆ, ಅಖಂಡ 110 ಎಕರೆ ಒತ್ತುವರಿ ಜಮೀನಿನಲ್ಲಿ ಈ ನೆಲಗಳ್ಳ ಅತಿಥಿ ಬಡಾವಣೆ ಎಬ್ಬಿಸಿದ್ದ! ಬ್ಯಾಟರಾಯನದೊಡ್ಡಿಯ ಭೂತಾನಹಳ್ಳಿ ಸರ್ವೆ ನಂ. 67 ರಲ್ಲಿರುವ ಈ ಜಮೀನಲ್ಲಿರುವ 180 ಸೈಟ್‌ಗಳನ್ನು 2004 ರಲ್ಲಿ ಅವರಿವರಿಗೆ ಮಾರಿ ಹಣ ಹೊಡೆದುಕೊಂಡಿದ್ದ ಹಸಿರುವಲಯದಲ್ಲಿ ಸೈಟು ಮಾಡುವ ಹಾಗಿಲ್ಲ ಎಂಬ ನಿಯಮವನ್ನೂ ಜಯರಾಂ ಎಡಗಾಲಲ್ಲಿ ಒದ್ದಿದ್ದ!

ಇದೀಗ ಅತಿಥಿ ಹೆಸರಿನ ಅಖಂಡ ಇನ್ನೂರೈವತ್ತು ಕೋಟಿಯ ನಿಧಿ ಕೈ ತಪ್ಪಿ ಹೋಗುತ್ತಿರುವುದರಿಂದ ಕಂಗಾಲಾಗಿರುವ ಜಯರಾಂ ಅದನ್ನು ಉಳಿಸಿಕೊಳ್ಳಲು ಶತಾಯಗತಾಯ ಪ್ರಯತ್ನಿಸುತ್ತಿದ್ದಾನೆ. ಈ ಸಂಬಂಧ ಆನೇಕಲ್ ನಾರಾಯಣಸ್ವಾಮಿ ಹಾಗೂ ಎಂ. ಕೃಷ್ಣಪ್ಪನ ಪಟಾಲಂನೊಂದಿಗೆ ಭೂಗಳ್ಳ ಸಾರಿಗೆ ಸಚಿವ ಆರ್. ಅಶೋಕ್ ಮನೆಗೆ ದೌಡಾಯಿಸಿದ್ದಾನೆ. ಜಯನಗರದ ಮನೆಯಲ್ಲಿ ಸೇರಿದ್ದ ಜನರೆದುರೇ ಆರ್. ಅಶೋಕ್ 'ನೀನೂ ಕೋಟಿ ಕೋಟಿ ಮಾಡ್ಕಂಡಿದ್ದೀಯ. ಹದಿನೈದು ಕೋಟಿ ಮಡ್ಗು, ವಿಕ್ಕಿದ್ದೆಲ್ಲ-ನಿಭಾಯ್ಸಿ ಆ ಹಣಾನ ಪಾರ್ಟಿಗೆ ಉಪಯೋಗಿಸ್ಕೊತೀನಿ' ಅಂದು ಬಿಟ್ಟಿದ್ದಾರೆ!





ಈ ಲಫಂಗರು ನಿಯತ್ತಿನ ಅಧಿಕಾರಿಗಳನ್ನು ಹೇಗೆಲ್ಲಾ ನಡೆಸಿಕೊಳ್ಳುತ್ತಾರೋ ನೋಡಿ. ಸರ್ಕಾರಿ ಜಮೀನನ್ನ ನೆಲಗಳ್ಳರ ನಾಲಿಗೆಯಿಂದ ರಕ್ಷಿಸುವ ಹೊಣೆ ಹೊತ್ತು ಮುನ್ನುಗ್ಗುತ್ತಿರುವ ಬಾಲಸುಬ್ರಮಣಿಯನ್‌ಗೇ ಅಶೋಕ್ ಅಡಕಾಯಿಸಿಕೊಂಡಿದ್ದಾರೆ! ನಿಷ್ಠಾವಂತರಾಗಿರುವ ಸುಬ್ರಮಣಿಯನ್ ಹೀಗೆ ಒತ್ತಡ ಹೇರಿದರೆ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆಯವರಂತೆ ತಾನೂ ರಾಜೀನಾಮೆ ನೀಡಿ ಇರುವ ವಿಷಯ ಬಹಿರಂಗಪಡಿಸುವುದಾಗಿ ಆವಾಜ್ ಬಿಟ್ಟಿದ್ದಾರೆ!

ಈ ಅತಿಥಿ ಬಡಾವಣೆ ಲಫಡಾ ನೆಲಗಳ್ಳ ಜಯರಾಂನ ಒಂದು ಮಗ್ಗುಲಷ್ಟೇ. ಇಂಥ ಅದೆಷ್ಟೋ ಸರ್ಕಾರಿ ಜಾಗವನ್ನು ನುಂಗಿ ನೊಣೆದು ಲೇಔಟ್ ಹೇರಿಸಿ ಮಾರಾಟ ಮಾಡಿದ ಕಳ್ಳ ಇತಿಹಾಸ ಈತನ ಬೆನ್ನಿಗಿದೆ. ಇಂಥವನ ಸಾಥ್‌ಗೆ ಕೆಲವರ್ಷಗಳ ಹಿಂದೆ ಬಿಟಿಎಸ್ ಡ್ರೈವರ್ ಒಬ್ಬರನ್ನು ಕೊಂದು ತಗುಲಿಕೊಂಡಿದ್ದ ಚೇರ್‌ಮನ್ ಪುಟ್ಟಸ್ವಾಮಿ, ಮಾಜಿ ಮೆಂಬರ್ ಗೋವಿಂದರಾಜ್, ಹಾಲಿ ಮೆಂಬರ್ ಗೋವಿಂದಪ್ಪ ಮುಂತಾದ ಹಲಾಲುಕೋರರ ಗುಂಪೇ ಇದೆ.

ಇಂಥಾ ಜಯರಾಂ 1997ರ ಹಿಂಚುಮುಂಚಲ್ಲೇ ಭೂಗಳ್ಳತನ ಶುರುವಿಟ್ಟುಕೊಂಡಿದ್ದ. ಆಗ ತಾಲ್ಲೂಕು ಬೋರ್ಡ್ ಮೆಂಬರ್ ಆಗಿದ್ದ ಈತ ಚೇರ್ಮನ್ ಬಿ.ಸಿ. ಮರಿಯಪ್ಪನೊಂದಿಗೆ ಸೇರಿ ಬೂತನಹಳ್ಳಿಯ ಸರ್ಕಾರಿ ಜಾಗಕ್ಕೆ ಅನಧಿಕೃತ ದಾಖಲೆ ಸೃಷ್ಟಿಸಿ ಮಾರಾಟ ಮಾಡಿದ್ದ.

ಜಯರಾಂ ಈಗಲೂ ಸಹ ಆಯಕಟ್ಟಿನ ಜಾಗದಲ್ಲಿ ತನ್ನ ಛೇಲಾಗಳನ್ನಿಟ್ಟುಕೊಂಡು ಆಟವಾಡುತ್ತಿದ್ದಾನೆ. ಈತ ಎಂಥಾ ಖತರ್‌ನಾಕ್ ಎಂದರೆ, 2003 ರಲ್ಲಿ ನಕಲಿ ಸರ್ವೆ ನಂಬರ್ ಸೃಷ್ಟಿಸಿ ಊರಿಗೆ ಊರನ್ನೇ ಯಾವನಿಗೋ ಮಾರಿ ಕೈ ತೊಳೆದುಕೊಂಡಿದ್ದ. ಗೊಲ್ಲಹಳ್ಳಿ ಗ್ರಾಮ ಠಾಣಾ ಪ್ರದೇಶದ ಸರ್ವೆ ನಂ 44 ರಲ್ಲಿ ಕೊನೆಯಾಗುತ್ತದೆ. ಆದರೆ ಜಯರಾಂ ತನ್ನ ಛೇಲಾಗಳ ಮೂಲಕ ಸರ್ವೆ ನಂ. 45 ಅಂತೊಂದನ್ನು ಸೃಷ್ಟಿಸಿ ಅದರಲ್ಲಿ ಅಸಲೀ ಜಾಗವನ್ನೂ ಸುತ್ತಿ ಕೊಲ್ಕತ್ತಾ ನಿವಾಸಿಗಳಾದ ಪ್ರಕಾಶ್ ಕುಮಾರ್ ಮೆಹ್ತಾ ಹಾಗೂ ರಮೇಶ್ ಕುಮಾರ್ ಎಂಬವರ ಹೆಸರಿಗೆ ಮಾಡಿಸಿ ತದನಂತರ ಪಿ. ಭಾಸ್ಕರ್ ನಾಯ್ಡು ಎಂಬಾತನಿಗೆ ಮಾರಾಟ ಮಾಡಿದ!

ಸತತ ಮೂರು ಬಾರಿ ಬನ್ನೇರುಘಟ್ಟ ಗ್ರಾಮ ಪಂಚಾಯ್ತಿಗೆ ಅಧ್ಯಕ್ಷನಾಗಿದ್ದ ಜಯರಾಂ ಆ ಅವಧಿಯಲ್ಲಿ ಮಾಡಿದ ಅಪರಾತಪರಾಗಳಿಗೆ ಲೆಕ್ಕವಿಲ್ಲ. ಬನ್ನೇರುಘಟ್ಟದಿಂದ ಜಿಗಣಿಗೆ ಹೋಗುವ ಮಾರ್ಗ ಸಮೀಪವಿರುವ ಗೋಮಾಳದಲ್ಲೂ ಬಡಾವಣೆ ನಿರ್ಮಿಸಿರುವ ಈತ ಸರ್ವೆ ನಂ. 62 ಮತ್ತು 63 ರಲ್ಲಿರುವ ಸರ್ಕಾರಿ ಜಾಗವನ್ನು ಸ್ವಾಹಾ ಮಾಡಿಕೊಂಡ! ಇದರ ಜೊತೆಗೇ ಬನ್ನೇರುಘಟ್ಟ ನ್ಯಾಷನಲ್ ಪಾರ್ಕ್ ಆಜುಬಾಜುಗಳಲ್ಲೂ ಈತನ ಅಕ್ರಮ ಕುರುಹುಗಳಿವೆ. ಅದರಲ್ಲಿ ಕಂಚಕಮ್ಮನ ದೊಡ್ಡಿ ಗ್ರಾಮಕ್ಕೆ ಸೇರಿದ ವಿಜಯತ್ ರೆಸಿಡೆನ್ಸಿ ಬಡಾವಣೆ, ಕಗ್ಗಲೀಪುರ ರಸ್ತೆಯ ಭೂತನಹಳ್ಳಿಗೆ ಸೇರಿದ ಸರ್ವೆ ನಂ. 67 ರಲ್ಲೂ ಅಸೀಮ ಅಕ್ರಮಗಳು ನಡೆದುಹೋಗಿವೆ.

ಈತನ ನುಂಗುವ ನೈಪುಣ್ಯದ ಅರಿವಾಗಬೇಕಾದರೆ ಬನ್ನೇರುಘಟ್ಟದ ಸರ್ಕಾರಿ ಜಮೀನಿನ ನಕ್ಷೆಯನ್ನೊಮ್ಮೆ ತಡಕಾಡಬೇಕು. ಈ ನಕ್ಷೆಯಲ್ಲಿ ತೋಪು, ಗೋಮಾಳ, ಸ್ಮಶಾನ, ಗುಡ್ಡ, ಕೆರೆ ಅಂಗಳ ಅದೂ ಇದೂ ಅಂತೆಲ್ಲ ತರಹೇವಾರಿ ಉಲ್ಲೇಖಗಳಿವೆ. ಆದರೆ, ಬನ್ನೇರುಘಟ್ಟದಲ್ಲೊಮ್ಮೆ ಅಡ್ಡಾಡಿದರೆ ಸಾಕು ಅದರಲ್ಲಿ ಬಹುಪಾಲು ನೆಲಗಳ್ಳ ಜಯರಾಂನ ಪಾಲಾಗಿರುವುದು ಸ್ಪಷ್ಟವಾಗುತ್ತದೆ.

ಇಷ್ಟೆಲ್ಲಾ ನೆಲಗಳ್ಳತನ ಮಾಡಿರುವ ಜಯರಾಂ ಇಂದಿಗೂ ಕೂದಲುಕೊಂಕದಂತೆ ಮುಂದುವರಿಯುತ್ತಿದ್ದಾನೆ. ಒಂದು ಕಾಲದಲ್ಲಿ ಇದೇ ಬನ್ನೇರುಘಟ್ಟದಲ್ಲಿ ಮೂರ್ತಿ ಎಂಬವರ ಮನೆಯಲ್ಲಿ ಕೆಲಸಕ್ಕಿದ್ದ ಜಯರಾಂ ಇಂದು ಐನೂರು ಕೋಟಿಗೂ ಮಿಗಿಲಾದ ಮೊತ್ತಕ್ಕೆ ಬಾಳುತ್ತಾನೆ! ಇವನ ಅಕ್ರಮಗಳೆಲ್ಲ ಜಗಜ್ಜಾಹೀರಾಗಿದ್ದರೂ ಕೂಡಾ ಯಾವುದೇ ರೀತಿಯ ಕ್ರಮ ಜರುಗಿಲ್ಲವೆಂದರೆ ಅದಕ್ಕೆ ಕಾರಣ ಹಡಬೆ ಹಣದ ಪವರ್ರೆಂಬುದರಲ್ಲಿ ಸಂದೇಹವಿಲ್ಲ.


ಅದರ ಬಲದಿಂದಲೇ ಎಲ್ಲವನ್ನೂ ದಕ್ಕಿಸಿಕೊಳ್ಳುವ ಹುಂಬತನದಿಂದ ಮೆರೆದಾಡುತ್ತಿರುವ ಜಯರಾಂ ಜಿಲ್ಲಾ ಪಂಚಾಯ್ತಿ ಚುನಾವಣೆಯ ಮೇಲೆ ಕಣ್ಣಿಟ್ಟು ಕುಳಿತಿದ್ದಾನೆ. ಅದಕ್ಕೆ ಮುನ್ನುಡಿಯೆಂಬಂತೆ ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ಹಡೆಬೆ ಹಣ ಚೆಲ್ಲಾಡಿ ತನ್ನ ಕ್ಯಾಂಡಿಡೇಟುಗಳನ್ನು ಗೆಲ್ಲಿಸಿಕೊಂಡಿದ್ದಾನೆ! ಈ ಹಲಾಲುಕೋರನೇನಾದರೂ ಜಿಪಂ ಚುನಾವಣೆಗಳಲ್ಲಿ ಗೆದ್ದರೆ ಈತನ ಭೂಕೊಳ್ಳೆಯ ವ್ಯಾಧಿ ಜಿಲ್ಲೆಯಾದ್ಯಂತ ಪಸರಿಸುವುದರಲ್ಲಿ ಸಂದೇಹವಿಲ್ಲ!

ಇಂಥವರನ್ನು ಒದ್ದು ಮೂಲೆಗೆ ಕೂಡಿಸಬೇಕಾದ ಅಶೋಕ್‌ರಂಥವರೇ ಪಾರ್ಟಿ ಫಂಡಿನಾಸೆಗೆ ಜೊಲ್ಲು ಸುರಿಸುತ್ತಾರೆ, ನಿಷ್ಠಾವಂತ ಅಧಿಕಾರಿಗೆ ತೊಡರುಗಾಲಾಗುತ್ತಾರೆಂದರೆ, ಸರ್ಕಾರಿ ಜಮೀನು ಕಳ್ಳರ ಪಾಲಾಗುವುದನ್ನು ತಡೆಯುವುದಕ್ಕಾಗಿ ಯಾರಲ್ಲಿ ಮೊರೆಯಿಡಬೇಕೋ ತಿಳಿಯುತ್ತಿಲ್ಲ. ಬನ್ನೇರುಘಟ್ಟದ ಪಾಪದ ಮಂದಿ ಸದ್ಯ ಇಂತಹದೊಂದು ಡೋಲಾಯಮಾನ ಸ್ಥಿತಿಯಲ್ಲಿದ್ದಾರೆ.

• ಸಂತೋಷ್ ಬಾಗಿಲಗದ್ದೆ

ಎಲ್ಲಾ ಶಿಷ್ಯಮಯ!


ನಾರಾಯಣಸ್ವಾಮಿ


ಕೃಷ್ಣಪ್ಪ

ನೆಲಗಳ್ಳ ಜಯರಾಂ ಗ್ರಾಮ ಪಂಚಾಯ್ತಿಯಿಂದ ಮೊದಲ್ಗೊಂಡು ಪ್ರತೀ ಸರ್ಕಾರಿ ಕಚೇರಿಗಳಲ್ಲೂ ಶಿಷ್ಯಪಡೆಯನ್ನು ಹೊಂದಿದ್ದಾನೆ. ಹಡೆಬಿಟ್ಟೆ ಹಣ ಚೆಲ್ಲಾಡುವುದರಿಂದಾಗಿ ಅವರೆಲ್ಲ ಜಯರಾಂನ ಇಶಾರೆಯಂತೆ ಕೆಲಸ ಮಾಡುತ್ತಾರೆ.

ಈತನ ಅಕ್ರಮಗಳ ವಿರುದ್ಧ ದೂರು ನೀಡಿದ್ದ ಜಿಲ್ಲಾ ಪಂಚಾಯ್ತಿ ಅಧ್ಯಕ್ಷೆ ಭಾಗ್ಯ ರಾಜಶೇಖರ ರೆಡ್ಡಿ ಗ್ರಾಮ ಪಂಚಾಯ್ತಿಗೆ ಭೇಟಿ ನೀಡಿದ್ದ ಸಂದರ್ಭ ಇದಕ್ಕೆ ತಾಜಾ ಉದಾಹರಣೆಯಂತಿದೆ. ಈ ಸಂದರ್ಭದಲ್ಲಿ ಜಯರಾಂನ ಶಿಷ್ಯಪಡೆ ಬಾಯಿಗೆಬಂದಂತೆ ಬೈದು ಅವಮಾನಿಸಿ ಕಳುಹಿಸಿತ್ತು. ಈ ಹಿನ್ನೆಲೆಯಲ್ಲಿ ಜಿಪಂ ಸದಸ್ಯ ಬಿಜೆಪಿಯ ನಾರಾಯಣ್ ರಾಜೀನಾಮೆ ಎಸೆದಿದ್ದಾರೆ.

ಈ ರೀತಿ ಭ್ರಷ್ಟರ ಮೇಲಾಟದಿಂದಾಗಿ ಸಾಚಾತನಗಳೆಲ್ಲ ಸತ್ತು ಮಲಗಿದಂತಾಗಿದೆ. ಅಶೋಕ್‌ನಂಥವರೇ ದುಷ್ಟನ ಮುಖ ನೋಡಿ ತನಿಖೆಯನ್ನು ಹಾದಿತಪ್ಪಿಸುತ್ತಿರುವಾಗ, ಖುದ್ದು ಆನೇಕಲ್ ನಾರಾಯಣಸ್ವಾಮಿ ಹಾಗೂ ಎಂ. ಕೃಷ್ಣಪ್ಪನೇ ಈತನ ಛೇಲಾಗಳಂತೆ ವರ್ತಿಸುತ್ತಿರುವಾಗ ಬಡವರ ಕೂಗು ಯಾರು ತಾನೇ ಕೇಳಿಸಿಕೊಂಡಾರು?

ಶಾಸಕ ಕೃಷ್ಣಪ್ಪನ ಬಳಿಗೆ ಜಯರಾಂ ವಿರುದ್ಧ ದೂರು ಕೊಡಹೋದ ಅನೇಕರಿಗೆ ನಿರಾಸೆಯ ಹೊರತಾಗಿ ಬೇರೇನೂ ಸಿಕ್ಕಿಲ್ಲ. ಜಯರಾಂನ ಮುಲಾಜಿಗೆ ಬಿದ್ದಿರುವ ಈ ಮಹಾನುಭಾವ ತನ್ನ ಬಳಿ ಅಸಹಾಯಕರಾಗಿ ಬಂದವರನ್ನು 'ಹೇ ಅವ್ನು ದುಡ್ಡಿರೋ ಮನ್ಸ, ಏನೂ ಮಾಡಕ್ಕಾಗಲ್ಲ ಅಡ್ಜಸ್ಟ್ ಮಾಡ್ಕಂಡೋಗ್ರಿ' ಅಂತ ಪುಗಸಟ್ಟೆ ಸಲಹೆ ಕೊಟ್ಟು ಸಾಗಹಾಕುತ್ತಿದ್ದಾರಂತೆ!

ಅಲ್ಲಿಗೆ ಶಾಸಕನೂ ಗ್ರಾಮ ಪಂಚಾಯ್ತಿ ಅಧ್ಯಕ್ಷನ ಶಿಷ್ಯ ಅಂತಾಯ್ತು! ಒಟ್ಟಾರೆಯಾಗಿ ಬನ್ನೇರುಘಟ್ಟದ ಆಸುಪಾಸಲ್ಲಿ ಜಯರಾಂನ ಶಿಷ್ಯರಿಂದಲೇ ತುಂಬಿ ಹೋಗಿದೆ.

ಭ್ರಷ್ಟ ಅಧಿಕಾರಿಗಳು ಜೈಲಿಗೆ

ಕಳೆದ ಸಂಚಿಕೆಯಲ್ಲಿ 'ತಹಶೀಲ್ದಾರ್ ವರ್ಗಾವಣೆಯಲ್ಲಿ ಭೂಮಾಫಿಯಾ' ತಲೆಬರಹದಡಿಯಲ್ಲಿ ಪ್ರಕಟವಾಗಿದ್ದ ಸುದ್ದಿಯಿಂದಾಗಿ ಭ್ರಷ್ಟ ಅಧಿಕಾರಿಗಳು ಜೈಲು ಪಾಲಾಗಿದ್ದಾರೆ.

'ಲಂಕೇಶ್' ವರದಿ ಫಲಶ್ರುತಿ

ವರದಿ ಗಮನಿಸಿದ ಲೋಕಾಯುಕ್ತದ ಪೊಲೀಸ್ ಅಧಿಕಾರಿ ಮಧುಕರ್ ಶೆಟ್ಟಿ ಗಾಂಧಿನಗರದ KIADB ಕಚೇರಿ ಮೇಲೆ ದಾಳಿ ನಡೆಸಿ ಅಕ್ರಮ ದಾಖಲೆಗಳನ್ನು ವಶಪಡಿಸಿಕೊಂಡಿರುವುದಲ್ಲದೆ, ವಿಶೇಷ ಭೂಸ್ವಾಧೀನಾಧಿಕಾರಿ ನಾಗರಾಜ್ ಹಾಗೂ ಕೇಸ್ ವರ್ಕರ್ ನಾಗಭೂಷಣ್‌ನನ್ನು ಜೈಲಿಗಟ್ಟಿದ್ದಾರೆ. ಇದರಲ್ಲಿ ನಾಗರಾಜ್‌ನ ಶಿಷ್ಯ ಸಂತೋಷ್ ಎಂಬಾತ ತಲೆಮರೆಸಿಕೊಂಡರೆ ಮಹಾಭ್ರಷ್ಟ ಡಿಸಿ ರಾಮಾಂಜನೇಯ ಯಡ್ಡಿ ಮಕ್ಕಳ ಕೈಕಾಲು ಹಿಡಿದು ಬಚಾವಾಗಲು ತಿಣುಕುತ್ತಿರುವ ಸುದ್ದಿ ಇದೆ.


ವಿಶ್ವ ಒಕ್ಕಲಿಗ ಪೀಠಕ್ಕೆ ಬ್ರಾಹ್ಮಣ ಉತ್ತರಾಧಿಕಾರಿ?

ವಿಶ್ವ ಒಕ್ಕಲಿಗರ ಮಹಾಸಂಸ್ಥಾನಮಠದ ಉತ್ತರಾಧಿಕಾರಿಯನ್ನಾಗಿ ಬ್ರಾಹ್ಮಣನೊಬ್ಬನಿಗೆ ಪಟ್ಟಕಟ್ಟುವ ಮೂಲಕ ಸೋಕಾಲ್ಡ್ 'ಪರ್ಯಾಯ ಚುಂಚನಗಿರಿ' ಪೀಠಾಧಿಪತಿ ಕುಮಾರ ಚಂದ್ರಶೇಖರನಾಥರು ಒಂದೇ ಏಟಿಗೆ ದೇವೇಗೌಡರಿಗೂ, ಆದಿಚುಂಚನಗಿರಿ ಸಾಮ್ರಾಜ್ಯದ ವಿರುದ್ಧ ರೋಸತ್ತ ಅಸಂಖ್ಯಾತ ಒಕ್ಕಲಿಗ ಭಕ್ತಾದಿಗಳಿಗೂ ಒಟ್ಟೊಟ್ಟಿಗೆ ಶೂಲಹಾಕಿ ತಿವಿದಿದ್ದಾರೆ! ಒಕ್ಕಲಿಗರ ಪೀಠಕ್ಕೆ ಬ್ರಾಹ್ಮಣನೊಬ್ಬ ವಾರಸುದಾರನಾಗುವುದಕ್ಕೂ ಕುರಿಮಂದೆ ಕಾಯಲು ತೋಳ ಬಿಡುವುದಕ್ಕೂ ದೊಡ್ಡ ವ್ಯತ್ಯಾಸವಿಲ್ಲ ಎಂಬಂತೆ ಮಠದ ಭಕ್ತಾದಿಗಳು ತಿರುಗಿಬಿದ್ದಿದ್ದಾರೆ. ಪ್ರವರ್ತಕ ದೇವೇಗೌಡರಂತೂ ಹಣೆ ಚಚ್ಚಿಕೊಳ್ಳುವುದೊಂದೇ ಬಾಕಿ.

• ರಾ. ಸೋಮನಾಥ್
ra.somanath2010@gmail.com



ಕುಮಾರ ಚಂದ್ರಶೇಖರನಾಥ ಸ್ವಾಮಿ



ನಾರಾಯಣಸ್ವಾಮೀಜಿ

ಆದಿ ಚುಂಚನಗಿರಿ ಬಾಲಗಂಗಾಧರರ ಸೊಕ್ಕು ಮುರಿಯಲು ಹೋಗಿ ತಾವೇ ಹಳ್ಳಕ್ಕೆ ಬಿದ್ದಂತಾಗಿದೆ ದೇವೇಗೌಡರ ಪಾಡು!

ಕರೆದು ಹೆಣ್ಣು ಕೊಟ್ಟರೆ ಮಲ್ಲಾಗರ ಎಂಬಂತೆ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಕುಮಾರ ಚಂದ್ರಶೇಖರನಾಥ ಸ್ವಾಮಿಗೆ ದೇವೇಗೌಡರು ಇನ್ನಿಲ್ಲದಂತೆ ಪಂಪು ಹೊಡೆದರೋ ಈಗ ಅದೇ ಸ್ವಾಮಿಯಿಂದ ದೇವೇಗೌಡರೇ ಘಾತನುಂಗಬೇಕಾಗಿದೆ.

ವಿಶ್ವ ಒಕ್ಕಲಿಗರ ಮಹಾಸಂಸ್ಥಾನಮಠದ ಉತ್ತರಾಧಿಕಾರಿಯನ್ನಾಗಿ ಬ್ರಾಹ್ಮಣನೊಬ್ಬನಿಗೆ ಪಟ್ಟಕಟ್ಟುವ ಮೂಲಕ ಸೋಕಾಲ್ಡ್ 'ಪರ್ಯಾಯ ಚುಂಚನಗಿರಿ' ಪೀಠಾಧಿಪತಿ ಕುಮಾರ ಚಂದ್ರಶೇಖರನಾಥರು ಒಂದೇ ಏಟಗೆ ದೇವೇಗೌಡರಿಗೂ, ಆದಿಚುಂಚನಗಿರಿ ಸಾಮ್ರಾಜ್ಯದ ವಿರುದ್ಧ ರೋಸತ್ತ ಅಸಂಖ್ಯಾತ ಒಕ್ಕಲಿಗರ ಭಕ್ತಾದಿಗಳಿಗೂ ಒಟ್ಟೊಟ್ಟಿಗೆ ಶೂಲಹಾಕಿ ತಿವಿದಿದ್ದಾರೆ!

ಕೆಂಗೇರಿಯ ಗುರುಜ್ಞಾನ ಕೇಂದ್ರ ಅರ್ಥಾತ್ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠಕ್ಕೆ ಇಲ್ಲಿಗೆ ಎರಡು ತಿಂಗಳ ಹಿಂದಷ್ಟೇ ಉತ್ತರಾಧಿಕಾರಿಯಾಗಿ ನೇಮಕಗೊಂಡ ಸ್ವಾಮಿ ನಾರಾಯಣಾನಂದ ಸರಸ್ವತಿ ಜಾತಿಯಲ್ಲಿ ಸಂಕೇತಿ ಬ್ರಾಹ್ಮಣ ಮತ್ತು ಆಂಧ್ರ ಮೂಲದ ಪಕ್ಕಾ ತೆಲುಗು ಆಸಾಮಿ. ಚೆನ್ನಾಗಿ ಯೋಗ ಕಲಿತಿದ್ದಾರೆ ಎಂಬುದನ್ನು ಬಿಟ್ಟರೆ ಜಾತಿಯಲ್ಲಾಗಲಿ ಭಾಷೆಯಲ್ಲಾಗಲಿ ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠಕ್ಕೆ ಒಗ್ಗುವವನಲ್ಲ, ನಿನ್ನೆ ಮೊನ್ನೆಯತನಕ ಚಿನ್ಮಯಾನಂದರ ಆಶ್ರಮದಲ್ಲಿ ಖಾವಿ ಸವೆಸಿಕೊಂಡಿದ್ದ ನಾರಾಯಣಾನಂದ ಸರಸ್ವತಿಯವರನ್ನು ತಂದು ತನ್ನ ಕೆಂಗೇರಿಯ ಮಠಕ್ಕೆ ವಾರಸುದಾರನನ್ನಾಗಿ ಮಾಡಿದ ಕುಮಾರಚಂದ್ರಶೇಖರನಾಥರ ಉದ್ದೇಶ ಮಾತ್ರ ಯಾರಿಗೂ ಅರ್ಥವಾಗುತ್ತಿಲ್ಲ.

ಒಕ್ಕಲಿಗರ ಪೀಠಕ್ಕೆ ಬ್ರಾಹ್ಮಣನೊಬ್ಬ ವಾರಸುದಾರನಾಗುವುದಕ್ಕೂ ಕುರಿಮಂದೆ ಕಾಯಲು ತೋಳ ಬಿಡುವುದಕ್ಕೂ ದೊಡ್ಡ ವ್ಯತ್ಯಾಸವಿಲ್ಲ ಎಂಬಂತೆ ಮಠದ ಭಕ್ತಾದಿಗಳು ತಿರುಗಿಬಿದ್ದಿದ್ದಾರೆ. ಪ್ರವರ್ತಕ ದೇವೇಗೌಡರುತೂ ಹಣೆ ಚಚ್ಚಿಕೊಳ್ಳುವುದೊಂದೇ ಬಾಕಿ. 2001ರಲ್ಲಿ ಆದಿಚುಂಚನಗಿರಿ ಬಾಲಗಂಗಾಧರನಾಥರ ವಿರುದ್ಧ ತಿರುಗಿಬಿದ್ದ ದೇವೇಗೌಡರು ಕೆಂಗೇರಿಯ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಆವರಣದಲ್ಲಿ ತಮ್ಮ ಲಕ್ಷಕ್ಕೂ ಅಧಿಕ ಬೆಂಬಲಿಗರನ್ನು ಸೇರಿಸಿ ಕುಮಾರ ಚಂದ್ರಶೇಖರನಾಥರನ್ನು ಅಟ್ಟಕ್ಕೇರಿಸಿದ್ದೇನು? ಅನಂತರದ ದಿನಗಳಲ್ಲಿ ಎತ್ತಾಡಿ ಮೆರೆಸಿದ್ದೇನು?

ದೇವೇಗೌಡರಷ್ಟೇ ಅಲ್ಲ ಆದಿ ಚುಂಚನಗಿರಿಯ ಆಧಾರ ಸ್ತಂಭದಂತಿದ್ದ ಒಕ್ಕಲಿಗರ ಮುಖಂಡ ಎ.ಜಿ.ಸಿದ್ದಪ್ಪ, ಮುಂಗಾರು ಮಳೆ ನಿರ್ಮಾಪಕ ಕೃಷ್ಣಪ್ಪ, ಒಕ್ಕಲಿಗ ಮುಖಂಡರಾದ ಕಪಿಸಯ್ಯ, ಸಿಂಗ್ರಿಗೌಡ, ಕೆಂಗೇರಿಯ ದೊಡ್ಮನೆ ವೆಂಕಟೇಶ, ದೇವಿಶೆಟ್ಟಿಗೌಡ ಮುಂತಾದವರೆಲ್ಲ ತಮ್ಮ ಕೈಲಾದಷ್ಟು ನೆರವಾಗಿ ದೇವಚುಂಚನಗಿರಿಯ ಉದ್ಧಾರಕ್ಕೆ ಹೆಣಗಾಡಿದ್ದೇ ಬಂತು. ಅಸಂಖ್ಯಾತ ಭಕ್ತಾದಿಗಳು ದುಡ್ಡುಕೊಟ್ಟರು. ಯಾವ್ಯಾವುದೋ ಊರಿನ ಒಕ್ಕಲಿಗರೆಲ್ಲ ಕರೆಕರೆದು ಪಾದಪೂಜೆಗೈದರು. ಹೆಸರಿಗೆ ವಿಶ್ವ ಒಕ್ಕಲಿಗರ ಮಹಾಸಂಸ್ಥಾನಮಠ ಎಂದಿಟ್ಟುಕೊಂಡು, ಆದಿ ಚುಂಚನಗಿರಿಗೆ ಪರ್ಯಾಯ ಜಗದ್ಗುರು ಎಂದು ಸ್ವಯಂ ಘೋಷಿಸಿಕೊಂಡು, ಒಕ್ಕಲಿಗರ ಸಕಲ ಬೆಂಬಲವನ್ನೆಲ್ಲಾ ಉಂಡು; ಈಗ ಬ್ರಾಹ್ಮಣನನ್ನು ತಂದು ತನ್ನ ಉತ್ತರಾಧಿಕಾರಿಯನ್ನಾಗಿ ನೇಮಿಸಿಕೊಂಡರೆ ನಂಬಿ ಬೆಂಬಲಕ್ಕೆ ನಿಂತ ಒಕ್ಕಲಿಗ ಭಕ್ತಾದಿಗಳಿಗೆ ಹೇಗಾಗಿರಬೇಡ?

ಕುಮಾರ ಚಂದ್ರಶೇಖರನಾಥರ ಸದರಿ ಕ್ರಮ ನಂಬಿದ ಭಕ್ತಾದಿಗಳಿಗೆ ಆಘಾತಕಾರಿಯಾದರೂ ಅದಕ್ಕಿರುವ ಕಾರಣವೇ ಬೇರೆ. ಅದು ಕೆಂಗೇರಿ ಸ್ವಾಮಿಯ ಅಯೋಗ್ಯತನ ಮತ್ತು ಕಪಟ ಬುದ್ಧಿಯ ಪ್ರತಿಫಲವಷ್ಟೇ. ದೇವೇಗೌಡರಂಥ ಮಾಜಿ ಪ್ರಧಾನಿಯ ಶ್ರೀರಕ್ಷೆ, ಅರ್ಧ ಒಕ್ಕಲಿಗ ಸಮೂಹದ ನಿಷ್ಠೆ ತನ್ಮೂಲಕ ಒದಗಿಬಂದ ನೆರವು ಇತ್ಯಾದಿಗಳೆಲ್ಲ ಬೇರೆ ಯಾರೇ ಛಲವಂತ ಸ್ವಾಮೀಜಿಗೆ ಸಿಕ್ಕಿದ್ದರೆ ಕತೆ ಏನಾಗುತ್ತಿತ್ತೋ?



ಬಾಲಗಂಗಾಧರನಾಥ ಸ್ವಾಮಿ

ಆದರೆ ಕುಮಾರ ಚಂದ್ರಶೇಖರನಾಥರದು ಪಕ್ಕಾ ಮುಖೇಡಿ ಬುದ್ಧಿ. ತಾನೊಬ್ಬ ಸ್ವಾಮೀಜಿ, ಅದೂ ವಿಶ್ವ ಒಕ್ಕಲಿಗರ ಮಹಾಸಂಸ್ಥಾನವೆಂಬ ಹೆಸರು ಬೇರೆ, ಮಾಜಿ ಪ್ರಧಾನಿ ದೇವೇಗೌಡರೇ ಬೆನ್ನಿಗಿದ್ದಾರೆ, ಲಕ್ಷಾಂತರ ಭಕ್ತಾದಿಗಳು ವಿಪರೀತ ನಿರೀಕ್ಷೆಯಿಟ್ಟುಕೊಂಡಿದ್ದಕ್ಕಾದರೂ ನ್ಯಾಯ ಸಲ್ಲಿಸಬೇಕೆಂಬ ಪ್ರಜ್ಞೆಯೇ ಕು.ಚಂ.ನಾಥರಿಗೆ ಇರಲಿಲ್ಲ. ಹುಟ್ಟಾ ಸೋಮಾರಿ. ಮಹತ್ವಾಕಾಂಕ್ಷಿಯಲ್ಲ. ಯಾವುದೇ ಗೊತ್ತುಗುರಿಯಿಲ್ಲ. ಮಹತ್ವದ್ದನ್ನು ಸಾಧಿಸಬೇಕೆಂಬ ಛಲ, ಆತ್ಮವಿಶ್ವಾಸ ಯಾವುದೂ ಅವರಲ್ಲಿರಲಿಲ್ಲ. ಕೆಂಗೇರಿಯ ಗುರುಜ್ಞಾನ ಕೇಂದ್ರದ ಹತ್ತಿರ ಭೂಮಿ ಎಲ್ಲಿ ಕೈ ತಪ್ಪಿ ಹೋದೀತೋ ಎಂಬ ಅಳುಕಿಗೆ ಬಿದ್ದೇ ಮಠಕ್ಕೆ ಉತ್ತರಾಧಿಕಾರಿಗಳಾಗಿ ಬಂದವರನ್ನೆಲ್ಲ ಹಿಂಸೆ ಕೊಟ್ಟು ಓಡಿಸುತ್ತಿದ್ದರು. ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠವನ್ನೇನಾದರೂ ಜನಾಂಗಕ್ಕಾಗಿ ತೆರೆದಿಟ್ಟರೆ ಮಠದ ಆಸ್ತಿಪಾಸ್ತಿಯೆಲ್ಲ ಮುಂದೊಮ್ಮೆ ಪರರ ಪಾಲಾದರೆ ಗತಿ ಏನು? ಎಂಬ ಹಿಂಜರಿಕೆಯಲ್ಲೇ ದಿನಕ್ಕೊಂದು ಸೋಗ ಹಾಕುತ್ತಾ ಬಂದದ್ದು ಕೊನೆಗದು ಬ್ರಾಹ್ಮಣ ಉತ್ತರಾಧಿಕಾರಿಯನ್ನು ತರುವ ಮೂಲಕ ತಾರ್ಕಿಕ ಅಂತ್ಯಕ್ಕೆ ಬಂದು ನಿಂತಿದೆ.

ಯಾವುದೋ ಕಾಲಕ್ಕೆ ಕೆಂಗೇರಿ ಬಳಿ ಹತ್ತಿರ ಕೊಂಡು ಅದಕ್ಕೆ ಗುರು ಜ್ಞಾನ ಕೇಂದ್ರ ಎಂದು ಹೆಸರು ಕೊಟ್ಟು ಪ್ರಾಥಮಿಕ ಶಾಲೆ ಆರಂಭಿಸಿದ್ದ ಕುಮಾರ ಚಂದ್ರಶೇಖರನಾಥರು ತಿರುಚ್ಚಿ ಸ್ವಾಮಿಯ ಗರಡಿಯಲ್ಲಿ ಆದಿಚುಂಚನಗಿರಿ ಬಾಲಗಂಗಾಧರರಿಗೆ ಸಹಪಾಠಿಯಾಗಿದ್ದನ್ನೇ ನೆಪ ಮಾಡಿಕೊಂಡರು. ಬಾಲಗಂಗಾಧರರ ಶ್ರಮದಿಂದ ಬೆಳೆದು ನಿಂತಿದ್ದ ಆದಿಚುಂಚನಗಿರಿ ಮಠದ ಯಶಸ್ಸು ಕಂಡು ಅದಕ್ಕೆ ತಾನೇ ಉತ್ತರಾಧಿಕಾರಿಯಾಗಬೇಕಿತ್ತು ಎಂದು ಕಂಡಕಂಡವರ ಬಳಿ ಕಣ್ಣೀರಿಡುತ್ತಿದ್ದರು. ಗೋಳು ನೋಡಿಯೇ ಮರುಗಿದ ಒಂದಷ್ಟು ಒಕ್ಕಲಿಗ ಮುಖಂಡರು ಕೆಂಗೇರಿ ಆಶ್ರಮದ ಶಾಲೆಗೆ ಸಣ್ಣಪುಟ್ಟ ನೆರವು ಕಲ್ಪಿಸಿದ್ದರು. ಯಾವತ್ತು ಎ.ಜಿ.ಸಿದ್ದಪ್ಪ ಮತ್ತು ಮುಂಗಾರು ಮಳೆ ಕೃಷ್ಣಪ್ಪ ಆದಿಚುಂಚನಗಿರಿ ವಿರುದ್ಧ ತಿರುಗಿಬಿದ್ದು ಕು.ಚಂ.ನಾಥರ ಪಾಳಯಕ್ಕೆ ಬಂದರೋ ಕೆಂಗೇರಿ ಮಠಕ್ಕೆ ಲಕ್ಕು ಕುದುರಿತ್ತು. ಪ್ರಾಥಮಿಕ ಶಾಲೆಯಿದ್ದದ್ದು ಹೈಸ್ಕೂಲು ಬಂತು. ಕೇವಲ ಗುರುಜ್ಞಾನ ಕೇಂದ್ರ ಅಂತಷ್ಟೇ ಇದ್ದದ್ದು ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠವಾಯಿತು. ದೇವೇಗೌಡರೇ ಮಠಕ್ಕೆ ಬಂದು ಸ್ವಾಮಿಯ ಕಾಲಿಗೆ ಬಿದ್ದರು. ಸ್ವಾಮಿ ಮನಸ್ಸು ಮಾಡಿದ್ದರೆ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಏನೇನೆಲ್ಲಾ ಅಭಿವೃದ್ಧಿ ಸಾಧಿಸಬಹುದಿತ್ತು. ದುರಂತವೆಂದರೆ ಏಕಾಏಕಿ ಒದಗಿಬಂದ ಅದೃಷ್ಟ ಮತ್ತು ಬೆಂಬಲದ ಮಹಾಪೂರವನ್ನು ಜೀರ್ಣಿಸಿಕೊಳ್ಳುವ ಶಕ್ತಿಯೇ ಕು.ಚಂ.ನಾಥರಿಗಿರಲಿಲ್ಲ.

ಈ ಕುಮಾರ ಚಂದ್ರಶೇಖರನಾಥರದೂ ವಿಚಿತ್ರ ಕತೆಯೇ. ಹೆಸರಿಗಷ್ಟೇ ಸ್ವಾಮಿ. ನೆಪಕ್ಕೊಂದು ಮಠ. ಯಾವುದೋ ಕಾಲಕ್ಕೆ ತೀರಿಕೊಂಡಿದ್ದ ತನ್ನ ತಮ್ಮನ ಪತ್ನಿ ದೇವಮ್ಮ ಮತ್ತು ಆಕೆಯ ಮಕ್ಕಳನ್ನು ತಂದು ಮಠದಲ್ಲೇ ನೆಲೆಗೊಳಿಸಿದ್ದರಲ್ಲ; ಸಹಜವಾಗೇ ಸ್ವಾಮಿಯ ಜುಟ್ಟು ದೇವಮ್ಮನ ಕೈಯಲ್ಲಿತ್ತು. ಆಕೆ ನಿಲ್ಲು ಎಂದರೆ ನಿಲ್ಲಬೇಕು ಕೂರು ಎಂದರೆ ಕೂರಬೇಕು. ಇದು ಸ್ವಾಮಿಯ ದುರ್ಗತಿ. ಅದೇನು ದೌರ್ಬಲ್ಯವೋ ಗೊತ್ತಿಲ್ಲ; ಮಠಕ್ಕೆ ಬರುತ್ತಿದ್ದ ಕಾಣಿಕೆ, ಉತ್ಪತ್ತಿ, ಸ್ವಾಮಿಯ ದಿನಚರಿ ಎಲ್ಲವನ್ನೂ ಈ ದೇವಮ್ಮ ನಿಯಂತ್ರಿಸುತ್ತಿದ್ದಳು.

ಅದೂ ಯಾವ ಮಟ್ಟಿಗೆ ಎಂದರೆ ದೇವಮ್ಮನ ಮಗ ಬಾಲು ಎಂಬಾತನೇ ಸ್ವಾಮಿಯ ಕಾರಿಗೆ ಡ್ರೈವರಾಗಿದ್ದ. ಸ್ವಾಮಿ ಎಲ್ಲಿಗೆ ಹೋಗುತ್ತಾರೆ, ಏನು ಮಾಡುತ್ತಾರೆ ಇತ್ಯಾದಿಗಳೆಲ್ಲವನ್ನೂ ಈತನೇ ನಿರ್ಧರಿಸುತ್ತಿದ್ದ. ಸಿದ್ದಪ್ಪ ಮತ್ತು ಮುಂಗಾರು ಮಳೆ ಕೃಷ್ಣಪ್ಪನವರ ಕೃಪೆಯಿಂದ ಸಿಕ್ಕಾಪಟ್ಟೆ ಕಾಣಿಕೆಗಳು ಬಂದವಾದರೂ ಅದನ್ನೆಲ್ಲ ಮಠದ ಅಭಿವೃದ್ಧಿಗೆ ತೊಡಗಿಸುವ ಬದಲು ಸ್ವಾಮೀಜಿ ಮೂರು ಸೈಟು ಖರೀದಿಸಿ ಅವಷ್ಟನ್ನೂ ದೇವಮ್ಮನ ಮಗಳು ಶ್ವೇತಾ ಹೆಸರಿಗೆ ಬರೆದುಬಿಟ್ಟರು!

ಆಗ ಕೆಂಗೇರಿ ಮಠಕ್ಕೆ ಉತ್ತರಾಧಿಕಾರಿಯಾಗಿದ್ದದ್ದು ಸಿದ್ದರಾಮ ಚೈತನ್ಯ. ತನ್ನ ಮತ್ತು ದೇವಮ್ಮನ ಭಾನಗಡಿ ಎಲ್ಲಿ ಬಯಲಾಗುತ್ತೋ ಎಂದು ಹೆದರಿದ ಕು.ಚಂ.ನಾಥರು ತಮ್ಮನ ಮಗ ಡ್ರೈವರ್ ಬಾಲುವನ್ನು ಛೂ ಬಿಟ್ಟು ಸಿದ್ದರಾಮ ಚೈತನ್ಯರಿಗೆ ಕಾಟಕೊಟ್ಟು ಓಡಿಸಿಬಿಟ್ಟ. ಆ ನಂತರ ಕಿರಿಯ ಸ್ವಾಮಿಯಾಗಿ ಬಂದವರು ಸಿದ್ಧಿನಾಥ ಸ್ವಾಮೀಜಿ. ಒಂದೇ ವರ್ಷಕ್ಕೆ ಸಿದ್ಧಿನಾಥರದು ನಾಯಿಪಾಡಾಯಿತು. ಮಠದಿಂದ ತೊಲಗಲಿ ಎಂದೇ ಬಾಲನಿಂದ ಕಿರಿಕ್ಕು ಮಾಡಿಸಿ ಸಿದ್ಧಿನಾಥರಿಗೆ ಊಟ ಕೊಡುವುದನ್ನೇ ನಿಲ್ಲಿಸಿಬಿಟ್ಟರು. ಅರೆಹೊಟ್ಟೆಗೆ ಬಿದ್ದು ಕೊರಗಿಕೊರಗಿಯೇ ಸಣ್ಣಗಾದ ಸಿದ್ಧಿನಾಥರು ಕೊನೆಗೊಮ್ಮೆ ಕೆಂಗೇರಿ ಪೀಠವನ್ನೇ ಬಿಟ್ಟು ಮಾವಿನಕೆರೆಯಲ್ಲಿ ಪ್ರತ್ಯೇಕ ಮಠಸ್ಥಾಪಿಸಿಕೊಂಡರು.

ತದನಂತರ ಕಿರಿಯ ಸ್ವಾಮಿಯಾಗಿ ಬಂದವರು ವೈದ್ಯ ಸಂಗಣ್ಣ. ಚಿತ್ರದುರ್ಗದ ಮುರುಘಾ ಮಠದ ಶಿಷ್ಯರಾದ

ಅರಳು ಮರುಳಾ ಅಥವಾ ನಾದಿನಿಯ ಋಣವಾ?

ಕೆಂಗೇರಿ ಮಠದ ಮೂಲಗಳೇ ಹೇಳುವಂತೆ ಚಂದ್ರಶೇಖರನಾಥರ ಇತ್ತೀಚಿನ ವರ್ತನೆಗಳೇ ವಿಚಿತ್ರವಾಗಿವೆ. ವಿಪರೀತ ಕುಟುಂಬ ವ್ಯಾಮೋಹಕ್ಕೆ ಬಿದ್ದು ಭಕ್ತಾದಿಗಳು ಕೊಟ್ಟ ಕಾಣಿಕೆಯನ್ನೆಲ್ಲ ನಾದಿನಿ ದೇವಮ್ಮನ ಮಡಿಲಿಗೆ ಹಾಕುತ್ತಾರೆ. ದೇವಮ್ಮನ ಮಗ ಡ್ರೈವರ್ ಬಾಲು ಇಡೀ ಮಠವನ್ನೇ ಗುತ್ತಿಗೆ ಹಿಡಿದಂತೆ ಕಂಡಕಂಡವರ ಮೇಲೆ ದಬ್ಬಾಳಿಕೆ ನಡೆಸುತ್ತಾನೆ. ಸಂಜೆಯಾದರೆ ಸಾಕು ಮಠದ ಆವರಣದಲ್ಲೇ ತನ್ನ ಪೋಲಿ ಪಟಾಲಂ ಸೇರಿಸಿಕೊಂಡು ಗುಂಡು ಹಾಕುತ್ತಾನೆ. ಇದನ್ನು ಕಣ್ಣಾರೆ ಕಂಡ ಯಾರಿಗಾದರೂ ಮಠದ ಮೇಲಾಗಲಿ ಸ್ವಾಮಿಯ ಬಗ್ಗೆಯಾಗಲಿ ಹೇಗೆ ಗೌರವ ಬಂದೀತು?

ಚಂದ್ರಶೇಖರನಾಥರ ವೈಯಕ್ತಿಕ ಖಯಾಲಿಗಳೇ ಅಂಥದ್ದು. ಶುರುವಿನಿಂದ ನಾದಿನಿಯ ಮಕ್ಕಳು ಮತ್ತವರ ಆಸ್ತಿಪಾಸ್ತಿಯ ಬಗ್ಗೆ ವಹಿಸಿದ್ದ ಕಾಳಜಿಯನ್ನು ಮಠದತ್ತ ತೋರಲೇ ಇಲ್ಲ. ತಲಕಾಡಿನ ರಂಗನಾಯಕಮ್ಮ ಎಂಬಾಕೆ ತನ್ನ ನಿವೃತ್ತಿಯ ಬಾಬತ್ತಿನಿಂದ ಮೂರು ಲಕ್ಷ ತಂದು ಸ್ವಾಮಿಗೆ ಸಾಲ ಅಂತ ಕೊಟ್ಟವಳು ಇವತ್ತಿಗೂ ಮಠದ ಮುಂದೆ ನಿಂತು ಶಾಪ ಹಾಕುತ್ತಿದ್ದಾಳೆ. ಮಠದಲ್ಲೇ ಕೆಲಸಕ್ಕಿದ್ದ ರಾಜೇಶ್ವರಿಗೂ ನಾದಿನಿ ದೇವಮ್ಮನಿಗೂ ಮಾರಾಮಾರಿಯೇ ನಡೆದು ಹೋಯ್ತು. ಈಗ ಟ್ರಸ್ಟಿಗಳೆಲ್ಲ ಸೇರಿ ದೇವಮ್ಮನನ್ನೇ ಹೊರಹಾಕಿದ ಮೇಲೆ ಚಂದ್ರಶೇಖರನಾಥರಿಗೆ ತಲೆಯೇ ಕೆಟ್ಟಂತಾಗಿದೆ. ಇದ್ದಕ್ಕಿದ್ದಂತೆ ಸಿಡಿಮಿಡಿಗೊಳ್ಳುತ್ತಾರೆ. ಟ್ರಸ್ಟಿಗಳನ್ನು ಬಾಯಿಗೆ ಬಂದಂತೆ ಬಯ್ಯುತ್ತಾರೆ. ಯಾರಾದರೂ ದೇವೇಗೌಡರ ಹೆಸರೆತ್ತಿದರೆಂದರೆ 'ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಅಂತ ಅವರ ತೀಟೆಗೆ ಮಾಡಿಕೊಂಡ್ರೆ ಅದಕ್ಕೂ ನನಗೂ ಏನಯ್ಯಾ ಸಂಬಂಧ?' ಎಂದು ವಿನಾಕಾರಣ ರೇಗಾಡುತ್ತಾರೆ.

ಅತ್ತ ದೇವೇಗೌಡರಿಂದಲೂ ಮತ್ತೊಂದೆಡೆ ಟ್ರಸ್ಟಿಗಳಿಂದಲೂ ಸ್ವತಂತ್ರವಾಗಿ ತನ್ನ ಖಯಾಲಿಗೆ ತಕ್ಕಂತೆ ಬದುಕುವುದು ಚಂದ್ರಶೇಖರನಾಥರ ಉದ್ದೇಶವಿರಬೇಕು, ಅದಕ್ಕೇ ಬ್ರಾಹ್ಮಣನನ್ನು ತಂದು ಉತ್ತರಾಧಿಕಾರಿ ಮಾಡಿ ತನ್ಮೂಲಕ ದೇವೇಗೌಡರಿಗೆ ಗುಡ್‌ಬೈ ಹೇಳುತ್ತಿದ್ದಾರೆ!




...ಆರೇ ತಿಂಗಳಿಗೆ ಕು.ಚಂ. ನಾಥರಿಗೆ ಗುಡ್‌ಬೈ ...ಬಿಟ್ಟರು. ಕೊನೆಗೆ ರಮೇಶ್ ಎಂಬ ಗೌಡರ ...ಮಗನೊಬ್ಬನನ್ನು ಕರೆತಂದು ಆತನಿಗೆ ದೀಕ್ಷೆ ಕೊಟ್ಟು ...ದು ಸ್ವಾಮಿ ಮಾಡುತ್ತೇನೆಂದು ಕು.ಚಂ.ನಾಥರು ...ಕೊಂಡರಾದರೂ ಡ್ರೈವರ್ ಬಾಲು ಮತ್ತು ನಾದಿನಿ ...ಮ್ಮನ ಕಾಟ ತಾಳಲಾರದೆ ಒಂದೂವರೆ ವರ್ಷಕ್ಕೆ ...ಶ್ ಓಟಕಿತ್ತ.

...ಹುಳುಕು ಕೆಂಗೇರಿ ಆಶ್ರಮದಲ್ಲೇ ಇತ್ತು. ತನ್ನ ಬಣ್ಣವೆಲ್ಲಿ ...ಬಯಲಾಗುತ್ತೊ ಎಂದು ಬಂದ ಬಂದ ಕಿರಿಯ ಸ್ವಾಮಿಗಳ ...ದ್ಧ ಕು.ಚಂ.ನಾಥರೇ ಕತೆಕಟ್ಟುತ್ತಿದ್ದರು. ಆತ ಹೆಂಗಸರ ...ಡೆ ಮಾತಾಡ್ತಾನೆ, ಕೊಳಕು, ಪುಕ್ಕಲ, ಇವತ್ತಲ್ಲ ನಾಳೆ ...ಜತಾ ಓಡಿ ಹೋಗ್ತಾನೆ ಎಂದು ತನ್ನದೇ ಕಿರಿಯ ...ಬಯ ವಿರುದ್ಧ ಗೇಲಿ ಮಾಡಿ ಪುಕಾರೆಬ್ಬಿಸುತ್ತಿದ್ದ ...ಶೇಖರನಾಥರ ಬಳಿ ಯಾರು ತಾನೇ ಶಿಷ್ಯತ್ವ ...ತಿಕೊಂಡಿರಲು ಸಾಧ್ಯ?

...ಇಂಥ ಸ್ವಾಮಿಯನ್ನು ಆದಿಚುಂಚನಗಿರಿಗೆ ...ರ್ಯಾಯ ಸ್ವಾಮೀಜಿ ಎಂದು ಬಿಂಬಿಸಹೊರಟ ...ವೇಗೌಡರಾಗಲಿ, ಸಿದ್ದಪ್ಪ ಮತ್ತು ಮುಂಗಾರು ಮಳೆ ...ಪ್ಪರಾಗಲಿ ತಾವೆಂಥ ತಪ್ಪು ...ತುತ್ತಿದ್ದೇವೆಂಬುದನ್ನು ಅರಿಯುವ ಹೊತ್ತಿಗಾಗಲೇ ...ಮಿಂಚಿತ್ತು.

...ಕೊನೆಗೆ ಸಿದ್ದಪ್ಪ ...ಕೃಷ್ಣಪ್ಪ ಮಠಕ್ಕೆ ...ವುದನ್ನೇ ...ಬಿಟ್ಟರು. ಕಳೆದೆರಡು ...ಗಳಿಂದ ಅತ್ತ ...ಮಿಗಳೂ ಇಲ್ಲದೇ ಇತ್ತ ...ಗಳೂ ತಲೆಹಾಕದೇ ...ಥವಾದ ಕೆಂಗೇರಿ ...ಕ್ಕೆ ಮತ್ತೆ ಕಳೆ ...ದ್ದು ಇಲ್ಲಿಗೆ ಆರು ...ಳ ಹಿಂದಷ್ಟೇ.



...ಕಂಗಾಲಾದ ...ಶೇಖರನಾಥರು ಮತ್ತೆ ಸಿದ್ದಪ್ಪನವರ ಕಾಲಿಗೆ ಬಿದ್ದು ...ದ ತಪ್ಪಾಯ್ತು, ಇನ್ಮುಂದೆ ನೀವು ಹೇಳಿದಂತೆ ...ಕೊಂಡಿದ್ದೀನಿ..' ಎಂದು ಕಣ್ಣೀರಿಟ್ಟಾಗಲೇ ಸಿದ್ದಪ್ಪ ...ಚ್... ಅದ್ಯಾವ್ ಹುಚ್ ಬಡ್ಡೀಮಗ ನಿನಗೆ ಖಾವಿ ...ಕೊಟ್ಟಿದ್ದು? ಮಠ ನಡೆಸೋ ಯೋಗ್ಯತೆ ಇಲ್ಲ ಅಂದ್ರೆ ...ಬಿಟ್ಟ ಜಾಗ ಖಾಲಿ ಮಾಡಯ್ಯಾ...' ಎಂದು ...ಬಿಟ್ಟರು.

...ಇಷ್ಟಾಗ್ಯೂ ದಮ್ಮಯ್ಯ ಗುಡ್ಡೆ ಹಾಕಿದ ...ಶೇಖರನಾಥರಿಗೆ ಸಿದ್ದಪ್ಪ 'ಹಾಗಾದರೆ ಒಂದು ... ಮಾಡು; ಆ ಹೆಂಗಸಿದ್ದಾಳಲ್ಲ; ...ರೋ ದೇವಮ್ಮ ಅಂತ. ಅವಳನ್ನ ...ದಿಂದ ಹೊರಕ್ಕೆ ಕಳಿಸಿಬಿಡು. ...ತ್ತಾನೇ ನಾವೆಲ್ಲ ಮಠಕ್ಕೆ ...ಬರ್ತೀದು' ಎಂದಿದ್ದಾರೆ. ಅದಕ್ಕೂ ...ಕೊಂಡು ಸ್ವಾಮೀಜಿ ದೇವಮ್ಮನನ್ನು ...ದಿಂದ ಸಾಗಹಾಕಿದ್ದಾರೆ. ಇದು ...ಗಿದ್ದೇ ಸಿದ್ದಪ್ಪ ಮತ್ತು ...ಗಾರುಮಳೆ ಕೃಷ್ಣಪ್ಪ ...ತಾದವರೆಲ್ಲ ಮತ್ತೆ ಮಠಕ್ಕೆ ಬಂದು ...ಮುಖಿ ಗಣೇಶನ ದೇವಾಲಯದ ...ಷ್ಠಾಪನಾ ಕಾರ್ಯಕ್ರಮವನ್ನು ...ರಿಯಾಗಿ ಮಾಡುವ ಮೂಲಕ ... ಕೆಂಗೇರಿ ಪೀಠವನ್ನು ಉದ್ಧಾರ ...ಲು ಪಣ ತೊಟ್ಟಿದ್ದಾರೆ. ಅದರಂತೆ ಜೂನ್ ...ನ 4ರವರೆಗೆ ಪಂಚಮುಖಿ ದೇವಾಲಯದ ...ಜೆಗೆಂದು ಸರಿಸುಮಾರು 25 ಸಾವಿರ ಮಂದಿ ...ಗಳನ್ನು ಸೇರಿಸಲು ನಿರ್ಧರಿಸಿದ್ದಾರೆ. ಮಠದಲ್ಲೇ ...ಭಾವಿ ಸಭೆ ನಡೆದಿದೆ. ಜೂನ್ 4ರಂದು ...ವ್ಯ ದೇವೇಗೌಡರೇ ನಿಂತು ಬಂದ ...ಗಳನ್ನುದ್ದೇಶಿಸಿ ಭಾಷಣ ಮಾಡುವ ಕಾರ್ಯಕ್ರಮವೂ ಏರ್ಪಾಡಾಗಿದೆ. 25 ಸಾವಿರದಷ್ಟು ಭಕ್ತಾದಿಗಳಿಗೆ ಊಟದ ವ್ಯವಸ್ಥೆಯೂ ಆಗಿದೆ.

ಯಾವತ್ತು ಜೂನ್ 2ನೇ ತಾರೀಕು ಬಂತೋ ಟ್ರಸ್ಟಿಗಳಾದ ಸಿದ್ದಪ್ಪ, ಕೃಷ್ಣಪ್ಪ ಇತ್ಯಾದಿಗಳಿಗಷ್ಟೇ ಅಲ್ಲ; ಸ್ವತಃ ದೇವೇಗೌಡರಿಗೆ ಭಯಂಕರ ಆಘಾತ ಕಾದಿತ್ತು!

ಯಾವೊಂದು ಕಾರ್ಯಕ್ರಮಕ್ಕೂ ತಲೆಹಾಕದ ಚಂದ್ರಶೇಖರನಾಥರು ಇದ್ದಕ್ಕಿದ್ದಂತೆ ಮಠದಿಂದಲೇ ನಾಪತ್ತೆಯಾಗಿದ್ದರು. ಯಾರೋ ಒಂದಿಬ್ಬರು ಕರೆಯಲು ಹೋದರೆ 'ನನಗೂ ಪಂಚಮುಖಿ ದೇವಸ್ಥಾನಕ್ಕೂ ಏನಯ್ಯ ಸಂಬಂಧ? ನಾನು ಬರಲ್ಲ ಕಣಯ್ಯ, ಯಾರೋ ಪಾದ ಪೂಜೆಗೆ ಕರೆದವ್ರೆ ಅಲ್ಲಿಗೆ ಹೋಗಬೇಕು...!' ಎಂದಿದ್ದೆ ಕಾರು ಹತ್ತಿ ಹೊರಟೇಬಿಟ್ಟರು.

ಮೂರು ದಿನಗಳ ಕಾಲ ನಡೆದ ಯಾವೊಂದು ಕಾರ್ಯಕ್ರಮಕ್ಕೂ ಸ್ವಾಮಿ ಪತ್ತೆಯಿಲ್ಲ. 25 ಸಾವಿರ ಜನಕ್ಕೆ ಅಡುಗೆ ಸಿದ್ಧವಾಗಿತ್ತಾದರೂ ಬಂದದ್ದು ಬರೀ 2 ಸಾವಿರ ಮಂದಿ ಮಾತ್ರ. ಕಾರ್ಯಕ್ರಮದಲ್ಲಾಗಲಿ, ಭಕ್ತಾದಿಗಳನ್ನು ಆಹ್ವಾನಿಸುದರಲ್ಲಾಗಲಿ ಸ್ವಾಮೀಜಿ ನಯಾಪೈಸೆಯ ಆಸಕ್ತಿ ವಹಿಸಲಿಲ್ಲ. ಅಂಥಾ ದೇವೇಗೌಡರೇ ಪ್ರತಿನಿತ್ಯ ಬಂದು ಕಾರ್ಯಕ್ರಮದ ಪೆಂಡಾಲಿನಲ್ಲಿ ಕೂತಿರುತ್ತಿದ್ದರೆ ಸ್ವಾಮೀಜಿ ಕಾಟಾಚಾರಕ್ಕೂ ಬಂದು ದೇವೇಗೌಡರನ್ನು ಮಾತಾಡಿಸಲಿಲ್ಲ. ಯಾರೋ ಪಾದಪೂಜೆಗೆ ಕರೆದವ್ರೆ ಎಂದು ಪಿಳ್ಳೆನೆವ ಕೊಟ್ಟು ಕಾರನ್ನೇರಿ ಹೊರಟುಬಿಡುತ್ತಿದ್ದ ಚಂದ್ರಶೇಖರನಾಥರ ವರ್ತನೆಗಳೇ ವಿಚಿತ್ರವಾಗಿದ್ದವು.

ದೇವೇಗೌಡರಿಗಾದ ಅವಮಾನದ ವಿರುದ್ಧ ನೆರೆದ ಭಕ್ತಾದಿಗಳಷ್ಟೇ ಅಲ್ಲ ಸ್ವತಃ ಟ್ರಸ್ಟಿಗಳೇ ಚಂದ್ರಶೇಖರನಾಥರ ವಿರುದ್ಧ ತಿರುಗಿಬಿದ್ದರು. ಇಂಥ ಅಯೋಗ್ಯನನ್ನು ನಂಬಿ ಹಾಳಾದೆನಲ್ಲ ಎಂದು ದೇವೇಗೌಡರೇ ಹಣೆಚಚ್ಚಿಕೊಂಡರು. ಇಂಥ ಅವಮಾನ, ಅಸಹನೆಯ ಮಧ್ಯೆಯೇ ಟ್ರಸ್ಟಿಗಳಿಗೆ ಮತ್ತೊಂದು ಆಘಾತ ಕಾದಿತ್ತು. ಅದು ಸ್ವಾಮಿ ನಾರಾಯಣಾನಂದ ಸರಸ್ವತಿ ಎಂಬ ತೆಲುಗು ಬ್ರಾಹ್ಮಣನನ್ನು ತನ್ನ ಉತ್ತರಾಧಿಕಾರಿಯನ್ನಾಗಿ ಚಂದ್ರಶೇಖರನಾಥರು ನೇಮಿಸಿದ್ದಾರೆಂಬ ಸುದ್ದಿ!

ಅಲ್ಲಿಗೆ ಆದಿಚುಂಚನಗಿರಿಗೆ ಪರ್ಯಾಯವಾಗಿ ವಿಶ್ವ ಒಕ್ಕಲಿಗರ ಮಹಾಸಂಸ್ಥಾನಮಠ ಕಟ್ಟುವ ದೇವೇಗೌಡರ ಉದ್ದೇಶವೇ ಮಣ್ಣು ಪಾಲಾಗಿತ್ತು. ನಾರಾಯಣಸ್ವಾಮಿ ಆಲಿಯಾಸ್ ನಾರಾಯಣಾನಂದ ಸರಸ್ವತಿ ಈ ಹೊತ್ತಿಗಾಗಲೇ ಮಠ ಹೊಕ್ಕಿ ಶಾಲೆಯ ಅಧಿಕಾರ ವಹಿಸಿಕೊಂಡಾಗಿತ್ತು. ಏನಿದು ಅನ್ಯಾಯ ಎಂದು ಕೇಳಲು ಹೋದ ಕೆಲ ಭಕ್ತರಿಗೆ ಚಂದ್ರಶೇಖರನಾಥರು 'ಇದು ನನ್ನ ಮಠ, ಹತ್ತೆಕರೆ ಜಮೀನು ಈಗಲೂ ನನ್ನ ಹೆಸರಲ್ಲೇ ಇದೆ. ಟ್ರಸ್ಟಿಗಳೇನಿದ್ದರೂ ಒಕ್ಕಲಿಗರ ಪೀಠಕ್ಕೆ ಹೊರತು, ನನ್ನ ಆಸ್ತಿಗಲ್ಲ, ನನಗಿಷ್ಟ ಬಂದೋನ್ನ ಉತ್ತರಾಧಿಕಾರಿ ಮಾಡ್ತೀನಿ. ಅದನ್ನು ಕೇಳೋಕೆ ನೀವ್ಯಾರ್ರೀ...?' ಎಂದು ಝಾಡಿಸಿಬಿಟ್ಟರು.



ಮುಂಗಾರು ಮಳೆ ಕೃಷ್ಣಪ್ಪ

ಇದನ್ನು ಕೇಳಿದ ದೇವೇಗೌಡರು ತಲೆತಲೆ ಚಚ್ಚಿಕೊಂಡಿದ್ದು ಬಿಟ್ಟರೆ ದಕ್ಕಿದ್ದು ಜ್ಞಾನೋದಯ ಮಾತ್ರ. ಅಯೋಗ್ಯನನ್ನು, ಅಪಾತ್ರನನ್ನು ಕರೆತಂದು ಅಟ್ಟಕ್ಕೇರಿಸಿ ಪಟ್ಟಕಟ್ಟಲು ಹೋದರೆ ಇದಕ್ಕಿಂತ ಇನ್ನೇನು ತಾನೇ ಆಗಲು ಸಾಧ್ಯ?

ರಮ್ಯಾಳ ರಹಸ್ಯ ಬಂಗಲೆ

ಆವರೇಜ್ ಒಂದು ಸಿನಿಮಾಗೆ 15 ಲಕ್ಷ ರೂಪಾಯಿ ಸಂಭಾವನೆ ಅಂತಿಟ್ಟುಕೊಂಡರೂ ಅವಳ ಜೀವಮಾನದ ಸಿನಿಮಾ ಗಳಿಕೆ 5 ಕೋಟಿ ರೂಪಾಯಿ ದಾಟುವುದಿಲ್ಲ. ಈಗಿನ ಕನ್ನಡ ನಿರ್ಮಾಪಕರು ಸಿನಿಮಾ ತೆಗೆದು ಮನೆ ಮಠ ಮಾರಿಕೊಂಡು ಬೀದಿಗೆ ಬೀಳುತ್ತಿರುವಾಗ ಈ ರಮ್ಯಾ ಅದು ಹೇಗೆ 4 ಕೋಟಿ ಬೆಲೆಯ ಬಂಗಲೆ ಖರೀದಿಸಲು ಸಾಧ್ಯ?

ನಟಿ ರಮ್ಯಾ ಬಂಗಲೆ ಖರೀದಿಸಿದ್ದಾಳೆ. ಗೃಹ ಪ್ರವೇಶವೂ ಆಗಿದೆ. ಕನ್ನಡ ಸಿನಿಮಾ ಇಂಡಸ್ಟ್ರಿಯ ಬಹುತೇಕ ಜನರಿಗೆ ಗೃಹಪ್ರವೇಶದ ಆಹ್ವಾನವಿರಲಿಲ್ಲ. ಇನ್ನು ಸಿನಿಮಾ ಪತ್ರಕರ್ತರಿಗೆ ರಮ್ಯ ಮನೆ ಲ್ಯಾವೆಲ್ಲೆ ರೋಡಿನಲ್ಲಿದೆ ಎಂಬ ವಿಚಾರ ಕೇಳಿ ಗೊತ್ತೆ ಹೊರತು ಅದನ್ನು ಕಣ್ಣಾರೆ ಕಂಡವರು ವಿರಳ.

ಹಾಗಾಗಿ ಇದನ್ನೊಂದು ರಹಸ್ಯ ಬಂಗಲೆ ಎನ್ನಬಹುದು!

ಹಾಗೆ ಹೇಳಬೇಕೆಂದರೆ ಕನ್ನಡಿಗರಿಗೆ ಈ ಪ್ರತಿಭಾವಂತ ನಟಿ ರಮ್ಯಾಳ ಬದುಕಿನ ಅನೇಕ ವಿಚಾರಗಳೇ ಗೊತ್ತಿಲ್ಲ. ಅದೇನು ಅನಿವಾರ್ಯವಲ್ಲವಾದರೂ ರಮ್ಯಾ ಪ್ರಖ್ಯಾತ ನಟಿಯಾಗಿರುವುದರಿಂದ ಜನರಿಗೆ ಸಹಜವಾಗಿಯೇ ಕುತೂಹಲ ಇದ್ದೇ ಇರುತ್ತದೆ ತಾನೆ? ಆದರೆ ತನ್ನ ಮನೆ, ಅಪ್ಪ-ಅಮ್ಮ ಹಾಗೂ ಪರ್ಸನಲ್ ವಿಚಾರಗಳು ಬಂದಾಗೆಲ್ಲಾ ರಮ್ಯಾ ರಾಂಗ್ ಆಗಿ ಬಿಡುತ್ತಾಳೆ. ಪತ್ರಿಕೆಗಳು ಇಂತಹ ವಿಚಾರ ಬರೆಯದಂತೆ ಕೋರ್ಟಿಗೂ ಹೋಗಿದ್ದಾಳೆ ರಮ್ಯಾ.

ಆದರೂ ಕೂಡಾ ರಮ್ಯಾ ಮುಚ್ಚಿಡಲಾಗದ ಕೆಲ ಸಂಗತಿಗಳಿವೆ. ಈಕೆ ಇತ್ತೀಚಿನ ವರ್ಷಗಳಲ್ಲಿ ಕನ್ನಡ ಸಿನಿಮಾ ಕಂಡ ಅತ್ಯುತ್ತಮ ನಟಿ, ಪಕ್ಕಾ ಪ್ರೊಫೆಷನಲ್. ಜೊತೆಗೆ ಇಡೀ ಕರ್ನಾಟಕಕ್ಕೆ ಹಂಚುವಷ್ಟು ಜಂಭ ತುಂಬಿಕೊಂಡಿರುವ ಹುಡುಗಿ. ಬಹುಶಃ ಪೆದ್ದುತನದಲ್ಲಿ ರಮ್ಯಾಳ ಲೆವೆಲ್‌ಗೆ ಬರುವಂಥ ನಟಿಯರು ಇಡೀ ರಾಜ್ಯದಲ್ಲೇ ಇಲ್ಲ. ಒಂದು ಸ್ಯಾಂಪಲ್ ಹೇಳಬೇಕೆಂದರೆ ಈಗ್ಗೆ ಕೆಲ ವರ್ಷಗಳ ಹಿಂದೆ ಎಸ್.ಎಂ. ಕೃಷ್ಣ ಸಿಎಂ ಆಗಿದ್ದಾಗ ಒಂದು ಸಂಜೆ ಇನ್ನೂ ಶೂಟಿಂಗ್ ನಡೆಯುತ್ತಿದ್ದಾಗಲೇ ರಮ್ಯಾ ಗಡಿಬಿಡಿಯಿಂದ ಹೊರಟಳಂತೆ. 'ಯಾಕಮ್ಮ?' ಅಂತಾ ನಿರ್ದೇಶಕ ಕೇಳಿದಾಗ

"ನಾನೀಗ ಅರ್ಜೆಂಟಾಗಿ ಕ್ಯಾಬಿನೆಟ್ ಮೀಟಿಂಗ್‌ಗೆ ಹೋಗಬೇಕು" ಅಂದಿದ್ದಳು!

ಅದಲ್ಲವಾ ತಮಾಷೆ.

ಈ ಪೆದ್ದು ನಟಿ ಕ್ಯಾಬಿನೆಟ್ ಮೀಟಿಂಗ್ ಅಂದರೆ ತಾಜ್‌ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ನಡೆಯುವ ಪಾರ್ಟಿ ಅಂದುಕೊಂಡಿದ್ದಳೂಂತ ಕಾಣುತ್ತದೆ. ರಮ್ಯಾಳ ಈ ಅಪ್ರಬುದ್ಧ ಅವಿವೇಕತನದ ಮಾತು, ಧಿಮಾಕುಗಳು ಆಗ ಕನ್ನಡ ಇಂಡಸ್ಟ್ರಿಯಲ್ಲಿ ನಗೆಪಾಟಲಾಗಿದ್ದವು.

ಇನ್ನೊಮ್ಮೆ ಮುಖ್ಯಮಂತ್ರಿ ಯಡಿಯೂರಪ್ಪರನ್ನು ಸುವರ್ಣ ಚಾನಲ್‌ಗಾಗಿ ಇಂಟರ್‌ವ್ಯೂ ಮಾಡುವಾಗ ರಮ್ಯಾ ಎಂತಾ ಪೆದ್ದಿ ಎನ್ನುವುದನ್ನು ಜನ ನೋಡಿದರು.

"ನೀವು ಫೇಷಿಯಲ್-ಪೆಡಿಕ್ಯೂರ್ ಮಾಡಿಸಿಕೊಳ್ತೀರಾ?" ಅಂತೆಲ್ಲಾ ಪ್ರಶ್ನೆ ಕೇಳಿ ಜನ ಉರುಳಾಡಿ ನಗುವಂತೆ ಮಾಡಿದ್ದಳು ರಮ್ಯಾ. ಮತ್ತೊಮ್ಮೆ "ವಿಜಯ್ ಮಲ್ಯ ಕಿಂಗ್‌ಫಿಷರ್ ಏರ್‌ಲೆನ್ಸ್ ಮಾಡಿ ಒಳ್ಳೇ ಸೋಷಿಯಲ್ ಸರ್ವಿಸ್ ಮಾಡ್ತಿದ್ದಾರೆ" ಅಂದಿದ್ದಳು.

ಇದೆಲ್ಲಾ ರಮ್ಯಾಗೆ ಕಾಮನ್ ಸೆನ್ಸ್ ಇಲ್ಲವೇ ಇಲ್ಲ ಎಂಬುದಕ್ಕೆ ಪುರಾವೆಗಳು. ಅದೆಲ್ಲಾ ಬಿಡಿ. 2003 ರಲ್ಲಿ 'ಅಭಿ' ಸಿನಿಮಾ ಮೂಲಕ ನಟಿಯಾದ ರಮ್ಯಾ ಈ ಏಳು ವರ್ಷಗಳಲ್ಲಿ 37 ಸಿನಿಮಾ ಮಾಡಿದ್ದಾಳೆ. ಅದರಲ್ಲಿ 28 ಕನ್ನಡ, 2 ತೆಲುಗು, 7 ತಮಿಳು ಸಿನಿಮಾಗಳಿವೆ.

ಆವರೇಜ್ ಒಂದು ಸಿನಿಮಾಗೆ 15 ಲಕ್ಷ ರೂಪಾಯಿ ಸಂಭಾವನೆ ಅಂತಿಟ್ಟುಕೊಂಡರೂ ಅವಳ ಜೀವಮಾನದ ಸಿನಿಮಾ ಗಳಿಕೆ 5 ಕೋಟಿ ರೂಪಾಯಿ ದಾಟುವುದಿಲ್ಲ. ಈಗಿನ ಕನ್ನಡ ನಿರ್ಮಾಪಕರು ಸಿನಿಮಾ ತೆಗೆದು ಮನೆ ಮಠ ಮಾರಿಕೊಂಡು ಬೀದಿಗೆ ಬೀಳುತ್ತಿರುವಾಗ ಈ ರಮ್ಯಾ ಅದು ಹೇಗೆ 4 ಕೋಟಿ ಬೆಲೆಯ ಬಂಗಲೆ ಖರೀದಿಸಲು ಸಾಧ್ಯ?


ದುಡಿದದ್ದನ್ನು ಉಳಿಸಿಕೊಳ್ಳುವ ಜೀವನ ಶೈಲಿಯಲ್ಲ ಆಕೆಯದ್ದು. ಮೇಕಪ್ಪು, ಮೇಕಪ್ ಮ್ಯಾನು, ಬಟ್ಟೆ ಒಡವೆ, ಸುತ್ತಾಟದ ಖರ್ಚು ಲೆಕ್ಕ ಹಾಕಿದರೆ ಒಂದಕ್ಕೊಂದು ತಾಳೆಯೂ ಆಗುವುದಿಲ್ಲ.

ಒಂದು ರೀತಿ ಅಜ್ಜಿ ನೂತದ್ದೆಲ್ಲಾ ಮೊಮ್ಮಗನ ಉಡಿದಾರಕ್ಕೆ ಎಂಬಂತಿದೆ ರಮ್ಯಾಳ ದುಡಿಮೆ.

ಹಾಗಾದರೆ ಇಷ್ಟು ದೊಡ್ಡ ಬಂಗಲೆ ಖರೀದಿಸಲು ರಮ್ಯಾಳಿಗೆ ಹೇಗೆ ಸಾಧ್ಯವಾಯಿತು.

ಅವಳ ಗಾಡ್‌ಫಾದರ್ ಆರ್.ಟಿ.ನಾರಾಯಣರ ಹಣವಾ ಇದು? ಹೆಂಡೋದ್ಯಮಿ ಆದಿಕೇಶವುಲುನ ಮಗ ಶ್ರೀನಿವಾಸ ರಮ್ಯಾಳ ಅಭಿಮಾನಿ. ರಮ್ಯಾಳ ಹತ್ತಿರ ಈಗಿರುವ 60 ಲಕ್ಷದ ಬೆಂಜ್ ಇ-ಸಿ ಸೀರೀಸ್ ಕಾರ್ ಅನ್ನು ಈ ಶ್ರೀನಿವಾಸ 'ನಾನೇ ಉಡುಗೊರೆಯಾಗಿ ಕೊಟ್ಟೆ' ಎಂದು ಹೇಳಿಕೊಂಡು ತಿರುಗುತ್ತಿದ್ದಾನಂತೆ.

ಇದೆಲ್ಲಾ ಏನೇ ಇರಲಿ, ಹೊಸ ಮನೆಯಲ್ಲಿ ತನ್ನ 'ಸ್ವಂತ' ರಹಸ್ಯ ಬಂಗಲೆಯಲ್ಲಿ ಎಲ್ಲರ ಮುದ್ದಿನ ರಮ್ಯಾ ಚೆನ್ನಾಗಿರಲಿ.






ಮಂಡ್ಯ ಜಿಲ್ಲಾಧಿಕಾರಿ ಪಿ.ಸಿ. ಜಾಫರ್ ಎಲ್ಲಿಂದ ವಕ್ಕರಿಸಿದನಯ್ಯ ಈವಯ್ಯ?!

"ಇಂತಹ ಡಿಸಿಯನ್ನು ನಾವೆಂದೂ ನೋಡಿರಲಿಲ್ಲ!" ಇದು ಮಂಡ್ಯದ ಪ್ರಜ್ಞಾವಂತರು ಆಶ್ಚರ್ಯಘಾತದಿಂದ ಮಾಡುತ್ತಿರುವ ಉದ್ಗಾರವಾಗಿದೆ. ಬಹುದಿನಗಳಿಂದ ಜಿಲ್ಲಾಧಿಕಾರಿಯೇ ಇರದ ಮಂಡ್ಯಕ್ಕೆ ಈಗ ಪಿ.ಸಿ. ಜಾಫರ್ ಎಂಬ ಕೇರಳ ಮೂಲದ ಎಳಸು ವ್ಯಕ್ತಿಯೊಬ್ಬ ವಕ್ಕರಿಸಿದ್ದಾನೆ. ಕಳೆದ ಕೆಲವು ವರ್ಷಗಳಲ್ಲಿ ಎಲ್.ಕೆ. ಅತೀಕ್, ಮಂಜುನಾಥ್ ಪ್ರಸಾದ್ ಮತ್ತು ಮಹೇಶ್ವರ ರಾವ್‌ರಂಥ ಒಳ್ಳೆಯ ಜಿಲ್ಲಾಧಿಕಾರಿಗಳು ಕೆಲಸ ಮಾಡಿದ್ದ ಮಂಡ್ಯದಲ್ಲಿ ಜಾಫರ್ ತೋರುತ್ತಿರುವ ವರಸೆಗಳು ಜನರನ್ನು ಬೆಚ್ಚಿಬೀಳಿಸಿವೆ.

ಮಂಡ್ಯ ಜಿಲ್ಲಾಸ್ಪತ್ರೆ ನಾನ್ ಕ್ಲಿನಿಕಲ್ ಕಾರ್ಮಿಕರ ಸಮಸ್ಯೆಯ ಸಂದರ್ಭದಲ್ಲಿ ಜಾಫರ್ ನಡೆದುಕೊಂಡ ರೀತಿಯಿಂದ ಈತನ ಅನನುಭವ ಮತ್ತು ಎಳಸುತನ ಎಲ್ಲರಿಗೂ ಗೊತ್ತಾಗಿದೆ. 40 ಜನ ಕಾರ್ಮಿಕರನ್ನು ಅಲ್ಲಿನ ಗುತ್ತಿಗೆದಾರ ಏಕಾಏಕಿ ಕೆಲಸದಿಂದ ಕಿತ್ತು ಹಾಕಿದ್ದರಿಂದ ಕಳೆದ 2 ತಿಂಗಳಿಂದ ಮಂಡ್ಯದಲ್ಲಿ ಈ ಕಾರ್ಮಿಕರ ಹೋರಾಟ ನಡೆದಿದೆ. ಮಂಡ್ಯದ ವಿವಿಧ ಪ್ರಗತಿಪರ ಮತ್ತು ಕಾರ್ಮಿಕ ಸಂಘಟನೆ ಗಳು ಆ ಚಳವಳಿಗೆ ಬೆಂಬಲ ನೀಡಲಾಗಿ ಅದು ಹಲವು ತಿರುವುಗಳನ್ನು ಪಡೆದು ಕೊಂಡಿದೆ. ಇಡೀ ಪ್ರಕರಣದಲ್ಲಿ ಜಿಲ್ಲಾಧಿ ಕಾರಿಯು ಗುತ್ತಿಗೆದಾರನಿಗೇ ಮತ್ತಷ್ಟು ಅನು ಕೂಲ ಮಾಡಿಕೊಡಲು ಪ್ರಯತ್ನ ಹಾಕಿರುವುದು ಎದ್ದು ಕಂಡಿದೆ. ಅದೆಲ್ಲಕ್ಕೆ ಕಳಶವಿಟ್ಟಂತೆ ಕಳೆದ ಜುಲೈ 15ರಂದು ತನ್ನ ಮನೆಯ ಮುಂದೆ ಪ್ರತಿಭಟನೆ ಮಾಡಿದ ಕಾರ್ಮಿಕರಿಗೆ ಸಾಂತ್ವನ ಹೇಳುವ ಬದಲು, ಅವರನ್ನು ಜೈಲಿಗೆ ಕಳಿಸಿದ್ದು ಹೊಸ ಜಿಲ್ಲಾಧಿಕಾರಿ ಮಂಡ್ಯಕ್ಕೆ ಬಂದು ಮಾಡಿದ ದೊಡ್ಡ ಸಾಧನೆಯಾಗಿದೆ.



ರಾಮಲಿಂಗೇಗೌಡ

ಜಿಲ್ಲಾಧಿಕಾರಿಯಾಗಿ ಮಂಡ್ಯಕ್ಕೆ ಬಂದ ಕೆಲವೇ ದಿನಗಳಲ್ಲಿ ಈತನ ನಡವಳಿಕೆ ಎಲ್ಲರಿಗೂ ಆಶ್ಚರ್ಯವನ್ನು ತಂದಿತು. ಮೊದಲು ಪತ್ರಕರ್ತರ ಮೇಲೆ ಜಾಫರ್ ಕಿಡಿ ಕಾರಿದರು. ತನ್ನ ಛೇಂಬರ್‌ನಲ್ಲಿ ಪತ್ರಕರ್ತರ್‍ಯಾರೂ ಫೋಟೋ ತೆಗೆಯಬಾರದು ಎಂದು ದಬಾಯಿಸಿ ಹೊರಗೆ ಕಳಿಸಿದ್ದರು. ಇದಾದ ಕೆಲವೇ ದಿನಗಳಲ್ಲಿ ಪಂಚಾಯತಿಗಳ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳಿಗೆ ಮೀಸಲು ನಿಗದಿ ಮಾಡುವ ಸಭೆಗಳಲ್ಲೂ ಜಿಲ್ಲಾಧಿಕಾರಿ ಗಲಾಟೆ ಮಾಡಿಕೊಂಡರು. ಮದ್ದೂರು ಮತ್ತು ಶ್ರೀರಂಗಪಟ್ಟಣ ಸಭೆಗಳಲ್ಲಿ ಗ್ರಾಮಪಂಚಾಯತಿ ಸದಸ್ಯರ ಮೇಲೆ ಡಿಸಿ ಹರಿಹಾಯ್ದಿದ್ದರು. ನಂತರದಲ್ಲಿ ಮಂಡ್ಯದ ವಕೀಲರ ಸಂಘದ ಪದಾಧಿಕಾರಿಗಳು ಭೇಟಿ ಮಾಡಿದಾಗ ಅವರೂ ಜಾಫರ್ ಪ್ರತಾಪದ ರುಚಿ ನೋಡಬೇಕಾಗಿ ಬಂತು. ಸಾಮಾನ್ಯವಾಗಿ ಸಿವಿಲ್ ಕೋರ್ಟ್ ರಜೆಯ ಸಂದರ್ಭದಲ್ಲಿ ಡಿಸಿ ಕೋರ್ಟ್‌ಗೂ ರಜೆ ನೀಡುತ್ತಾರೆ. ಅದರಂತೆ ಈ ಬಾರಿಯೂ ವೆಕೇಷನ್ ಕೊಡಿ ಎಂದು ಕೇಳಲು ಹೋದ ವಕೀಲರ ಸಂಘದ ಪದಾಧಿಕಾರಿಗಳ ಜೊತೆ ಡಿಸಿ ಕನಿಷ್ಠ ಸೌಜನ್ಯವನ್ನೂ ತೋರಿಸಿಲ್ಲ. ಯಾರು ಏನೇ ಪ್ರಶ್ನೆ ಕೇಳಿದರೂ "ನಾನೇನು ಕೇಳಿಕೊಂಡು ಇಲ್ಲಿಗೆ ಬಂದಿಲ್ಲ, ಸೂಟ್‌ಕೇಸ್ ರೆಡಿ ಮಾಡಿಕೊಂಡು ಹೊರಟು ಬಿಡುತ್ತೇನೆ" ಎನ್ನುವ ಪೌರುಷವನ್ನು ಮಾತ್ರ ಆಗಾಗ ತೋರಿಸುತ್ತಾ ಇರ್ತಾರೆ.

ಪತ್ರಕರ್ತರು, ವಕೀಲರು ಈತನ ಆಟಾಟೋಪವನ್ನು ಹೇಗೋ ಎದುರಿಸಿದರು. ಆದರೆ ಬಡ ಆಸ್ಪತ್ರೆ ಗುತ್ತಿಗೆ ಕಾರ್ಮಿಕರು ಡಿಸಿಯ ಪವರ್‌ನ ಮುಂದೆ ಅಸಹಾಯಕರಾದರು.

ತಮ್ಮನ್ನು ಕೆಲಸದಿಂದ ಕಿತ್ತುಹಾಕಿದ್ದುದರ ವಿರುದ್ಧ ನಾನ್ ಕ್ಲಿನಿಕಲ್ ಕಾರ್ಮಿಕರು ಏಪ್ರಿಲ್ 25ರಿಂದ ಮೆಡಿಕಲ್ ಕಾಲೇಜು ಆಸ್ಪತ್ರೆ ಮುಂದೆ ಆಮರಣಾಂತ ಉಪವಾಸ ನಡೆಸಿದ್ದರು. ಆಗ ಮೆಡಿಕಲ್ ಕಾಲೇಜಿಗೆ ವಿವಿಧ ಕಾರಣಕ್ಕೆ ಭೇಟಿ ನೀಡಿದ್ದ ಜಾಫರ್ ಪ್ರತಿಭಟನಾಕಾರರತ್ತ ತಿರುಗಿಯೂ ನೋಡಿರಲಿಲ್ಲ, ಏಕೆಂದರೆ ಇದೇ ಡಿಸಿಯ ಗಮನಕ್ಕೆ, ಉಪವಾಸ ಸತ್ಯಾಗ್ರಹದ ವಿಚಾರವನ್ನು ಅಧಿಕಾರಿಗಳು ತಂದಾಗ "ಎಷ್ಟು ದಿನ ಮಾಡ್ತಾರೆ ಮಾಡಲಿ ಬಿಡಿ. ನಾಲ್ಕು ದಿನದಲ್ಲಿ ಟೆಂಟು ಕಿತ್ತುಕೊಂಡು ಹೋಗ್ತಾರೆ" ಎಂಬ ಮಾತನ್ನು ಅವರು ಆಡಿದ್ದರು. ಆ ಮೂಲಕ ಮೊದಲೇ ಕಾರ್ಮಿಕ ವಿರೋಧಿ ನಿಲುವು ತಾಳಿದ್ದ ಕಂಟ್ರಾಕ್ಟರ್ ಮತ್ತು ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ರಾಮಲಿಂಗೇಗೌಡರಿಗೆ ಮತ್ತಷ್ಟು ಬಲ ಬಂದಿತು.

ನಿರ್ಲಕ್ಷ್ಯ ತೋರಿದ ಡಿಸಿ ವರ್ತನೆ ಬಗ್ಗೆ ಕ್ರೋಧಗೊಂಡ ಪ್ರಗತಿಪರ ಸಂಘಟನೆಗಳ ಮುಖಂಡರು ನೇರವಾಗಿ ಡಿಸಿ ಮನೆಗೇ ಹೋಗಿ ಅವರನ್ನು ಭೇಟಿ ಮಾಡಿದ್ದರು. ಆಗಲೂ ಉದ್ಧಟತನ ತೋರಿದ ಜಾಫರ್ ತಾನು ಆದಷ್ಟು ಬೇಗ ಈ ಕುರಿತು ಸಭೆ ಏರ್ಪಡಿಸುವುದಾಗಿ ತಿಳಿಸಿದ್ದರು. ಅದರಂತೆ ಏ. 30 ರಂದು ಅವರ ಕಚೇರಿಯಲ್ಲೇ ಸಭೆ ಏರ್ಪಾಡಾಯಿತು. ಅದರಲ್ಲಿ ಹೋರಾಟನಿರತ 39 ಜನ ಹಳೇ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳಲು ತೀರ್ಮಾನಿಸಲಾಯಿತು.

ಆದರೆ ಇದು ಜಾರಿಯಾಗಲಿಲ್ಲ. ಖೂಳ ಟೆಂಡರ್‌ದಾರ ಯೋಗೀಶ ಮತ್ತು ಅವನ ಜೊತೆ ಸೇರಿಗೆ ಸವ್ವಾ ಸೇರೆಂಬಂತೆ ಸೇರಿಕೊಂಡಿರುವ ವೈದ್ಯಕೀಯ ಅಧೀಕ್ಷಕ (ಡಿಎಸ್) ಡಾ.ರಾಮಲಿಂಗೇಗೌಡ ದೊಡ್ಡ ನಾಟಕವನ್ನೇ ಆಡಿದರು. ಆಗಲೂ ಕಾರ್ಮಿಕ ಸಂಘದವರು ಡಿಸಿಯನ್ನು ಭೇಟಿ ಮಾಡಲು ಹೋದರೆ ಆತ ಅದಕ್ಕೆ ಅವಕಾಶವನ್ನೇ ಕೊಡದೆ ಪಂಚರಂಗಿ ಆಟವಾಡಿದ. ಹೇಗೂ ಕೆಲಸ ಮಾಡಲು ನಿರ್ಣಯವಾಗಿದೆಯಲ್ಲಾ, ಮಾಡಿ ಎಂದು ಪಿಎ ಕೈಯಲ್ಲಿ ಹೇಳಿ ಕಳಿಸಿದ.

ಡಿಸಿ ಕಚೇರಿಯ ಸಭೆಯ ನಿರ್ಣಯದಂತೆ ಒಂದು ತಿಂಗಳು ಕೆಲಸ ಮಾಡಿ ಕಾರ್ಮಿಕರು ಸಂಬಳ ಕೇಳಿದರೆ ಕಂಟ್ರಾಕ್ಟರ್ ಮತ್ತು ಡಿಎಸ್ ತಮಗೂ ಇದಕ್ಕೂ ಸಂಬಂಧವೇ ಇಲ್ಲವೆಂಬಂತೆ ನಡೆದುಕೊಂಡರು.

ಡಿಎಸ್ ಮೆಡಿಕಲ್ ಕಾಲೇಜಿನ ನಿರ್ದೇಶಕಿಯ ಮೇಲೆ, ನಿರ್ದೇಶಕಿ ಎಸಿಯ ಮೇಲೆ, ಎಸಿ ಡಿಸಿಯ ಮೇಲೆ, ಡಿಸಿ ಎಡಿಸಿ ಮೇಲೆ ಜವಾಬ್ದಾರಿಯನ್ನು ಜಾರಿಸಿದರು. ಎಡಿಸಿ ಇನ್ನಷ್ಟು ದಿನ ಸಮಯ ಕೊಡಿ ಎಂದರು. ಅಷ್ಟು ಸಮಯ ನೀಡಿದ ಕಾರ್ಮಿಕರು ಕೊನೆಗೆ ದಿಕ್ಕುಗಾಣದೆ ಡಿಸಿ ಕಚೇರಿಯ ಮುಂದೆಯೇ 11ನೇ ತಾರೀಕು ಆಮರಣಾಂತ ಉಪವಾಸಕ್ಕೆ ಕೂತರು.

ಅಂದಿನಿಂದ 15 ರವರೆಗೆ ಐದು ದಿನ ಉಪವಾಸ ಮಾಡಿ ಕೆಲವರು ಅಸ್ವಸ್ಥರಾದರೂ, ಡಿಸಿ ತಿರುಗಿಯೂ ನೋಡಲಿಲ್ಲ. 12 ರಂದು ಬಾಲಕಾರ್ಮಿಕರ ದಿನಕ್ಕಾಗಿ ಕಚೇರಿಗೆ ಬಂದಿದ್ದ ಡಿಸಿ ವ್ಯಂಗ್ಯದ ನಗೆ ನಗುತ್ತಾ ಕಚೇರಿಯ ಒಳಗೆ ಹೋಗಿಬಿಟ್ಟಿದ್ದ. ಆ ದಿನ ಮಳೆ ಬಂದಾಗ ಶಾಮಿಯಾನ ಪೂರಾ ಸೋರುತ್ತಾ ಇದ್ದುದರಿಂದ, ಪ್ರತಿಭಟನೆಯಲ್ಲಿ ಇದ್ದವರು ಡಿಸಿ ಕಚೇರಿಯಿದ್ದ ಕಟ್ಟಡದೊಳಗೆ ಹೋಗಿ ನಿಂತರು. ಆದರೆ ಈ ಜಾಫರ್ ಎಂತಹ ಕಟುಕನೆಂದರೆ, ಕೂಡಲೇ ಜವಾನರಿಗೆ ಹೇಳಿ ಎಲ್ಲರನ್ನೂ ಹೊರಗೆ ಕಳಿಸಿದ. ಇದರಿಂದ ರೋಸಿ ಹೋದ ಕಾರ್ಮಿಕರು 15ನೇ ತಾರೀಕು ಡಿಸಿ ಮನೆ ಬಾಗಿಲ ಮುಂದೆ ಕೂತು ಆತನಿಂದ ಸ್ಪಷ್ಟೀಕರಣ ಕೇಳಬೇಕೆಂದು ಹೊರಟರು.

ಅಷ್ಟರಲ್ಲಿ ಕರ್ನಾಟಕ ಜನಪರ ವೇದಿಕೆ, ಕಾರ್ಮಿಕರ ಜಂಟಿ ಕ್ರಿಯಾ ಸಮಿತಿ, ಸ್ಲಂ ಒಕ್ಕೂಟದ ಪದಾಧಿಕಾರಿಗಳು ಉಪವಾಸ ಕೂತಿದ್ದರು. ಎಲ್ಲಾ ಸಂಘಟನೆಗಳ ಕಾರ್ಯಕರ್ತರು - ಅದರಲ್ಲೂ ಪ್ರಮುಖವಾಗಿ ಈ ಕಾರ್ಮಿಕರಿಗೆ ಬೆಂಬಲವಾಗಿದ್ದ ಗುತ್ತಿಗೆ ಪೌರ ಕಾರ್ಮಿಕರು - ಡಿಸಿ ಮನೆಯ ಮುಂದಕ್ಕೆ ಹೋದರು. ಅಲ್ಲಿ ಇವರು ಹೋಗುವ ಹೊತ್ತಿಗೆ ಸರಿಯಾಗಿ ಜಯರಾಮನೆಂಬ ಕಂಟ್ರಾಕ್ಟರ್‌ನ ನೆಂಟ ಡಿಸಿ ಮನೆಯಲ್ಲಿ ಕೂತಿರುವುದು ಕಂಡಿತು.

ತಮ್ಮನ್ನು ಮಾತೇ ಆಡಿಸದ ಡಿಸಿ ಕಂಟ್ರಾಕ್ಟರ್‌ನ ನೆಂಟನ ಜೊತೆ ಮಾಡುವ ವ್ಯವಹಾರವಾದರೂ ಏನು ಎಂದು ಕೆರಳಿದ ಪ್ರತಿಭಟನಾಕಾರರು ಡಿಸಿ ಮನೆಯ ಗೇಟ್ ತೆಗೆದು ಕಾಂಪೌಂಡ್ ಒಳಗೆ ಹೋಗುವ ಮೆಟ್ಟಿಲುಗಳ ಮೇಲೆ ಕೂತು ಘೋಷಣೆ ಕೂಗಲಾರಂಭಿಸಿದರು. ಇಷ್ಟಕ್ಕೆ ಡಿಸಿ ಹೊರಬಂದು ತಮ್ಮ ಅಹವಾಲು ಕೇಳಬಹುದೆಂಬ ನಿರೀಕ್ಷೆಯಲ್ಲಿ ಕೂತಿದ್ದವರಿಗೆ ಕಂಡಿದ್ದು, ಒಂದಾದ ಮೇಲೊಂದರಂತೆ ಬಂದ ಪೊಲೀಸ್ ವ್ಯಾನ್‌ಗಳು ಮತ್ತು ಸಾಲುಸಾಲು ಪೊಲೀಸ್ ಅಧಿಕಾರಿಗಳು. ಹೀಗೆ ಬಂದವರೇ ಯಾವ ಚರ್ಚೆಗೂ ಅವಕಾಶ ನೀಡದೇ ಬೋ... ಮಕ್ಕಳು ಇತ್ಯಾದಿ ಬೈಗುಳ ಬಯ್ಯುತ್ತಾ ಎಲ್ಲ ಪ್ರತಿಭಟನಾಕಾರರನ್ನು ಎತ್ತಿಕೊಂಡು ವ್ಯಾನುಗಳಿಗೆ ತುಂಬಿದರು. ಮಿಕ್ಕ ಒಂದ[illegible] ಜನರನ್ನು ಓಡಿಸಿದರು. ಈ ಪ್ರತಿಭಟನಾಕಾರರ ಮೆ[illegible] ಗಂಭೀರ ರೂಪದ ಕೇಸುಗಳನ್ನು ಹಾಕಬೇಕೆಂದು ಡಿಸಿ[illegible] ನೇರ ಆದೇಶವಿತ್ತಂತೆ. ಹಾಗಾಗಿ ಬಂಧಿತರಿಗೆ ಅಂ[illegible] ನ್ಯಾಯಾಲಯದಲ್ಲೂ ಜಾಮೀನು ಸಿಗಲಿಲ್ಲ.

ಆದರೆ ಡಿಸಿಯ ಪೂರ್ಣರೂಪ ಮತ್ತು ಅವಿವೇಕ[illegible] ಎದ್ದುಕಂಡಿದ್ದು ಆ ದಿನ ಸಂಜೆ. ಬೆಳಗ್ಗೆ ಡಿಸಿ ಮನೆ ಒ[illegible] ನಡೆದಿದ್ದು ಎಲ್ಲಾ ಟಿವಿ ಚಾನೆಲ್‌ಗಳಲ್ಲಿ ಬಿತ್ತರಗೊಳ್ಳುತ್ತಿದ್ದ[illegible] ನಿದ್ದೆಯಿಂದ ಎದ್ದ ಶಾಸಕ ಎಂ.ಶ್ರೀನಿವಾಸ್ ಉಪವಾ[illegible] ಸತ್ಯಾಗ್ರಹದ ಜಾಗಕ್ಕೆ ಬಂದಿದ್ದಾರೆ. ಅಲ್ಲಿ ಇದ್ದ [illegible] ಸಂಘದ ಮುದ್ದೇ ಗೌಡರು, ದಸಂಸದ ರಾಜ್ಯ ಸಂಚಾ[illegible] ವೆಂಕಟಗಿರಿಯಯ್ಯ, ಹಿರಿಯ ಗಾಂಧಿವಾದಿ ಸುರೇ[illegible] ಕೌಲಗಿ ಮತ್ತು ಜನಪರ ವೇದಿಕೆ ಡಾ.ವಾ[illegible] ಇವರುಗಳೊಡನೆ ಡಿಸಿಯನ್ನು ಭೇಟಿ ಮಾಡ[illegible] ಹೋಗಿದ್ದಾರೆ.

ಡಿಸಿ ಛೇಂಬರ್‌ನಲ್ಲಿ ಕೂತ ಕೂಡಲೇ "ನಾನ್ ಕ್ಲಿನಿ[illegible] ಕಾರ್ಮಿಕರ ವಿಚಾರ ಬಿಟ್ಟು ಬೇರೆ ಏನಾದರೂ ಇ[illegible] ಮಾತಾಡಿ, ಬೆಳಗ್ಗೆ ನನ್ನ ಮನೆ ಮುಂದೆ ಬಂದು ಗ[illegible] ಮಾಡಿದವರ ಜೊತೆ ನಾನು ಮಾತನಾಡಲಾರೆ" ಎಂ[illegible] ಡಿಸಿ ಜಾಫರ್ ಹೇಳಿದ್ದಾರೆ. ನಡೆದದ್ದು ಗಲಭೆ [illegible] ಅದೂ ಸಹ ಹೋರಾಟದ ಒಂದು ವಿಧಾನ ಎಂ[illegible] ವಿವರಿಸಲು ಬಾಯ್ದೆರೆಯುತ್ತಿದ್ದಂತೆ, ಡಿಸಿ ಯಾರಿ[illegible] ಮಾತನಾಡಲು ಅವಕಾಶವನ್ನೇ ನೀಡಿಲ್ಲ. ನಾಲ್ಕು ದಿನ[illegible] ಕಾಲ ಉಪವಾಸ ಕೂತವರನ್ನು ತಾನು ನೋಡ[illegible] ಹೋಗದಿದ್ದ ಮೇಲೆ ಕಾರ್ಮಿಕರು ಇನ್ನೆಲ್ಲಿಗೆ ಬರಬೆ[illegible] ಎಂಬ ಪ್ರಶ್ನೆಗಾಗಲೀ, 24 ಗಂಟೆಯೂ ಜನರು ಡಿಸಿಯ[illegible] ನೋಡಲು ಆತನ ಮನೆಗೆ ಏಕೆ ಹೋಗಬಾರ[illegible] ಎಂಬುದಕ್ಕಾಗಲೀ ಉತ್ತರ ನೀಡಲು ಹೋಗದೆ ಬಾಲಿಶ[illegible] ವರ್ತಿಸುತ್ತಾ, ಸೀದಾ ಎದ್ದು ಹೋಗಿಬಿಟ್ಟಿದ್ದಾರೆ.

ಅಲ್ಲಿ ಕ್ಷೇತ್ರದ ಶಾಸಕರೂ, ಹಲವಾರು ರಾಜ್ಯಮ[illegible] ಸಂಘಟನೆಗಳ ಮುಖಂಡರೂ ಇದ್ದಾರೆಂಬ ಪ್ರಜ್ಞೆ[illegible] ಆತನಿಗಿರಲಿಲ್ಲ. ಹೀಗಿದ್ದರೂ, ಡಿಸಿಗೆ ದಬಾಯಿಸ[illegible] ಛಾತಿಯಿಲ್ಲದ ಎಂಎಲ್‌ಎ ನಂತರ ಡಿಸಿ ಮನೆಗೆ ಹೋ[illegible] ಒಟ್ಟು ಪ್ರಕರಣಕ್ಕೆ ತೇಪೆ ಹಚ್ಚುವ ಕೆಲಸವನ್ನಷ್ಟೇ ಮಾಡಿ[illegible] ಒಂದು ವೇಳೆ ಶಾಸಕರ ಭರವಸೆ ಈಡೇರದಿದ್ದರೆ, ಅವ[illegible] ತಮ್ಮೊಡನೆ ಹೋರಾಟಕ್ಕೆ ಬರಬೇಕೆಂಬ ಷರತ್ತಿನೊಂ[illegible] ಉಪವಾಸ ನಿರಶನ ಅಂತ್ಯವಾಗಿದೆ.

ಆದರೆ ಜಿಲ್ಲಾಧಿಕಾರಿಯ ವರ್ತನೆ ಎಲ್ಲೆಡೆ ಖಂಡ[illegible] ಗುರಿಯಾಗಿದೆ. ಈಗಾಗಲೇ ಇದರ ಕುರಿತು [illegible] ನಡೆಸಿರುವ ಪ್ರಗತಿಪರ ಸಂಘಟನೆಗಳು ಜಿಲ್ಲೆಯಾದ್ಯ[illegible] ಪ್ರತಿಭಟನೆ ನಡೆಸುತ್ತಿದ್ದಾರೆ. ಮಂಡ್ಯಕ್ಕೆ ಬಂದು ಹೋ[illegible] ಅಧಿಕಾರಿಗಳು ರೈತ ಚಳವಳಿಯ ಬಿರುಸಿನಲ್ಲಿ ಒಂದ[illegible] ವಿವೇಕ ಕಲಿತು, ಚಳವಳಿಗಳಿಗೆ ಗೌರವ ಕೊಡುವ [illegible] ಕಲಿತು ಹೋಗಿದ್ದಾರೆ. ಜಾಫರ್ ಪಾಠ ಕಲಿಯುತ್ತಾ[illegible] ಇಲ್ಲ ಸೂಟ್‌ಕೇಸು ರೆಡಿ ಮಾಡಿಕೊಳ್ಳುತ್ತಾ[illegible] ನೋಡಬೇಕು.

• ಲಕ್ಷ್ಮಣ್ ಚೇರನಹ[illegible]

ಗುತ್ತಿಗೆ ಕಾರ್ಮಿಕರಿಗೆ ಗಾಯದ ಮೇಲಿನ ಬರೆಗಳು



ಪೊಲೀಸರ ದೌರ್ಜನ್ಯ...

ಸರ್ಕಾರೀ ಆಸ್ಪತ್ರೆಗಳ ನಾನ್ ಕ್ಲಿನಿಕಲ್ ಗುತ್ತಿಗೆ ಎಂದರೆ ಅದೊಂದು ಬ್ರಹ್ಮಾಂಡ ಭ್ರಷ್ಟಾಚಾರದ ವ್ಯವಹಾರವಾಗಿದೆ. ಮಂಡ್ಯದ್ದೇ ಉದಾಹರಣೆ ಹೇಳುವುದಾದರೆ, ಸರ್ಕಾರವೇ ಆಸ್ಪತ್ರೆಯ ಗುತ್ತಿಗೆ ಕಾರ್ಮಿಕರಿಗೆ ನಿಗದಿಪಡಿಸಿರುವ ಕನಿಷ್ಠ ವೇತನ 3,700 ರೂ.ಗಳಾಗಿದ್ದರೆ, ಇದುವರೆಗೂ ಇಲ್ಲಿ ನೀಡುತ್ತಾ ಇದ್ದದ್ದು ಕೇವಲ 1,300 ರೂ.ಗಳು ಮಾತ್ರ. ಈ ಕಾರ್ಮಿಕರು 10 ವರ್ಷಗಳ ಕೆಳಗೆ ತಿಂಗಳಿಗೆ ಕೇವಲ 400 ರೂಪಾಯಿಗೆ ಕೆಲಸ ಮಾಡುತ್ತಾ ಇದ್ದರು. ಅನಿವಾರ್ಯವಾಗಿ ರೋಗಿಗಳ ಹತ್ತಿರ ಇಸಿದುಕೊಳ್ಳುವ 5, 10 ರೂ.ಗಳೇ ಇವರ ಜೀವನಾಧಾರವಾಗಿತ್ತು. ಆದರೆ ಆಸ್ಪತ್ರೆಗೆ ಭೇಟಿ ನೀಡುವ ಎಲ್ಲಾ ರೋಗಿಗಳೂ ಬಯ್ದುಕೊಳ್ಳುವುದು ಈ 5, 10 ರೂ. ಕೇಳುವವರನ್ನೇ. ಆಪರೇಷನ್ ಮಾಡಲು 5, 10 ಸಾವಿರ ರೂಪಾಯಿಗಳನ್ನು ಕೇಳುವ 60, 70 ಸಾವಿರ ರೂ. ಸಂಬಳ ಪಡೆಯುವ ಡಾಕ್ಟರುಗಳು ಮಾತ್ರ ದೇವರುಗಳು.

ನಗರಸಭೆಯಲ್ಲಿ ಗುತ್ತಿಗೆ ಪೌರಕಾರ್ಮಿಕರಾಗಿ ಕೆಲಸ ಮಾಡುವವರಿಗಿಂತ ಕಡಿಮೆ ಸಂಬಳಕ್ಕೆ ಇಲ್ಲಿನ ಕಾರ್ಮಿಕರನ್ನು ದುಡಿಸಲಾಗುತ್ತಿದೆ ಎಂಬ ಅರಿವಿದ್ದೂ ಕಾರ್ಮಿಕ ಇಲಾಖೆಯಾಗಲೀ, ಜಿಲ್ಲಾಧಿಕಾರಿಗಳಾಗಲೀ, ಆಸ್ಪತ್ರೆಗಳ ಅಧೀಕ್ಷಕರುಗಳಾಗಲೀ ಈ ಬಗ್ಗೆ ಯಾವ ಕ್ರಮವನ್ನೂ ಕೈಗೊಳ್ಳುವುದಿಲ್ಲ. ಏಕೆಂದರೆ ಎಲ್ಲರಿಗೂ ತಿಂಗಳ ಲಂಚವಂತೂ ಸರಿಯಾಗಿ ತಲುಪುವ ವ್ಯವಸ್ಥೆಯನ್ನು ಗುತ್ತಿಗೆದಾರರು ಮಾಡಿರುತ್ತಾರೆ.

ಇನ್ನು ಕೆಲವು ಗುತ್ತಿಗೆದಾರರು ತಾವೇ ಕಾರ್ಮಿಕ ಸಂಘಗಳನ್ನು ಕಟ್ಟುವುದೂ ಇದೆ. ಒಂದೆಡೆ ಪ್ರಗತಿಪರ ಮುಖವಾಡ ತೊಟ್ಟು ಹೋರಾಟದ ವೇಷ ಹಾಕುವುದು, ಇನ್ನೊಂದೆಡೆ ತಾವೇ ಕಾರ್ಮಿಕರನ್ನು ಶೋಷಿಸುವುದು, ಈ ರೀತಿ ಬಹುಮುಖಿ ಶೋಷಣೆಗೆ ಇಲ್ಲಿನ ಕಾರ್ಮಿಕರು ಗುರಿಯಾಗುತ್ತಾರೆ.

ಈಗ ನಡೆದ ಹೋರಾಟದ ನಂತರ ಮತ್ತೊಂದು ದುರಂತ ಸಂಭವಿಸಿದೆ. ಗುತ್ತಿಗೆದಾರ ಯೋಗೀಶನ ಕೆಳಗೆ ಜೀತ ಮಾಡುತ್ತಿರುವ ಹೊಸ ಕಾರ್ಮಿಕರ ಜೊತೆಗೆ ಹೋರಾಟ ಮಾಡಿದವರಲ್ಲಿ 20 ಜನರನ್ನೂ ಕೆಲಸಕ್ಕೆ ತೆಗೆದುಕೊಳ್ಳಲು ಹೊಸ ಪ್ರಸ್ತಾಪವೊಂದನ್ನು ಡಿಸಿ ಮತ್ತು ಆಸ್ಪತ್ರೆ ಆಡಳಿತ ಮುಂದಿಟ್ಟಿದೆ. ಅದರ ಪ್ರಕಾರ, ಇದೇ ಆಸ್ಪತ್ರೆಗೆ ಕಾಯಂ ನೌಕರರಾಗಿ 20 ಜನ ಗ್ರೂಪ್ ಡಿ ನೌಕರರನ್ನು ನೇಮಿಸಿಕೊಳ್ಳಬೇಕಾಗಿತ್ತು. ಅದರ ಬದಲಿಗೆ ಆ 20 ಹುದ್ದೆಗಳನ್ನೂ ಈಗ ಗುತ್ತಿಗೆಗೇ ತಳ್ಳುತ್ತಾರಂತೆ. ಅದರಡಿ ಹಳೇ 20 ಜನರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಾರಂತೆ. ಇದರಿಂದ ಯಾರಿಗೆ ಅನುಕೂಲ? ಗುತ್ತಿಗೆದಾರನಿಗೆ ಮತ್ತಷ್ಟು ಲಾಭ! ಅಧಿಕಾರಿಗಳಿಗೆ ಮತ್ತಷ್ಟು ಲಂಚ!! ಕಾರ್ಮಿಕರಿಗೆ ಗುತ್ತಿಗೆಯ ಜೀತ!!!

ಮಾತು ಉಳಿಸಿಕೊಳ್ಳುತ್ತಾರ[illegible] ಶಾಸಕ ಎಂ.ಶ್ರೀನಿವಾಸ್?



ಮಂಡ್ಯ [illegible] ಎಂ.ಶ್ರೀನಿವಾಸ್ ಬಗ್ಗೆ [illegible]

ಈಗ, ಎಲ್ಲಾ 40 ಜನ ಕಾರ್ಮಿಕರನ್ನೂ [illegible] ಕೆಲಸಕ್ಕೆ ಸೇರಿಸುತ್ತೇನೆ ಇಲ್ಲವಾದರೆ ತಾನೂ [illegible] ಎಂದು ಶ್ರೀನಿವಾಸ್ ಹೇಳಿದ್ದಾರೆ. [illegible] ಅದನ್ನು ಉಳಿಸಿಕೊಳ್ಳುವ ಛಾತಿ ತೋರಿಸುತ್ತಾರಾ [illegible]



ಮೈಸೂರು : 60 ಕೋಟಿ ಮುಂಡಾಮೋಚಿದ 'ಚಾಣಕ್ಯ' ನಂಜುಂಡ!

ಮೈಸೂರಿನ ಚಾಣಕ್ಯ ಫೈನಾನ್ಸ್ ತನ್ನ ಗ್ರಾಹಕರ ಅಲೆಗಳಿಗೆ 60 ಕೋಟಿ ರೂಪಾಯಿ ಪಂಗನಾಮ ಹಾಕಿದೆ. 23 ವರ್ಷಗಳ 'ಇತಿಹಾಸ'ವಿರುವ ಈ ದೋಖಾ ಫೈನಾನ್ಸ್ ಕಂಪೆನಿಯ ಒಡೆಯ ನಪ್ಪಟಾಲ್ ನಂಜುಂಡರಾಜ್ ಅರಸ್ ಜೈಲುಪಾಲಾಗುವುದರ ಮೂಲಕ 'ಚಾಣಕ್ಯ' ಕುತಂತ್ರಗಳು ಒಂದೊಂದಾಗಿ ಹೊರಬೀಳುತ್ತಿವೆ.

ಬಹುತೇಕ ರಾಜಕಾರಣಿಗಳು, ವ್ಯಾಪಾರಸ್ಥರೇ ಈ ಚೀಟಿಂಗ್ ಕಂಪೆನಿಯ ಗ್ರಾಹಕರಾಗಿದ್ದು ತಮ್ಮ ಕಡಬೆ ದುಡ್ಡನ್ನ ಈ ಕಂಪೆನಿಯಲ್ಲಿ ತೊಡಗಿಸಿಕೊಂಡು ಬಂದಿದ್ದಾರೆ. ಜೊತೆಗೆ ನೂರಾರು 'ಅರಸು' ಕುಟುಂಬಗಳು ಮತ್ತು ಸಾವಿರಾರು ನಿವೃತ್ತ ನೌಕರರೂ ಇಲ್ಲಿ ಹಣ ಡಿಪಾಜಿಟ್ ಮಾಡಿದ್ದಾರೆ. ತನ್ನ ಗ್ರಾಹಕರಿಗೆ 12ರಿಂದ 18 ಪರ್ಸೆಂಟು ಬಡ್ಡಿ ನೀಡುತ್ತಿದ್ದ 'ಚಾಣಕ್ಯ' ನಂಜುಂಡರಾಜ್ ಅರಸ್ ಗ್ರಾಹಕರ ಡಿಪಾಸಿಟ್ ಹಣವನ್ನು ದೋ ನಂಬರ್ ದಂಧೆಯವರಿಗೆ, ಸಾರಾಯಿ ಕುಳಗಳಿಗೆ ಹೆಚ್ಚಿನ ಬಡ್ಡಿಯಲ್ಲಿ ಸಾಲ ನೀಡುತ್ತ ಉಬ್ಬಿಕೊಂಡು ಬೆಳೆಯುತ್ತಿದ್ದ. ಎರಡು ವರ್ಷಗಳಿಂದ ಈ ಕಂಪೆನಿಯ ಹಲವು ಗ್ರಾಹಕರಿಗೆ ತಮ್ಮ ದುಡ್ಡು ವಾಪಸ್ ಬರುವುದಿಲ್ಲ ಎಂಬ ಸಂಶಯ ಕಾಡುತ್ತಲೇ ಇತ್ತು. ನೇರಾ ಇತ್ತೀಚೆಗೆ ಅಂದರೆ ಎರಡು ತಿಂಗಳಿಂದ ತನ್ನ ಗ್ರಾಹಕರಿಗೆ ಬಡ್ಡಿ ಹಣ ನೀಡುವುದನ್ನು ನಿಲ್ಲಿಸಿಬಿಟ್ಟಿತ್ತು ಚಾಣಕ್ಯ.

ಈ ಹೊತ್ತಿಗಾಗಲೇ ಅದು ತನ್ನೆಲ್ಲ ಗ್ರಾಹಕರ ಹಣವನ್ನು ದೋ ನಂಬರ್ ದಂಧೆಯವರಿಗೆ ಹೆಚ್ಚಿನ ಬಡ್ಡಿದರದಲ್ಲಿ ಸಾಲ ಕೊಟ್ಟಾಗಿತ್ತು, ಚೋರ್ ನಂಜುಂಡ ಅರಸ್‌ಗೆ ಇದೇ ಮೊದಲಬಾರಿಗೆ ದೋ ನಂಬರ್ ದಂಧೆಯವರು ಬತ್ತಿ ಇಟ್ಟುಬಿಟ್ಟರು. ಅದರ ಪರಿಣಾಮವಾಗಿ ನಂಜುಂಡ ಗ್ರಾಹಕರ ಎದುರು ಬಗಲೆತ್ತಿಬಿಟ್ಟ. ಹಾಗೆ ನೋಡಿದರೆ ಈ ನಂಜುಂಡ ಎಂಬ ಕುಳ ವೈಯಕ್ತಿಕವಾಗಿ ಸೇಫ್ ಆಗೇ ಇದ್ದಾನೆ.



ಮೈಸೂರಿನ ವಿಶ್ವೇಶ್ವರಪುರದಲ್ಲಿ ಚಾಣಕ್ಯ ಕಲ್ಯಾಣಮಂಟಪ ಕಟ್ಟಿಕೊಂಡಿರುವ ಈ 'ಬಡ್ಡಿಮಗ' ಮೈಸೂರಲ್ಲಿ ಹತ್ತು ಮನೆ, ಎಂಟು ಸೈಟು ಹೊಂದಿದ್ದಾನೆ.

ಇದೆಲ್ಲವನ್ನೂ ಗ್ರಾಹಕರ ಡಿಪಾಜಿಟ್‌ಗಳನ್ನು ಅಕ್ರಮದಂಧೆಯವರಿಗೆ ಸಾಲ ನೀಡುವ ಮೂಲಕ ಗಳಿಸಿಕೊಂಡಿದ್ದಾನೆ. ಚಾಣಕ್ಯ ಫೈನಾನ್ಸ್ ಕಂಪೆನಿಯ ಹೆಸರಲ್ಲಿ ಜನರನ್ನು ಲೂಟಿ ಮಾಡಿದ ಈ ನಂಜುಂಡ ಮೊನ್ನೆ ಸಿಕ್ಕಿ ಬಿದ್ದಾಗ ಚಾಣಕ್ಯ ಕಂಪೆನಿಯ ಅಕೌಂಟಿನಲ್ಲಿದ್ದುದು ಕೇವಲ 400 ರೂಪಾಯಿ ಮಾತ್ರ!

ನಿವೃತ್ತ ಡಿ.ಸಿ. ನಂಜುಂಡರಾಜ್ ಎಂಬಾತ ತನ್ನ 10 ಲಕ್ಷ ರೂಪಾಯಿಗಳಿಗೆ ಬಡ್ಡಿಹಣ ಬಾರದೇ ಇದ್ದಾಗ ಲಷ್ಕರ್ ಪೊಲೀಸ್ ಠಾಣೆಗೆ 'ಚಾಣಕ್ಯ' ನಂಜುಂಡ ಅರಸನ ವಿರುದ್ಧ ದೂರು ಕೊಟ್ಟ ಮೇಲಷ್ಟೇ 'ಚಾಣಕ್ಯ' ಗ್ರಾಹಕರಿಗೆ ಎಚ್ಚರವಾಗಿದ್ದು, ಈಗ ದುಡಿದ ಹಣವೆಲ್ಲ ನೀರುಪಾಲಾಗುತ್ತಿದೆ ಎಂಬುದು ಅರಿವಾದಾಗ, ದಿನೇದಿನೇ 'ಚಾಣಕ್ಯ' ನಂಜುಂಡನ ವಿರುದ್ಧ ಗ್ರಾಹಕರ ಕಂಪ್ಲೇಂಟ್‌ಗಳು ದಾಖಲಾಗುತ್ತಲೇ ಇವೆ. ಈಗಾಗಲೇ 15ಕ್ಕೂ ಹೆಚ್ಚು ದೂರುಗಳು ಬಂದಿದ್ದು, ನಂಜುಂಡರಾಜ ಅರಸನನ್ನು ಜೈಲು ಪಾಲು ಮಾಡಲಾಗಿದೆ.

ಮುಚ್ಚಿ ಮುಚ್ಚಿ ಮೋಸ!

23 ವರ್ಷಗಳ 'ಇತಿಹಾಸ' ಹೊಂದಿರುವ ಈ 'ಅರಸು' ಕಂಪೆನಿ 8 ವರ್ಷಗಳ ಹಿಂದೆ ನಿಕಾಲಿಯಾಗಿ ಮುಚ್ಚಿಹೋಗಿತ್ತು, ಮತ್ತೆ ಹೇಗೋ ಚಿಗುರಿಕೊಂಡ ಈ ಕಂಪೆನಿ ಬಂಬೂ ಬಜಾರಿನ ಬೀದಿ ವ್ಯಾಪಾರಿಗಳಿಗೆ 5ರಿಂದ 10 ಸಾವಿರ ರೂಪಾಯಿಗಳ ಸಾಲ ಕೊಡುತ್ತಾ ಜನಪ್ರಿಯವಾಗಿತ್ತು, ಮುಂದೆ ದೊಡ್ಡ ವರ್ತಕರಿಗೆ ಸಾಲ ಕೊಡಲಾರಂಭಿಸಿದ ಈ 'ಚಾಣಕ್ಯ' ಕಂಪೆನಿ, ಮಧ್ಯಮವರ್ಗದ ಬ್ಯುಸಿನೆಸ್‌ಮ್ಯಾನ್‌ಗಳು, ಬೀದಿವ್ಯಾಪಾರಿಗಳಿಂದ ಪಿಗ್ಮಿ ಕಲೆಕ್ಟ್ ಮಾಡಿ 10ರಿಂದ 18 ಪರ್ಸೆಂಟು ಬಡ್ಡಿ ಕೊಡುತ್ತ ಬಂತು. ಡಿಪಾಸಿಟ್ ಆದ ಹಣವನ್ನು ಶೇ.30-36ರ ಬಡ್ಡಿದರದಲ್ಲಿ ಅಕ್ರಮ ದಂಧೆಕೋರರಿಗೆ ನೀಡುತ್ತ ಬಂತು. ಈ ಕಂಪೆನಿ ಹೀಗೆ ಗಳಿಸಿದ ಹಣವೆಲ್ಲ ಮ್ಯಾನೇಜಿಂಗ್ ಡೈರೆಕ್ಟರ್ ಕಂ ಒಡೆಯ ನಂಜುಂಡರಾಜ್ ಅರಸ್‌ನ ಮನೆ ಸೇರುತ್ತ ಬಂತು. ಇಲ್ಲಿ ಹೆಸರಿಗಷ್ಟೇ ಒಂಭತ್ತು ಡೈರೆಕ್ಟರ್‌ಗಳಿದ್ದು, ತಿಂಗಳಿಗೆ 10 ಸಾವಿರ ಪಡೆವ ಈ ಮಹಾಶಯರು ನಂಜುಂಡನ ಅಪರಾತಪರಾಗಳಿಗೆಲ್ಲ ಸಾರ್ವಜನಿಕ 'ಮಾನ್ಯತೆ' ತಂದುಕೊಟ್ಟರು.

ದೋ ನಂಬರ್ ದಂಧೆಯವರ ಅರ್ಜೆಂಟಿಗೆ ಸರಿಯಾಗಿ 36 ರ ಬಡ್ಡಿದರಲ್ಲಿ ಸಾಲ ಕೊಡುತ್ತ ಕೊಬ್ಬಿದ ನಂಜುಂಡನಿಗೆ ಇತ್ತೀಚೆಗೆ ಫಜೀತಿ ಶುರುವಾಗಿದ್ದು ಇಂತಹ ದೋ ನಂಬರ್ ಕುಳಗಳಿಂದಲೇ. ಈತನಿಂದ ಭಾರೀ ಸಾಲ ಪಡೆದ ಈ ದಂಧೆಕೋರರು ಇತ್ತೀಚೆಗೆ ಕೈಯೆತ್ತಿದ್ದರಿಂದ ನಂಜುಂಡನ ಚಾಣಕ್ಯ ಫೈನಾನ್ಸ್ ಕಂಪೆನಿ ಮುಳುಗತೊಡಗಿತು. ಇದರ ಪರಿಣಾಮವೀಗ ಪಿಗ್ಮಿ ಮೂಲಕ ಸಾವಿರ, ಲಕ್ಷಗಳ ಡಿಪಾಸಿಟ್ ಮಾಡಿದ ಸುಮಾರು ಆರು ಸಾವಿರ ಗ್ರಾಹಕರ ಮೇಲಾಗುತ್ತಿದೆ. ಕಷ್ಟಪಟ್ಟು ದುಡಿದ ಹಣವೆಲ್ಲ ನಂಜುಂಡನ ಹೊಟ್ಟೆಪಾಲಾಯಿತಲ್ಲ ಎಂದು ಬಡಪಾಯಿ ಗ್ರಾಹಕರು ಹಲುಬುತ್ತಿದ್ದಾರೆ. ಪೊಲೀಸರು, ಸಹಕಾರ ಇಲಾಖೆಯವರು ಸದ್ಯ ನಂಜುಂಡನ ವಿಚಾರಣೆ ನಡೆಸುತ್ತಿದ್ದು, ಆತನಿಂದ ಬಡವರ ಹಣ ಕಕ್ಕಿಸುತ್ತಾರೋ ಅಥವಾ ತಾವೂ ತಿಂದು ತೆಪ್ಪಗಾಗುತ್ತಾರೋ?

• ಮಲ್ಲನಗೌಡರ್


ಜಾವಾ ನಂಜುಂಡನೂ, ಲಿಕ್ಕರ್ ಲಫಂಗರೂ...

ಮೈಸೂರಿನಲ್ಲಿದ್ದ ಹಳೆಯ ಜಾವಾ ಮೋಟರ್ ಬೈಕ್ ಕಂಪನಿಯಲ್ಲಿ ಈ ನಂಜುಂಡ ಕೆಲಸಕ್ಕಿದ್ದ. ಜಾವಾ ಕಂಪನಿ ಮುಚ್ಚಿದಾಗ ಒಂದಿಷ್ಟು ಪರಿಹಾರ ಹಣ ಸಿಕ್ಕಿತು. ಜಾವಾದಿಂದ ಹೀಗೆ ಹೊರಬಂದ ಸಾವಿರಾರು ನೌಕರರ ಕೈಲಿದ್ದ ದುಡ್ಡನ್ನು ನೋಡಿಯೇ ಈ ನಂಜುಂಡರಾಜ್ ಅರಸ್ ಚಾಣಕ್ಯ ಫೈನಾನ್ಸ್ ಕಂಪನಿ ತೆಗೆದ. ಕೆಲಸವಿಲ್ಲದ ಜನ ತಮ್ಮ ದುಡ್ಡಿಗೆ ಬಡ್ಡಿಯಾದರೂ ಬರುತ್ತಲ್ಲ ಅಂತ ನಂಜುಂಡನ ಫೈನಾನ್ಸಿಗೆ ಪಿಗ್ಮಿ ತುಂಬಿದರು, ಕೆಲವರು ಫಿಕ್ಸ್ ಡಿಪಾಸಿಟ್ ಮಾಡಿದರು. ಆರಂಭದಲ್ಲಿ ಅರಸು ಕಮ್ಯುನಿಟಿಯವರು ಜಾತಿ ಕಾರಣದಿಂದ ಈ ಫೈನಾನ್ಸ್‌ನ ಗ್ರಾಹಕರಾಗತೊಡಗಿದರು. ನಂತರ ಇದು ಬೀದಿ ವ್ಯಾಪಾರಿಗಳಿಂದ ಸಣ್ಣಪುಟ್ಟ ವರ್ತಕರವರೆಗೂ ಹಬ್ಬಿತು. ತನ್ನ ಗ್ರಾಹಕರಿಗೆ ಶೇ. 10-18 ಪರ್ಸೆಂಟು ಬಡ್ಡಿ ನೀಡುತ್ತಿದ್ದ ನಂಜುಂಡ, ಗ್ರಾಹಕರ ಹಣವನ್ನು ಅಕ್ರಮ ದಂಧೆಕೋರರಿಗೆ, ಅದರಲ್ಲೂ ತೀವ್ರ ಪೈಪೋಟಿರುವ ಲಿಕ್ಕರ್ ಕುಳಗಳಿಗೆ ಶೇ. 36 ರ ಬಡ್ಡಿ ದರದಲ್ಲಿ ನೀಡುತ್ತಿದ್ದ.

ರಾಮಚಂದ್ರ, ಕೃಷ್ಣ ಎಂಬ ಮೈಸೂರಿನ ಕುಖ್ಯಾತ ಲಿಕ್ಕರ್ ಲಫಂಗರು ರಾಘವೇಂದ್ರ ಎಂಟರ್‌ಪ್ರೈಸಸ್ ಎಂಬ ಸಂಸ್ಥೆ ಮಾಡಿಕೊಂಡು ನಂಜುಂಡನ ಚಾಣಕ್ಯ ಕಂಪನಿಗೆ ಗಂಟುಬಿದ್ದರು. ದಾಖಲೆ, ಪುರಾವೆಗಳ ಆಧಾರವಿಲ್ಲದೇ ಶೇ. 36 ರ ಬಡ್ಡಿ ದರದಲ್ಲಿ ಸಾಲ ನೀಡುತ್ತಿದ್ದ ನಂಜುಂಡನನ್ನು ಮರುಳು ಮಾಡಿದರು. ದಿನೇದಿನೇ ಸಾಲ ಎತ್ತುತ್ತಾ ಬಂದ ರಾಮಚಂದ್ರ, ಕೃಷ್ಣ ಈಗ ಕೈ ಎತ್ತಿಬಿಟ್ಟಿದ್ದಾರೆ. ಇವರಿಬ್ಬರಿಗೇ ನಂಜುಂಡ ಕೊಟ್ಟ ಸಾಲ 18 ಕೋಟಿ ರೂಪಾಯಿ!

ನೀಚ ನಂಜುಂಡ, ಲಫಂಗ ಲಿಕ್ಕರ್ ದಂಧೆಕೋರರ ಜೂಜಾಟದಿಂದ ಬಡ ಗ್ರಾಹಕರು ಒದ್ದಾಡುವಂತಾಗಿದೆ. ಬಡ ಗ್ರಾಹಕರಿಗೆ ಕೂಡಲೇ ನ್ಯಾಯ ದೊರಕಿಸಬೇಕಾದ ಹೊಣೆ ಮೈಸೂರು ಪೊಲೀಸರ ಮೇಲಿದೆ.

ನರೇಂದ್ರನ ನೆರಳಲ್ಲಿ 'ಪಂಚಾಕ್ಷರಿ' ಭೋಜನಂ!



ನರೇಂದ್ರ


ಹನೂರು ವಿಧಾನಸಭಾ ಕ್ಷೇತ್ರಕ್ಕೆ ಭೂಗಳ್ಳ ಪಂಚಾಕ್ಷರಿ ಸ್ವರೂಪದಲ್ಲಿ ಏಳರಾಟದ ಶನಿ ವಕ್ಕರಿಸಿಕೊಂಡಿದೆ. ದುರ್ದೈವವೆಂದರೆ, ಇಂಥವನನ್ನು ಒದ್ದು ಹೊರಗಟ್ಟಿ ಜನರನ್ನು ಬಚಾವು ಮಾಡಬೇಕಿರುವ ಶಾಸಕ ಆರ್. ನರೇಂದ್ರ ಖುದ್ದು ಕಳ್ಳನಿಗೇ ನೆರಳಾಗಿ ಪೊರೆಯುತ್ತಿದ್ದಾನೆ! ಶಾಸಕನ ಬಲದಿಂದಲೇ ಕಂಡವರ ಜಮೀನಿಗೆ ಅನಾಯಾಸವಾಗಿ ಬೇಲಿ ಸುತ್ತುತ್ತಾ ಕೊಬ್ಬಿ ಹೋಗಿರುವ ಪಂಚಾಕ್ಷರಿ ನರೇಂದ್ರನ ಸಿಕ್ಕಿದ ಖದರನ್ನೂ ಆವಾಹಿಸಿಕೊಂಡು ಮೆರೆದಾಡ ತೊಡಗಿದ್ದಾನೆ.

ಮೂಲತಃ ಚಿತ್ರದುರ್ಗದವನಾದ ಪಂಚಾಕ್ಷರಿ ಚಿಕ್ಕ ವಯಸ್ಸಿಗೇ ಹುಟ್ಟೂರು ಬಿಟ್ಟು ಬೆಂಗಳೂರು ಸೇರಿದಾತ. ಇಲ್ಲಿ ಕೆಲಸ ಮಾಡಿಕೊಂಡೇ ಬೆಳೆದ ಪಂಚಾಕ್ಷರಿ ರಿಯಲ್ ಎಸ್ಟೇಟ್ ದಂಧೆಯ ದಲ್ಲಾಳಿಯಾಗಿ ಬದಲಾದ. ದಲ್ಲಾಳಿ ಕೆಲಸದ ಮೂಲಕವೇ ಅಡ್ನಾಡಿ ಲಿಂಕುಗಳನ್ನು ಬೆಳೆಸಿಕೊಂಡ ಈತ ಬೆಂಗಳೂರು ಹೊರವಲಯದ ಸಾವಿರಾರು ಜಮೀನುಗಳಿಗೆ ಬೇಲಿ ಸುತ್ತುತ್ತಾ ಸ್ವತಂತ್ರ ರಿಯಲ್ ಎಸ್ಟೇಟ್ ಉದ್ಯಮಿಯಾಗಿ ಹೋದ. ಒಂದಷ್ಟು ಮಂದಿ ಬೀಡಾಡಿ ರೌಡಿಗಳನ್ನು ಸಾಕಿಕೊಂಡು ಬಡ ಬಗ್ಗರನ್ನು ಬೀದಿಪಾಲಾಗಿಸಿದ.

ಈ ಅಡ್ನಾಡಿ ದಂಧೆಯ ಮೂಲಕವೇ ಕೋಟ್ಯಾಂತರ ರೂಪಾಯಿ ಸಂಪಾದಿಸಿದ ಪಂಚಾಕ್ಷರಿ, ರಿಯಲ್ ಎಸ್ಟೇಟ್ ದಂಧೆ ನೆಲ ಕಚ್ಚಿದ್ದೇ ಐನಾತಿ ಕೆಲಸಕ್ಕೆ ಚಾಲನೆ ನೀಡಿದ. ಅಕ್ರಮವಾಗಿ ಬೇಲಿಸುತ್ತಿದ್ದ ನೂರಾರು ಎಕರೆ ಜಮೀನನ್ನು ತನ್ನ ರೌಡಿಪಡೆಯನ್ನೇ ಯಾಮಾರಿಸಿ ಮಾರಾಟ ಮಾಡಿದ ಪಂಚಾಕ್ಷರಿ ರಾತ್ರೋರಾತ್ರಿ ದುಡ್ಡಿನ ಸಮೇತ ಪೇರಿಕಿತ್ತು ಹನೂರಿಗೆ ಬಂದು ಠಿಕಾಣಿ ಹೂಡಿದ.

ಹೀಗೆ ಬಂದು ಕೆಲಕಾಲ ತೆಪ್ಪಗಿದ್ದ ಪಂಚಾಕ್ಷರಿ ಹನೂರಿನ ಆಜುಬಾಜಿನಲ್ಲಿರುವ ಚನ್ನನಿಂಗನಹಳ್ಳಿ, ಹಲಗುಮಲೆ, ಚಂಚೊಳ್ಳಿ ಮುಂತಾದೆಡೆಗಳಲ್ಲಿ ನೂರಾರು ಎಕರೆ ಖರೀದಿಸಿ ಜಮೀನ್ದಾರನಾಗಿ ಬದಲಾದ. ಈ ಅವಧಿಯಲ್ಲೇ ಹನೂರಿನ ಹಾಲಿ ಶಾಸಕ ಆರ್. ನರೇಂದ್ರರೊಂದಿಗೆ ಪಕ್ಕಾ ದೋಸ್ತಿ ಬೆಳೆಸಿಕೊಂಡ.

ನರೇಂದ್ರನ ಸ್ನೇಹ ಸಿಗುತ್ತಲೇ ಹಳೆಯ ರಿಯಲ್ ಎಸ್ಟೇಟ್ ಹಿಕಮತ್ತುಗಳನ್ನು ಕಕ್ಕತೊಡಗಿದ ಪಂಚಾಕ್ಷರಿ ಸಾಕ್ಷಿಗೊಂದಿಷ್ಟು ಜಮೀನು ಖರೀದಿಸಿ ಅರಣ್ಯ ಪ್ರದೇಶಕ್ಕೆ ಬೇಲಿ ಸುತ್ತತೊಡಗಿದ. ಇದರ ಜೊತೆಗೇ ನರೇಂದ್ರನಿಗೆ ಪ್ರಸಾದ ತಿನ್ನಿಸತೊಡಗಿದ. ಈ ಕಾರಣದಿಂದಲೇ ಅರಣ್ಯ ಇಲಾಖೆಯ ಅಧಿಕಾರಿಗಳೂ ತೆಪ್ಪಗಿರತೊಡಗಿದರು. ಹನೂರಿನಲ್ಲಿ ಸಬ್ ರಿಜಿಸ್ಟ್ರಾರ್ ಆಗಿದ್ದ ಬಸವಯ್ಯ ಎಂಬಾತ ಪಂಚಾಕ್ಷರಿಗೆ ಪಕ್ಕಾ ಬ್ರೋಕರ್‌ನಂತೆ ಕೆಲಸ ಮಾಡಹತ್ತಿದ. ಎಲ್ಲೆಲ್ಲಿ ಸರ್ಕಾರಿ ಜಾಗವಿದೆ ಅಂತ ತಲಾಶ್ ಮಾಡುತ್ತಿದ್ದ ಬಸವಯ್ಯ ಪಂಚಾಕ್ಷರಿಗೆ ಮಾಹಿತಿ ನೀಡಿ ಕಬಳಿಕೆಗೆ ನೆರವಾಗುತ್ತಿದ್ದ. ಇಂಥ ಅಕ್ರಮಗಳು ಈತನ ನೆರಳಲ್ಲೇ ಸಕ್ರಮವಾಗಿ ರೂಪಾಂತರಗೊಳ್ಳುತ್ತಿದ್ದವು.



ಪಂಚಾಕ್ಷರಿ

ಇಂಥ ಸಪೋರ್ಟ್‌ಗಳಿಂದಲೇ ಕೊಬ್ಬಿ ಹೋದ ಪಂಚಾಕ್ಷರಿ ಹನೂರಿನ ಪೊಲೀಸ್ ಕ್ವಾರ್ಟರ್ಸ್ ಸಮೀಪವಿರುವ ಹತ್ತಾರು ಎಕರೆ ಜಮೀನು ಕಮಾಯಿಸಿದ್ದಾನೆ. ಆ ಜಮೀನಿನ ಮೇಲೆ ಹೈಟೆನ್ಷನ್ ವಿದ್ಯುತ್ ಲೈನ್ ಇದ್ದರೂ ಅದನ್ನು ಅಲಿಗೇಷನ್ ಮಾಡಿಸಿ ಭರ್ಜರಿ ಲೇಔಟ್ ಮಾಡಿದ್ದಾನೆ. ಆರ್.ಎಸ್. ದೊಡ್ಡಿಯ ಹತ್ತಿರವಿರುವ ಹುಲ್ಲೇಪುರದಲ್ಲೂ ಸರ್ಕಾರಿ ಜಾಗ ಕಬಳಿಸಿರುವ ಪಂಚಾಕ್ಷರಿ ಇದರಲ್ಲೂ ಒಂದು ಲೇಔಟ್ ಎಬ್ಬಿಸಿ ಯಾವ ಮೂಲಭೂತ ಸೌಕರ್ಯಗಳನ್ನು ಒದಗಿಸದೆ ಮಾರಾಟ ಮಾಡಲು ಹವಣಿಸುತ್ತಿದ್ದಾನೆ.

ಇಂಥಾ ಭೂಗಳ್ಳನನ್ನು ಆಸ್ಥೆಯಿಂದ ಬೆಳೆಸುತ್ತಿರುವ ಶಾಸಕ ನರೇಂದ್ರ ಪಕ್ಷದ ವತಿಯಿಂದ ನಡೆಯುವ ಎಲ್ಲಾ ಕಾರ್ಯಕ್ರಮಗಳನ್ನೂ ಪಂಚಾಕ್ಷರಿಗೇ ವಹಿಸುತ್ತಿದ್ದಾನೆ. ತನ್ಮೂಲಕ ಪಕ್ಷ ಕಟ್ಟಲು ಲಾಗಾಯ್ತಿನಿಂದಲೂ ಮಣ್ಣು ಹೊತ್ತ ಮಂದಿಯನ್ನು ಮೂಲೆಗುಂಪು ಮಾಡುತ್ತಿದ್ದಾನೆ. ನರೇಂದ್ರನಿಗಾಗಿ ಪಡಬೆ ಹಣವನ್ನು ನೀರಿನಂತೆ ಹರಿಸುತ್ತಿರುವ ಈತ ಇದೀಗ ಇಡೀ ಕ್ಷೇತ್ರಕ್ಕೆ ತಾನೇ ದಲಿತ ನಾಯಕನೆಂಬಂತೆ ಪೋಸು ಕೊಡ ಹತ್ತಿದ್ದಾನೆ. ●

ರೈ ಫ್ರೆಂಡು ಅಂದ!

[illegible] ವಮಾಯಿಸುವ [illegible] ಕರೆದುಕೊಂಡು ಹೋಗಿ [illegible] ವ್ಯವಸ್ಥೆ ಮಾಡಿಸಿದ. [illegible] ಸಂಸ್ಥಾಪಕಾಧ್ಯಕ್ಷ "ಇದಾರಲ್ಲಾ [illegible] ಗೊತ್ತು, [illegible] ಬೆಂಗ್ಳೂರಲ್ಲಿದ್ದ ದಿನಾಲು [illegible] ಊಟ ಮಾಡ್ತಿದ್ವಿ, ನಾವು ಫ್ರೆಂಡ್ಸು" ಅಂತಲ್ಲ ಒದರಾಡಿಕೊಂಡು ತಿರುಗಹತ್ತಿದ್ದ!

[illegible] ದಾಂಡಿಗರನ್ನಿಟ್ಟುಕೊಂಡೇ [illegible] ಪಂಚಾಕ್ಷರಿ ಇಂಥಾ ಗಿಮಿಕ್ಕುಗಳ [illegible] ಬಜಾವಾಗುತ್ತ ಬಂದಿದ್ದಾನೆ. ಜನರೂ [illegible] ಮುಲಾಜು ಮತ್ತು ಚಿಲ್ಲರ ಗಿಮಿಕ್ಕುಗಳಿಗ [illegible]

ನಮ್ಮ ಮಾತು ನಮಗೇ ತಿರುಗುಬಾಣವಾಗಬಾರದು


ಮಂಜುನಾಥ್ ಹಾಗೂ ಐಜೂರ್ ಅವರು 'ದೇಶಕಾಲ' ವಿಶೇಷ ಸಂಚಿಕೆ ಇಟ್ಟುಕೊಂಡು ಕರ್ನಾಟಕ ಸಾಂಸ್ಕೃತಿಕ ರಾಜಕಾರಣದ ವಿಶ್ಲೇಷಣೆ ಮಾಡಿದ್ದನ್ನು ಓದಿದೆ. ಪತ್ರಿಕೆ, ಪ್ರಕಾಶನ, ಸಾಹಿತ್ಯಕ ಕಾರ್ಯಕ್ರಮ ಮುಂತಾದವುಗಳಲ್ಲಿ ತಮ್ಮ ಜಾತಿಯವರನ್ನೇ ಗುಡ್ಡೆಹಾಕಿಕೊಂಡು, ಸಾಮಾಜಿಕ ಸಮಾನತೆಯ ಬ್ಯಾಲನ್ಸಿಗಾಗಿ ಉಳಿದವರನ್ನು ಇಟ್ಟುಕೊಳ್ಳುವ ಸುಪ್ತ ಜಾತೀಯತೆ ಕುರಿತು ಅವರು ಆಕ್ರೋಶ ವ್ಯಕ್ತಮಾಡಿದ್ದಾರೆ. ಅದನ್ನು ಅರ್ಥಮಾಡಿಕೊಳ್ಳಬಹುದು. ಈ ಪ್ರವೃತ್ತಿಗೆ ಕರ್ನಾಟಕದಲ್ಲಿ ಬೇಕಾದಷ್ಟು ನಿದರ್ಶನಗಳಿವೆ. ಈಚೆಗೆ ಬೆಂಗಳೂರಿನಲ್ಲಿ ಇದು ಜಾಸ್ತಿಯೂ ಆದಂತಿದೆ.

'ದೇಶಕಾಲ' ಪತ್ರಿಕೆಯ ಸಾಹಿತ್ಯದ ಪರಿಕಲ್ಪನೆ ಬಗ್ಗೆ ನನಗೂ ಭಿನ್ನಮತವಿದೆ. ಅದು ಕೆ.ವಿ.ಸುಬ್ಬಣ್ಣನವರು ಹಿಂದೊಮ್ಮೆ ವಿರೋಧಿಸಿದ್ದ 'ಶ್ರೇಷ್ಠತೆಯ ವ್ಯಸನ'ವನ್ನು ಕೊಂಚ ಅಂಟಿಸಿಕೊಂಡಿರಬಹುದೇ ಎಂದೂ ಅನಿಸಿದೆ. ಅದರಲ್ಲೂ ವಿಶೇಷ ಸಂಚಿಕೆಯಲ್ಲಿರುವ 21ನೇ ಶತಮಾನದ ಹೊಸ ಲೇಖಕರ ಇಲ್ಲವೇ ಶ್ರೇಷ್ಠ ಪುಸ್ತಕಗಳ ಪಟ್ಟಿಯನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಈ ಬಗೆಯ ಭಿನ್ನಮತವು ಯಾರೇ ಮಾಡುವ ಪಟ್ಟಿಗಳಿಗೂ-ಸ್ವತಃ ಲಂಕೇಶ್ ಸಂಪಾದಿಸಿದ 'ಅಕ್ಷರ ಹೊಸಕಾವ್ಯ'ದ ಎರಡನೇ ಆವೃತ್ತಿಗೂ-ಅನ್ವಯವಾಗುತ್ತದೆ. ಅದರ ಬಗ್ಗೆ ಪ್ರಶ್ನೆ ಎತ್ತುವುದು ಮತ್ತು ಚರ್ಚಿಸುವುದು ನಮಗೆಲ್ಲರಿಗೂ ಸಾಧ್ಯವಾಗಬೇಕು.

ಆದರೆ ನನ್ನ ಈ ಇಬ್ಬರು ಮಿತ್ರರು ತಮ್ಮ ಭಿನ್ನಮತ ಇಟ್ಟುಕೊಂಡು ಮಾಡಿರುವ ವಿಶ್ಲೇಷಣೆ ಮತ್ತು ಧಾಟಿ ಮಾತ್ರ, ಅಪರಾಧಿಗಳನ್ನು ಹುಡುಕಿ ಶಿಕ್ಷೆಕೊಡುವ ಸ್ವಯಂಘೋಷಿತ ನ್ಯಾಯಾಧೀಶರದ್ದಾಗಿದೆ. ಇಲ್ಲಿರುವ ವಿಡಂಬನೆ, ಅಸೂಕ್ಷ್ಮತೆ ಮತ್ತು ಅಸಹನೆಯಿಂದ ಗಂಭೀರ ಸಂವಾದವೊಂದನ್ನು ಹುಟ್ಟುಹಾಕುವುದು ಸಾಧ್ಯವೇ? ಎದುರಿಗಿರುವವರ ಅಭಿಪ್ರಾಯವನ್ನು ಅರ್ಥಮಾಡಿಕೊಳ್ಳುವುದಕ್ಕೂ ನಿರಾಕರಿಸುವ ಫ್ಯಾಸಿಸಂ ನಮ್ಮ ಸಮಾಜದ ಸಂದುಮೂಲೆಗಳನ್ನೂ ಆವರಿಸಿಕೊಳ್ಳುತ್ತಿರುವ ಹೊತ್ತಿದು. ಇದಕ್ಕೆ ಪ್ರತಿಯಾಗಿ, ಸಮಾನ ಮನಸ್ಕರು ವಿಶಾಲ ನೆಲೆಯಲ್ಲಿ ಒಂದಾಗಿ, ಸಾಂಸ್ಕೃತಿಕ-ರಾಜಕೀಯ ಪರ್ಯಾಯ ಹುಡುಕಬೇಕು ಎಂದು ನಾವೆಲ್ಲ ಚಡಪಡಿಸುತ್ತಿರುವ ಈ ಹೊತ್ತಲ್ಲಿ, ಸಂವಾದಕ್ಕೆ ಬೇಕಾದ ಗುಣ ನಮಗೆಲ್ಲರಿಗೂ ತೀರ ಅಗತ್ಯವಾಗಿದೆ. ಇಲ್ಲದಿದ್ದರೆ ನಮಗೂ 'ವಿಜಯ ಕರ್ನಾಟಕದ' ಕೆಲವು ಅಂಕಣಕಾರರಿಗೂ ಫರಕೇ ಉಳಿಯುವುದಿಲ್ಲ.


ನಾನು ಈಚೆಗೆ ಕಥಾಕಮ್ಮಟದಲ್ಲಿ, ಹೊಸತಲೆಮಾರಿನ ಲೇಖಕರೊಬ್ಬರು ಬರೆದ ನಾನು ಇಷ್ಟಪಟ್ಟ ಕತೆಯನ್ನು ಓದಿ ವಿಶ್ಲೇಷಿಸಿದೆ. ನಾನು ತೆರಳಿದ ನಂತರ ಅಲ್ಲಿ, ನಾನು ಯಾಕೆ ಬ್ರಾಹ್ಮಣ ಲೇಖಕರನ್ನೇ ಆರಿಸಿಕೊಂಡೆ ಎಂದು ಕಮ್ಮಟದ ತರುಣರು ಚರ್ಚಿಸಿದರೆಂದು ಹಿಂದಿನಿಂದ ತಿಳಿದು-ಬಂದಿತು. ಶ್ರೀನಿವಾಸ ವೈದ್ಯರ 'ಹಳ್ಳಬಂತು ಹಳ್ಳ' ಕಾದಂಬರಿ ಮೇಲೆ ಮಿತ್ರರೊಬ್ಬರು, ಅದೊಂದು ಕೆಟ್ಟಕೃತಿ ಎಂಬಂತೆ ಬರೆದ ಪುಸ್ತಕ ವಿಮರ್ಶೆ ಓದಿದಾಗಲೂ ಕಂಗಾಲಾಯಿತು. ಎಲ್ಲವನ್ನು ಜಾತಿಯ ನೆಲೆಗೆ ತಂದಿಟ್ಟು ನೋಡುವ ಪೂರ್ವಗ್ರಹವೊಂದು ಜಾತ್ಯತೀತ ಎಂದುಕೊಳ್ಳುವ ಹೊಸತಲೆಮಾರಿನ ಗೆಳೆಯರಲ್ಲಿ ಮೊಳೆಯುತ್ತಿದೆಯೇ? ಜನಪರ ಚಳವಳಿಗಳಲ್ಲಿ ಜೀವದ ಹಂಗುಬಿಟ್ಟು ಕೆಲಸ ಮಾಡುವ ಅನೇಕ 'ಬ್ರಾಹ್ಮಣ' ಸಂಗಾತಿಗಳ ಬಗ್ಗೆ ಕೂಡ ಕೆಲವರು ಅನುಮಾನದ ಮಾತಾಡುವುದನ್ನು ಕೇಳಿ ನನಗೆ ಗಾಬರಿಯಾದದ್ದಿದೆ. 'ನಾಗರಬೆತ್ತ' ಕತೆ ಬರೆದ ಸೇಡಿಯಾಪು ಅವರನ್ನು ಭಟ್ಟರು ಎಂಬ ಕಾರಣಕ್ಕೆ ಗೇಲಿ ಮಾಡುವುದಾದರೆ, ಚರ್ಚೆ ಎಲ್ಲಿಗೆ ಹೋಗಿ ನಿಲ್ಲಬಹುದು? ಸಾರಾಸಗಟು ಬ್ರಾಹ್ಮಣ ವಿರೋಧಕ್ಕೂ, ಮುಸ್ಲಿಮರನ್ನು ಕುರಿತ ಮತೀಯವಾದಿ ಪೂರ್ವಗ್ರಹಕ್ಕೂ ವ್ಯತ್ಯಾಸ ಕಡಿಮೆ.

ಕನ್ನಡ ಸಾಹಿತ್ಯ ಲೋಕದಲ್ಲಿ ಬಹುರೂಪದಲ್ಲಿ ಸುಪ್ತವಾಗಿರುವ ಜಾತಿಯ/ ಗುಂಪುಗಾರಿಕೆಯ ಅಂಶವನ್ನು ಲಂಕೇಶ್, ತೇಜಸ್ವಿ, ಕುವೆಂಪು, ದೇವನೂರು ಮುಂತಾದ ಹಿರೀಕರು, ಗುರುತಿಸುತ್ತ ವಿಮರ್ಶಿಸುತ್ತ ಪ್ರತಿಭಟಿಸುತ್ತ ಬಂದವರೇ. ಅದನ್ನು ಅವರು ಘನತೆಯಿಂದ ಸಾಹಿತ್ಯಕ ಸೂಕ್ಷ್ಮತೆ ಬಿಟ್ಟುಕೊಡದೆ ಮಾಡಿದರು. ನಾವೆಲ್ಲರೂ ನಮ್ಮ ತಾತ್ವಿಕ ಭಿನ್ನಮತ ಬಿಟ್ಟುಕೊಡದೆ ಇಂತಹ ಸಾಂಸ್ಕೃತಿಕ ರಾಜಕಾರಣದ ಪ್ರಶ್ನೆಗಳನ್ನು ಚರ್ಚಿಸಲು ಸಾಧ್ಯವಾಗಬೇಕು; ಅದನ್ನು ಸಂವಾದದ ಪರಿಭಾಷೆಯಲ್ಲಿ ಹೇಳಲೂ ಸಾಧ್ಯವಾಗಬೇಕು. ಇಲ್ಲದಿದ್ದರೆ, ಕುರುಡು ಜಾತಿಪೂರ್ವಗ್ರಹದ ಹುದುಲಿನಲ್ಲಿ ಅದನ್ನು ಟೀಕಿಸುವ ನಾವೂ ಸಿಕ್ಕಿಕೊಳ್ಳುತ್ತೇವೆ. ಸಾಹಿತ್ಯಕ ವಿಷಯದಲ್ಲಿ ತೋರುವ ಸೂಕ್ಷ್ಮತೆ-ಅಸೂಕ್ಷ್ಮತೆಗಳೇ ನಮ್ಮ ಸಾಮಾಜಿಕ ರಾಜಕೀಯ ಪ್ರಜ್ಞೆಯಲ್ಲೂ ವಿಸ್ತರಣೆ ಪಡೆಯುತ್ತವೆಯಾದ್ದರಿಂದ, ನಾವು ನಮ್ಮ ಮಾತು ನಮಗೇ ತಿರುಗಿ ಬಡಿಯದಂತೆ ಎಚ್ಚರವಹಿಸಬೇಕಿದೆ.



• ರಹಮತ್ ತರೀಕೆರೆ

ಕಳೆದ ಸಂಚಿಕೆಯಲ್ಲಿ ಪ್ರಕಟಗೊಂಡ ಮಂಜುನಾಥ್ ಲತಾ ಹಾಗು ಚಂದ್ರಶೇಖರ್ ಐಜೂರ್ ಬರೆದ 'ದೇಶ' ಏದೇನಹಾ! 'ಕಾಲ' ಏದೇನಹಾ!' ಲೇಖನಕ್ಕೆ ಹಲವಾರು ಪ್ರತಿಕ್ರಿಯೆಗಳು ಬಂದಿವೆ. ಅವುಗಳಲ್ಲಿ ಹಲವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ. ಸಾಹಿತ್ಯ ಮತ್ತು ಭಾಷೆ ಬೆಳೆಯುವುದಕ್ಕೆ ಟೀಕೆ ಮಾತ್ರ ಮುಖ್ಯವಲ್ಲ. ಚರ್ಚೆ ಕೂಡಾ ಅತ್ಯಗತ್ಯ ಎಂಬ ನಂಬಿಕೆ ನಮ್ಮದು. ಯಾರ ವಿರುದ್ಧವೂ ಪೂರ್ವಾಗ್ರಹ ಇಟ್ಟುಕೊಳ್ಳದೆ ಆರೋಗ್ಯಪೂರ್ಣ ಚರ್ಚೆಗೆ 'ಲಂಕೇಶ್' ವೇದಿಕೆಯಾಗಿದೆಯಷ್ಟೆ.



ವಾಗ್ವಾದ ಭಂಜಕರು

ಪ್ರಿಯ ಕ್ಯಾಪ್ಟನ್,

ಪತ್ರಿಕೆಯ ಜುಲೈ 7, 2010ರ ಸಂಚಿಕೆಯಲ್ಲಿ, ಮುಖಪುಟದಲ್ಲೇ ಓದುಗರು ಗಮನಿಸಬೇಕಾದ ಪ್ರಮುಖ ಲೇಖನವೆಂಬ ಸೂಚನೆ ಸಹಿತ, ಪ್ರಕಟವಾಗಿರುವ ಮಂಜುನಾಥ್ ಲತಾ ಮತ್ತು ಚಂದ್ರಶೇಖರ್ ಐಜೂರರ "ದೇಶ' ಇದೇನಹಾ! 'ಕಾಲ' ಇದೇನಹಾ!' ಲೇಖನದ ವಿಕೃತತೆಯಿಂದ ನಾನು ಆಘಾತಗೊಂಡಿದ್ದೇನೆ. ಅದನ್ನು ತಿಳಿಸಲು ಈ ಪತ್ರ ಬರೆಯುತ್ತಿದ್ದೇನೆ. ನೀವು ಈ ಪತ್ರವನ್ನು ಪ್ರಸ್ತುತ ಲೇಖನದ ಜೊತೆ ನಾನು ನಡೆಸಲು ಇಚ್ಛಿಸುವ ವೈಚಾರಿಕ ವಾಗ್ವಾದ ಎಂದು ಖಂಡಿತ ಪರಿಗಣಿಸಕೂಡದು; ವೈಚಾರಿಕ ವಾಗ್ವಾದಕ್ಕೆ ತಕ್ಕುದಾದ ಯಾವುದೇ ಅವಕಾಶವನ್ನೂ ಲೇಖಕರು ನಮಗೆ ನೀಡಿಲ್ಲ. ಲೇಖಕರು ಒಂದು ಕೋರ್ಟ್ ಮಾರ್ಷಲ್ ನಡೆಸಿದ್ದಾರೆ; 'ದೇಶಕಾಲ'ದ ಸಂಪಾದಕರನ್ನು ಕಟಕಟೆಯಲ್ಲಿ ನಿಲ್ಲಿಸಿ, ಸಿದ್ಧಪಡಿಸಿದ ಅಪರಾಧಗಳ ಪಟ್ಟಿಯನ್ನು ಗಟ್ಟಿನಲ್ಲಿ ಓದಿ, ಸಜೆಯನ್ನು ಘೋಷಿಸಿದ ಮೇಲೆ ವಾಗ್ವಾದಕ್ಕೆ ಸ್ಥಾನವೆಲ್ಲಿದೆ? ಲೇಖಕರ ತೀರ್ಪಿನಿಂದ ಆದ ಆಘಾತಕ್ಕೆ ಕಾರಣವನ್ನು ವಿವರಿಸುವುದಕ್ಕೆ ಮಾತ್ರ ಈ ಪತ್ರ ಬರೆಯುತ್ತಿದ್ದೇನೆ.



• ಕೆ.ಫಣಿರಾಜ್

ನಾನು ಕಳೆದ 12 ವರ್ಷಗಳಿಂದ ಪತ್ರಿಕೆಗೆ ಬರೆಯುತ್ತಿದ್ದೇನೆ ಮಾತ್ರವಲ್ಲ ಪತ್ರಿಕೆಯಲ್ಲಿ ಪ್ರಕಟವಾದ ಕೆಲವು ಲೇಖನಗಳ ವಿಷಯದಲ್ಲಿ ವಾಗ್ವಾದವನ್ನೂ ಮಾಡಿದ್ದೇನೆ. 'ಶ್ರೀ'ಯವರು ಆಶೀಶ್ ನಂದಿ ಸಂಪಾದಕತ್ವದ 'ಹೊಸ ಶತಮಾನದ ಹೊಸ ಪರಿಭಾಷೆಗಳು' ಪುಸ್ತಕದ ಬಗ್ಗೆ ವಿಮರ್ಶೆಯನ್ನು ಬರೆದಿದ್ದಾಗ, ಅವರು ಮತ್ತು ನಾನು ಮೂರು ವಾರಗಳ ಕಾಲ ವಾಗ್ವಾದ ನಡೆಸಿದ್ದೆವು. ಈ ವಾಗ್ವಾದದಲ್ಲಿ ನಾವಿಬ್ಬರೂ ವಾಕ್ಯ-ವಾಕ್ಯಗಳ ವಾಚ್ಯಾರ್ಥ ಮತ್ತು ಧ್ವನ್ಯಾರ್ಥಗಳನ್ನು ಬಗೆ ಬಗೆದು, ಎಷ್ಟೋ ಕಡೆಗಳಲ್ಲಿ ಮೊನಚಾದ ಭಾಷೆಯಲ್ಲಿ ಪ್ರತಿವಾದಿಯ ವೈಚಾರಿಕ ನಿಲುವನ್ನು ಚುಚ್ಚಿದ್ದೆವು. ಪತ್ರಿಕೆಯಲ್ಲಿ ಪ್ರಕಟವಾಗುವ ಶಿವಸುಂದರರ ಅಂಕಣದ ಕೆಲವು ಬರಹಗಳಲ್ಲಿ ವ್ಯಕ್ತವಾದ ವಿಚಾರಗಳ ಬಗ್ಗೆ ನಾನು ತೀವ್ರ ವಿರೋಧ ಸೂಚಿಸಿ ಅವರಿಗೆ ಪ್ರತಿಕ್ರಿಯೆ ಕಳಿಸುತ್ತಿದ್ದೇನೆ- ಅಂತಹ ಪ್ರತಿಕ್ರಿಯೆಗಳ ಕುರಿತು ಶಿವಸುಂದರ್ ನನ್ನ ಜೊತೆ ಸಂವಾದವನ್ನು ನಡೆಸುತ್ತಿದ್ದಾರೆ. ಹೋದ ವರ್ಷವಷ್ಟೇ, ನಾವೆಲ್ಲ ತುಂಬ ಗೌರವಿಸುವ ಜಿ.ರಾಜಶೇಖರ್ ಪತ್ರಿಕೆಯಲ್ಲಿ ಬರೆದ ಲೇಖನ ಒಂದಕ್ಕೆ ನಾನು ವಿರೋಧ ಸೂಚಿಸಿ ಬರೆದಿದ್ದೆ; ಹಲವಾರು ವರ್ಷಗಳ ಹಿಂದೆ ನಾವಿಬ್ಬರೂ 'ಸಂಕ್ರಮಣ' ಪತ್ರಿಕೆಯಲ್ಲಿ ಎರಡು ಸಾರಿ ದೀರ್ಘ ವಾಗ್ವಾದ ನಡೆಸಿದ್ದೆವು. ಲಂಕೇಶರ ಸಂಪಾದಕತ್ವದ ಪತ್ರಿಕೆಯಲ್ಲಿ ಪ್ರಕಟವಾದ ಲಂಕೇಶ್-ತೇಜಸ್ವಿ, ಲಂಕೇಶ್-ರಾಮದಾಸ್, ಲಂಕೇಶ್-ಜಿ.ರಾಜಶೇಖರ್ ಇವರುಗಳ ವಾದ-ಪ್ರತಿವಾದ, ಯು.ಆರ್.ಅನಂತಮೂರ್ತಿಯವರ 'ಭಾರತೀಯ ಸಂಸ್ಕೃತಿ ಮತ್ತು ಲೇಖಕ' ಎಂಬ ಖ್ಯಾತ ಪ್ರಬಂಧಕ್ಕೆ ಪ್ರತಿಕ್ರಿಯೆಯಾಗಿ ಬರೆದ 'ಕರ್ನಾಟಕ ಸಂಸ್ಕೃತಿ ಮತ್ತು ಲೇಖಕ' ಬರಹಗಳು ಇಂದಿಗೂ ಅಮೂಲ್ಯವಾಗಿರುವ ಪಠ್ಯಗಳು. ದಶಕಗಳ ಹಿಂದೆ 'ರುಜುವಾತು'ವಿನಲ್ಲಿ ಪಟ್ಟಾಭಿರಾಮ ಸೋಮಯಾಜಿ ಮತ್ತು ಜಿ.ರಾಜಶೇಖರ್ ಭಾರತೀಯ ಸಂಸ್ಕೃತಿಯ 'ಸ್ವಕೀಯತೆ-ಪರಕೀಯತೆ' ಕುರಿತು ನಡೆಸಿದ ಚರ್ಚೆ ಇಂದಿಗೂ ನನಗೆ ನೆನಪಿದೆ. 'ಶೂದ್ರ ತಪಸ್ವಿ' ಕುರಿತು ಕುವೆಂಪು ಮತ್ತು ಮಾಸ್ತಿಯವರ ನಡುವೆ ನಡೆದ ಪ್ರಸಿದ್ಧ ವಾಗ್ವಾದದ ಮೂಲದಿಂದ ಕನ್ನಡ ಸಾಹಿತ್ಯದಲ್ಲಿ ಹಲವು ನಮೂನೆಯ ವೈಚಾರಿಕ ಹೊಳೆಗಳು ಹುಟ್ಟಿಕೊಂಡವು. ಹಾಗೆಯೇ ಸಾಹಿತ್ಯ ಕೃತಿ/ರಂಗ ಕೃತಿಗಳ ಮೂಲಕ ಕೃತಿಕಾರರ ವೈಚಾರಿಕತೆಯನ್ನು ತೀಕ್ಷ್ಣವಾಗಿ ವಿಮರ್ಶಿಸುವ ಬರಹಗಳು ಕನ್ನಡದಲ್ಲಿ ವಿಪುಲವಾಗಿವೆ. ಕನ್ನಡದ ಬರಹಗಳಲ್ಲಿ ಇಂತಹದೊಂದು ವಾಗ್ವಾದ ಪರಂಪರೆಯ ಕಾರಣವಾಗಿ ಮರ್ಯಾದೆಯ ಎಲ್ಲೆಯನ್ನು ಮೀರದೆಯೂ ಅತಿಯಾದ ನೆಲೆಗಳಿಂದ ವಾಗ್ವಾದ ನಡೆಸುವ ಗುಣ ಕನ್ನಡದ ಬರವಣಿಗೆಯಲ್ಲಿ ಸಹಜವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದಕ್ಕೆ ಕಾರಣವೂ ಇದೆ. ಕನ್ನಡದಲ್ಲಿ ವಾಗ್ವಾದವನ್ನು ಅದರ ಅತಿಯಾದ ನೆಲೆಗಳಲ್ಲಿ ನಡೆಸುವುದರಲ್ಲಿ ಚಂಪಾ ನಿಷ್ಣಾತರು; ಅವರು ವ್ಯಕ್ತಿಯೊಬ್ಬ 'ಆಡಿದ ಒಂದು ಮಾತು', 'ಭಾಷಣದ ಒಂದು ತುಣುಕು', 'ಬರೆದ ಒಂದು ಸಾಲು'- ಇಂತಹ ಮಿತವಾದ ಸಂಪನ್ಮೂಲಗಳನ್ನು ಹಿಡಿದು, ಅದನ್ನು ಆ ವ್ಯಕ್ತಿ ಹಿಂದೆ ಆಡಿದ-ಮಾಡಿದ-ಬರೆದ ಕೃತಿಗಳಿಗೆ ಪೋಣಿಸಿ ಕುಟುಕುವುದು ಸಾಮಾನ್ಯ; ಎಷ್ಟೋ ಸಾರಿ ಆಡಿದ ಮಾತಿನ ಸನ್ನಿವೇಶವನ್ನು ಹಗುರಗೊಳಿಸಿ ಟೀಕೆ ಮಾಡುವುದು ಅತಿ ಎನಿಸುತ್ತದೆ; ಆದರೆ ಎಂದೂ ಅವರು ಆಡದ ಮಾತುಗಳನ್ನು, ಬರೆಯದ ಸಾಲುಗಳನ್ನು ಆರೋಪಿಸಿ ಟೀಕಿಸಿದ್ದನ್ನು ನಾನು ಕಾಣೆ. ಹಾಗೆಯೇ, ತಾನು ಟೀಕಿಸುವ ವ್ಯಕ್ತಿಯ ಇತರ ಸಾಧ್ಯತೆಗಳನ್ನು ಅವರು ಮರೆಯುವುದಿಲ್ಲ, ಅವರನ್ನು ತನ್ನ ನೈತಿಕ ಮೇಲ್ಮೆಯ ಪ್ರದರ್ಶನದಲ್ಲಿ ಕೀಳಾಗಿ ಕಂಡದ್ದಿಲ್ಲ. ಅವರ ಗ್ರಹಿಂತ ತಪ್ಪು ಎಂದು ವಾದಿಸುವುದಕ್ಕೆ ಸಾಧ್ಯವಿರುವಷ್ಟು ಅವಕಾಶ ಅವರ ಬರಹಗಳಲ್ಲಿ ಇಂದಿಗೂ ಉಳಿದಿದೆ. ಗಿರೀಶ್ ಕಾರ್ನಾಡ್ ಕಾವೇರಿ ವಿವಾದದಲ್ಲಿ ಟ್ರಿಬ್ಯುನಲ್ ನೀಡಿದ ತೀರ್ಪನ್ನು ಸಂವಿಧಾನದ ಬಗ್ಗೆ ನಂಬಿಕೆ ಇರುವವರು ಗೌರವಿಸಬೇಕು; ಕರ್ನಾಟಕಕ್ಕೆ ಅನ್ಯಾಯವಾಗಿದೆ ಎನಿಸಿದಲ್ಲಿ ಸರಕಾರ ಕಾನೂನುರೀತ್ಯಾ ಸಂವಿಧಾನಿಕ ಹೋರಾಟ ನಡೆಸಬೇಕೆ ವಿನಃ ಜನ ಭಾಷೆಯ ನೆಪದಲ್ಲಿ ವಿವೇಚನಾರಹಿತವಾದ 'ಜನಜಂಗುಳಿಯ ಹಿಂಸೆ'ಯನ್ನು ನಡೆಸುವುದು ತಪ್ಪು ಎಂದು ಹೇಳಿದ್ದೆ ಒಂದು ವಿವಾದವಾಯಿತು; ಈ ವಿವಾದವನ್ನೆತ್ತಿಕೊಂಡು ಕೆ.ವಿ.ತಿರುಮಲೇಶ್ ಗಿರೀಶ್ ಕಾರ್ನಾಡರು ಕನ್ನಡದ ಸಾಮಾನ್ಯ ಜನರ ಆತಂಕ-ಆಕ್ರೋಶಗಳನ್ನು ಕೀಳಾಗಿ ಕಂಡಿದ್ದಾರೆಂಬ ನೆಲೆಯಿಂದ ಕಾರ್ನಾಡರ ಜೀವನಕ್ರಮವೂ, ಅವರಿಗೆ ದಕ್ಕಿದ್ದ ಸ್ಥಾನಮಾನಗಳೂ ಬೀದಿಯಲ್ಲಿ ಆಕ್ರೋಶ ವ್ಯಕ್ತಪಡಿಸುತ್ತಿರುವ ಸಾಮಾನ್ಯ ಜನರಿಗೆ ಋಣಿಯಾಗಿರಬೇಕೆಂದು, ಜನರ ಆಕ್ರೋಶಿತ ಹಿಂಸಾಕೃತ್ಯಗಳನ್ನು ಟೀಕಿಸುವುದರ ಮೂಲಕ ಗಿರೀಶ್ ತಮ್ಮ ಅಹಂಕಾರವನ್ನು ಪ್ರದರ್ಶಿಸುತ್ತಿದ್ದಾರೆಂದೂ, ಇದು ಜನತೆಗೆ ಬಗೆವ ದ್ರೋಹವೆಂದೂ ಕಟು ಶಬ್ದಗಳಲ್ಲಿ ಟೀಕಿಸುವ ಲೇಖನವನ್ನು 'ಪ್ರಜಾವಾಣಿ'ಯ ಸಾಪ್ತಾಹಿಕ ಪುರವಣಿಯಲ್ಲಿ ಬರೆದರು. ನಂತರ ನಾಲ್ಕು ವಾರಗಳ ಕಾಲ ತಿರುಮಲೇಶರ ಬರಹವನ್ನು ಸಮರ್ಥಿಸುವ ಹಾಗು ವಿರೋಧಿಸುವ ಪ್ರತಿಕ್ರಿಯೆಗಳು ಸಾಪ್ತಾಹಿಕ ಪುರವಣಿಯಲ್ಲಿ ಪ್ರಕಟಗೊಂಡವು. ನನ್ನ ಪ್ರಕಾರ, ಗಿರೀಶರ ಹೇಳಿಕೆಯ ಸನ್ನಿವೇಶದ ಅರ್ಥವನ್ನು, ಸಾಹಿತಿಯ ಸಾಮಾಜಿಕ ಜವಾಬ್ದಾರಿಯನ್ನು ಮತ್ತು 'ಆಕ್ರೋಶಿತ ಜನಸಮೂಹ'ವನ್ನೂ ತಿರುಮಲೇಶ್ ಅತಿ ಸರಳಗೊಳಿಸಿ, ನೈತಿಕ ಮೇಲ್ಮೆಯ ಉನ್ಮಾದಿತ ಭಾಷೆಯಲ್ಲಿ ಬರೆದಿದ್ದರು; ಇದರ ಪರಿಣಾಮವಾಗಿ, ಬಹುಪಾಲು ಪ್ರತಿಕ್ರಿಯೆಗಳು ಅವರ ಲೇಖನವನ್ನು ನೆಪ ಮಾತ್ರವಾಗಿಟ್ಟುಕೊಂಡು, ವಾದದ ಜಾಡನ್ನೇ ತಿರುಚಿ, ಸಲ್ಲದ ಆರೋಪಗಳನ್ನು ಗಿರೀಶರ ಮೇಲೆ

ಪ್ರತಿಕ್ರಿಯೆ

ಚಂದ್ರಶೇಖರ ಐಜೂರ್ ಹಾಗೂ ಮಂಜುನಾಥ ಬರೆದ ಲೇಖನ ಓದಿದೆ. ಅದು ವಿಮರ್ಶೆಯಾಗಿ ನನಗೆ ಕಾಣಲಿಲ್ಲ, ಅದು ಏನನ್ನು ಹೇಳುತ್ತದೆ ಎಂಬುದು ನನಗೆ ಕೊನೆಗೂ ಗೊತ್ತಾಗಲಿಲ್ಲ, ನಾನು ಕೆಲವೊಂದು ಊಹೆಗಳನ್ನು ಮಾಡಬೇಕಾಯಿತಷ್ಟೆ. ನನ್ನ ಪ್ರಕಾರ ವಿಮರ್ಶೆ ಎನ್ನುವುದು ಸಾಧ್ಯವಾದಷ್ಟು ಖಚಿತವಾಗಿ, ನಿರ್ದಿಷ್ಟವಾಗಿ, ಸ್ಪಷ್ಟವಾಗಿ, ನೇರವಾಗಿ ಓದುಗನಿಗೆ ಹೇಳುವಂತೆ ಇರಬೇಕು. ಆದರೆ ಅವರಿಬ್ಬರು ಸುತ್ತುಬಳಸಿನ ದಾರಿಯನ್ನು ಬಳಸಿದ್ದು ನನಗೆ ಯಾಕೋ ಸರಿಕಾಣಲಿಲ್ಲ, 'ದೇಶಕಾಲ'ವನ್ನು ಸರಿಯಾದ 'ವಿಮರ್ಶೆಗೆ' (ಗೇಲಿ, ವ್ಯಂಗ್ಯಕ್ಕೆ ಅಲ್ಲ) ಒಳಪಡಿಸುವ ದಾರಿಯನ್ನು ಬಿಟ್ಟದ್ದು ಯಾಕೆಂದು ಗೊತ್ತಾಗುತ್ತಿಲ್ಲ, ಅದಕ್ಕೆ ಬೇಕಾದ ಸಿದ್ಧತೆ ಅವರಲ್ಲಿ ಇಲ್ಲದಿರುವುದು ಲೇಖನವನ್ನು ಓದಿದಾಗ ತಿಳಿಯುತ್ತದೆ.

ಇನ್ನು ಈ ಲೇಖನದ ಲೇಖಕರು ಬ್ರಾಹ್ಮಣ, ದಲಿತ, ಶೂದ್ರರ ಚರ್ಚೆಯಲ್ಲೇ ಇನ್ನೂ ಸಿಕ್ಕಿಹಾಕಿಕೊಂಡಿರುವುದರ ಬಗ್ಗೆ ನಾನು ಏನನ್ನೂ ಹೇಳಲಾರೆ.

- ಸಂದೀಪ ನಾಯಕ

ವಿವೇಕ್ ಶಾನಭಾಗ್ ಮತ್ತು ಜಯಂತ್ ಕಾಯ್ಕಿಣಿ ಅವರು [illegible] ಕೂಡ ಅಷ್ಟೇ ಪ್ರಾಮಾಣಿಕವಾಗಿದ. ಅವರು ಅಷ್ಟೊಂದು sensible [illegible] ಎಂದರೆ ಇನ್ನೇನು ತಾನೆ ಮಾಡ್ಬೇಕು.

- [illegible]

ವ್ಯಂಗ್ಯದಿಂದ ಮುಟ್ಟಿಸಲಾಗದ ಸಂದೇಶವಿಲ್ಲ, ಐಜೂರ್ ಮತ್ತು ಲತಾ ಅವರ ಸಿಟ್ಟಿನಿಂದ ಸುಲಭವಾಗಿ ತಪ್ಪಿಸಿಕೊಳ್ಳಬಲ್ಲವರು ಕೂಡ ವ್ಯಂಗ್ಯದ ಬಲೆಯಿಂದ ನುಸುಳಲಾರರು.


ರಾಜಕಾರಣಿಗಳ ಬಗ್ಗೆ ಲೇಖನದಲ್ಲಿ ಬಿಟ್ಟಿದ್ದಾರೆ. ನಡುನಡುವೆ ಪ್ಯಾರಾಗಳಿಗೆ ಕೊಟ್ಟ ಶೀರ್ಷಿಕೆಗಳೂ catchy ಆಗಿವೆ.

ಅಂತು ಲಂಕೇಶ್ ಸತ್ತಿಲ್ಲ ಅಂತ ಕೆಲವರಿಗಾದರೂ ಈ ಲೇಖನ ಬರಹ ಸಮಾಧಾನ ತರುವುದರಲ್ಲಿ ಅಚ್ಚರಿಯಿಲ್ಲ, ಅಂತೂ ಐಜೂರ್ ಮತ್ತು ಲತಾ ಅವರು pandora`s box ಅನ್ನೇ ತೆರೆದಿದ್ದಾರೆ.

- ಅನುಪಮಾ

ರಿಸಿ, ದೂಷಿಸುವ ಮಟ್ಟಕ್ಕೆ ಇಳಿದವು. ಗಿರೀಶರ ಹೇಳಿಕೆಯನ್ನು, ಬೀದಿಗಿಳಿದು ಭಟಿಸುತ್ತಿದ್ದ ಗುಂಪುಗಳ ವರಸೆಗಳನ್ನು ತಿರುಮಲೇಶ್ ಗ್ರಹಿಸಿದ ರೀತಿ ಗಿತ್ತು ಎಂದು ವಾದಿಸಿದರೂ, ತಿರುಮಲೇಶ್ ಗಿರೀಶ್ ಆಡದ ಮಾತುಗಳನ್ನು ದ್ದಾರೆ ಎಂದಾಗಲಿ, ನಡೆಯದ ಪ್ರತಿಭಟನೆಗಳು ನಡೆದಿವೆ ಎಂದಾಗಲೀ ದಿದ್ದಿಲ್ಲ; ಆದರೆ, ಅವರ ಗ್ರಹಿಕೆಯ ಸ್ವರೂಪದ ಪರಿಣಾಮವಾಗಿ ಹಲವಾರು ದಿ ಗಿರೀಶರನ್ನು ಕಟಕಟೆಯಲ್ಲಿ ನಿಲ್ಲಿಸಿ ಸುಳ್ಳು ಆರೋಪಗಳನ್ನು ಅವರ ಲೆ ಹೊರಿಸಿದರು. ಈ ಇಡಿ ವಾಗ್ವಾದ ಅತಿಗೆ ಹೋಗುವುದರ ಮಿತಿಯನ್ನು ರುಪಡಿಸಿತು.

ಸಾರ್ವಜನಿಕ ಮಾತು, ಬರೆದ ಕೃತಿಗಳ ಪಠ್ಯಗಳಲ್ಲಿ ಇದೆ ಎಂದು ನಾವು ಸುವ ವೈಚಾರಿಕ-ಸೈದ್ಧಾಂತಿಕ-ಸಾಮಾಜಿಕ ನಿಲುವುಗಳನ್ನು ನಿರ್ದಾಕ್ಷಿಣ್ಯವಾಗಿ ದು ಹಾಕಿಕೊಂಡು ಟೀಕೆ-ವಾದಗಳನ್ನು ಮಾಡಬೇಕು ನಿಜ; ಈ ರೀತಿಯಲ್ಲಿ ತ ಮೌಲ್ಯಗಳನ್ನು ಅಲುಗಾಡಿಸಿ, ಹೊಸ ಬಗೆಯ ವಿಚಾರಗಳಿಗೆ ಯಾಮಗಳನ್ನು ಪಡೆದುಕೊಳ್ಳಬೇಕು ಎನ್ನುವುದನ್ನು ಕೂಡ ನಾನು ಒಪ್ಪುತ್ತೇನೆ. ಇಂತಹ ಅಪೇಕ್ಷೆಗಳನ್ನು ಈಡೇರಿಸಲು ಸಂವಾದಕ್ಕೆ ಮುಂದಾಗುವ ಕೆಲವು ಪ್ರಾಥಮಿಕ ತಯಾರಿಗಳನ್ನು ಮಾಡಿಕೊಳ್ಳಬೇಕಾಗುತ್ತದೆ; ಆಡಿದ ತುಗಳನ್ನು ಪೂರ್ಣವಾಗಿ ಕೇಳಿಸಿಕೊಳ್ಳುವುದು/ಪಠ್ಯವನ್ನು ಪೂರ್ಣವಾಗಿ ಕೊಳ್ಳುವುದು, ಮಾತು/ಕೃತಿಯ ಸನ್ನಿವೇಶವನ್ನು ಗ್ರಹಿಸುವುದು, ಎದುರಿಸಲಿರುವ ಮು ಹಿಂದಿನ ಮಾತು/ಕೃತಿಗಳ ಬಗ್ಗೆ- ವಾಗ್ವಾದದ ವಸ್ತುವಿಗೆ ತಕ್ಕಷ್ಟಾದರೂ- ಸಂಪಾದಿಸುವುದು ಮತ್ತು ಹೇಳಬೇಕಾದದ್ದನ್ನು ಭಾಷೆಯಲ್ಲಿಯೇ ಬೇಕಾದ್ದರಿಂದ, ವಾಗ್ವಾದದ ಉದ್ದೇಶಕ್ಕೆ ತಕ್ಕುದಾದ ಭಾಷೆಯನ್ನು ಎಚ್ಚರದಿಂದ ಕೊಳ್ಳುವುದು-ಇವುಗಳನ್ನು ಪೂರೈಸಿಕೊಳ್ಳಬೇಕು. ಇಷ್ಟು ಶ್ರಮವಹಿಸದೇ ಲ್ಲಿ ನೈತಿಕ ಆಹಂಕಾರದ ಪ್ರದರ್ಶನ, ಸೈದ್ಧಾಂತಿಕ ಮೇಲ್ಮೆಯ ದಾದಾಗಿರಿ, ರ್ವಜನಿಕ ವ್ಯಕ್ತಿ ನಿಂದನೆಗಳ ವಿಕೃತಿಯನ್ನು ವಾಗ್ವಾದದ ನೆಪದಲ್ಲಿ ಯಬಹುದಷ್ಟೇ. ಇಂತಹ ವಿಕೃತಿಗಳಿಗೆ ಸಾರ್ವಜನಿಕ ಚರ್ಚೆಯ ಮುಖವಾಡ ಶಿಸಿ, ತನಗೆ ಪಥ್ಯವಾಗದ ವ್ಯಕ್ತಿ-ವಿಚಾರಗಳನ್ನು ಬಡಿದು ಬಾಯ್ಮುಚ್ಚಿಸುವ ರವನ್ನು ತಯಾರು ಮಾಡಿದ ಕೀರ್ತಿ ಖಂಡಿತಕ್ಕೂ 'ವಿಜಯ ಕರ್ನಾಟಕ'ಕ್ಕೆ ಬೇಕು; 'ಆವರಣ' ಕಾದಂಬರಿ ಮತ್ತು ಮತಾಂತರದ ವಿಷಯಗಳಲ್ಲಿ ಈ ವನ್ನು ವಿ.ಕ. ಯಶಸ್ವಿಯಾಗಿ ಪ್ರದರ್ಶಿಸಿದೆ. ವಿ.ಕ.ದ ಅಂಕಣಕಾರ ಪ್ರತಾಪ ನಂತೂ ವಿಕೃತತೆಯ ಕತ್ತಿ ಝಳಪಿಸುತ್ತ ವಾಗ್ವಾದದ ಮರ್ಯಾದೆಗಳನ್ನೆಲ್ಲ ಟ್ಟಿ ಹಾಕುವುದರಲ್ಲಿ ನಿಸ್ಸೀಮ. ಎರಡು ವಾರಗಳ ಕೆಳಗೆ, ಆರ್.ಅನಂತಮೂರ್ತಿಯವರು 'ಪ್ರಜಾವಾಣಿ'ಯ ತಮ್ಮ ಅಂಕಣದಲ್ಲಿ ಪ್ರೋವಾದದ ಕುರಿತು. ಬರೆದ ಲೇಖನದ ವಿರುದ್ಧ ಈ ಪುರುಷೋತ್ತಮ ದ ನೂರಒಂದನೇ ಸಾಹಸದ ವಿಕೃತಿಯ ಬಗ್ಗೆ ಜಿ.ರಾಜಶೇಖರ್ ಪತ್ರಿಕೆಯ 7ರ ಸಂಚಿಕೆಯಲ್ಲಿ ವಿವರವಾಗಿ ಬರೆದಿದ್ದಾರೆ; ಕನ್ನಡದ 50 ಬರಹಗಾರರು ಗಿ ಪ್ರತಾಪ ಸಿಂಹನ ವಿಕೃತಿಯನ್ನು ಖಂಡಿಸಿ ವಿ.ಕ.ಕ್ಕೆ ಪ್ರತಿಭಟನಾ ವನ್ನೂ ಬರೆದಿದ್ದಾರೆ. ಇದರ ಗೇ, ಪತ್ರಿಕೆಯಲ್ಲಿ 'ದೇಶ-ಕಾಲ' ಯ ವಿಶೇಷಾಂಕದ ವಿರುದ್ಧ ಮನಾಥ್ ಲತಾ ಮತ್ತು ಚಂದ್ರ ರ್ ಐಜೂರ್ ಪ್ರತಾಪ ಸಿಂಹ ತ ತಾವೇನು ಕಮ್ಮಿ ಇಲ್ಲ ಯ ಹುಮ್ಮಸ್ಸಿ'ನಲ್ಲಿ ಬರೆದಿ



ಲತಾ-ಐಜೂರರ ಬರಹವನ್ನು ಪ ಸಿಂಹನ ಬರಹಗಳಿಗೆ ಲಿಸುವುದು ಸರಿಯೇ? -ಯಾಕೆಂದು ಹೇಳುತ್ತೇನೆ. ಶಕರು ಮೊದಲು, ನಮ್ಮ ಜದಲ್ಲಿ ನಲುಗುತ್ತಿರುವ ಜನರ ತಾವು ಟೀಕಿಸಲು ಹೊರಟಿ ವ್ಯಕ್ತಿಗಳು ಅರ್ಥ ಪೈಸೆ ಕಾಳಜಿಯೂ ಇಲ್ಲದೆ ಐಷಾರಾಮದ ಚಟುವಟಿಕೆಗಳಲ್ಲಿ ಗಿದ್ದಾರೆ ಎಂಬ ನೈತಿಕ ವರಸೆಯಲ್ಲಿ ಆಪರಾಧ ಹೊರಿಸುತ್ತಾರೆ. ಇದು ರಣೆಗೆ ಸಾಕಾಗುವಷ್ಟು ಗಟ್ಟಿಯಾದ ಅಪರಾಧ ಎಂಬ ಸಮರ್ಥನೆಯೊಂದಿಗೆ ನ್ನು ಕಟಕಟೆಯಲ್ಲಿ ನಿಲ್ಲಿಸಿ ಅಪರಾಧಗಳ ಪಟ್ಟಿ ಬಿಚ್ಚುತ್ತಾರೆ. ನಂತರ ಕಾಲ' ವಿಶೇಷಾಂಕದಲ್ಲಿರುವ ಸಾಹಿತ್ಯ ಮತ್ತು ಸಾಹಿತಿಗಳ ಮೌಲ್ಯಗಳನ್ನು ಲಿಸುವ ಜರೂರೇ ಇಲ್ಲ ಎಂಬ ದಾರ್ಷ್ಟ್ಯದಲ್ಲಿ ಬ್ರಾಹ್ಮಣ ಗುಂಪುಗಾರಿಕೆ, ರಿಗೆ ಅಪಮಾನ, ಎನ್.ಆರ್.ಐ.ಗಳ ನಾಲಿಗೆ ರುಚಿ ತಣಿಸಲು ರಚಿಸಿರುವ ಕ್ಯ ಶೂದ್ರ-ದಲಿತ ಲೇಖಕರನ್ನು ಬೇಸ್ತು ಬೀಳಿಸಿರುವುದು, 'ಚೆಡ್ಡಿ'ಗಳಿಗೆ ಲ- ಇತ್ಯಾದಿ ಅಪರಾಧಗಳನ್ನು ವಿಶೇಷಾಂಕದ ಸಂಪಾದಕರು ಮಾಡಿದ್ದಾರೆ ಏಕಪಕ್ಷೀಯ ತೀರ್ಪು ನೀಡುತ್ತಾರೆ. ಆಸಕ್ತ ಓದುಗರು ಈ ವಾದಕ್ರಮವನ್ನು

▶▶ 16

ಈ ಅಸಹನೆ ಸಾಹಿತ್ಯ ವಿಮರ್ಶೆಯ ವಿಧಾನವಲ್ಲ



● ಜಿ.ರಾಜಶೇಖರ

ಪತ್ರಿಕೆಯ ಕಳೆದ ವಾರದ ಸಂಚಿಕೆಯಲ್ಲಿ ಪ್ರಕಟವಾಗಿರುವ "ದೇಶವಿದೇ ನಹಾ! ಕಾಲವಿದೇನಹಾ!"ಎಂಬ ಲೇಖನದಿಂದ ನನಗೆ ಆಘಾತವಾಗಿದೆ. ವ್ಯಂಗ್ಯ ಅಪಹಾಸ್ಯ ' ಸುಳ್ಳು ಆರೋಪ ಮತ್ತು ಒಂದಿಷ್ಟು ಬೈಗುಳದ ಮಾತುಗಳನ್ನು ಹೊರತುಪಡಿಸಿ ಆ ಲೇಖನ 'ದೇಶ ಕಾಲ' ಹಾಗೂ ಅದರ ವಿಶೇಷಾಂಕದ ಬಗ್ಗೆ ಏನು ಹೇಳಲು ಹವಣಿಸುತ್ತಿದೆ ಎಂದೇ ನನಗೆ ಅರ್ಥವಾಗುತ್ತಿಲ್ಲ, ಲೇಖನದ ಮೊದಲಿಗೇ ಉತ್ತರ ಕರ್ನಾಟಕದ ಪ್ರವಾಹ ಸಂತ್ರಸ್ತರನ್ನು ಪ್ರಸ್ತಾಪಿಸಿ ದೇಶ ಕಾಲ ವಿಶೇಷಾಂಕ ಓದುಗರನ್ನೂ ಸಂಪಾದಕರನ್ನು ಹಂಗಿಸಲಾಗಿದೆ. ಇದು ಎತ್ತಣಿಂದೆತ್ತಣ ಸಂಬಂಧ? ಹೀಗೆ ಹಂಗಿಸುವುದರಿಂದ ಆ ಪ್ರವಾಹ ಸಂತ್ರಸ್ತರಿಗೆ ಏನು ಪ್ರಯೋಜನ? ಅದೇ ಲೇಖನದಲ್ಲಿ ಹಲವೆಡೆ 'ದೇಶ ಕಾಲ' ಮೇಲುಜಾತಿ ಮತ್ತ ಪ್ರತಿಷ್ಠಿತ ವರ್ಗಗಳಿಗೆ ತಕ್ಕುದಾದ ಮತ್ತು ಅವರಿಗೆ ಮಾತ್ರ ಮೀಸಲಾಗಿರುವ ಪತ್ರಿಕೆ ಎಂಬ ಮಾತನ್ನು ನೇರವಾಗಿ ಹೇಳದೆ, ಸುತ್ತು ಬಳಸು ಮಾತಿಗಳಲ್ಲಿ ಸೂಚಿಸಲಾಗಿದೆ 'ದೇಶ ಕಾಲ' ವಿಶೇಷಾಂಕದ ಬರಹಗಾರರ ಪಟ್ಟಿಯೇ ಆ ಆಪಾದನೆ ಸುಳ್ಳು ಎಂದು ಸಾಬೀತು ಮಾಡುವುದರಿಂದ, ದಲಿತ, ಶೂದ್ರ ಲೇಖಕರನ್ನು ವಿಶೇಷಾಂಕದ ಜಗಲಿ ಪಡುಸಾಲೆಗಳಲ್ಲಿ ಉಳಿದ ಜಾಗಗಳಲ್ಲಿ ಕುಳ್ಳಿರಿಸಲಾಗಿದೆ ಎಂಬ ಪರಾವನ್ನು ಸಹ ಮೇಲೆ ಕಾಣಿಸಿದ ಲೇಖನದ ಲೇಖಕದ್ವಯರು ಸೇರಿಸಿದ್ದಾರೆ. ಅವರ ಮಾತನ್ನು ನಾವು ಹೇಗೆ ಅರ್ಥ ಮಾಡಿಕೊಳ್ಳಬೇಕು? ಸ್ವತಃ ಆ ಲೇಖಕರಿಗೆ ತಮ್ಮ ಮಾತಿನಲ್ಲಿ ನಂಬಿಕೆ ಇಲ್ಲ . ಸಾಹಿತಿಗಳ ಹಾಗೆ ಸಾಹಿತ್ಯ ವಿಮರ್ಶಕರು ಸಹ, ತಮ್ಮ ಅನಿಸಿಕೆಗಳನ್ನು ಸಂಕೇತ, ರೂಪಕ, ಅನ್ಯೋಕ್ತಿ ಇತ್ಯಾದಿ ಪ್ರತಿಮಾ ವಿಧಾನಗಳಲ್ಲಿ ಮಂಡಿಸತೊಡಗಿದರೆ ಆಗಬಹುದಾದ ಅನರ್ಥಗಳಿಗೆಲ್ಲಾ ಈ ಲೇಖನ ಒಂದು ಪ್ರಮಾಣ ಎಂಬಂತಿದೆ. ಲೇಖನದಲ್ಲಿ ಯಾವ ಮಾತನ್ನು ಯಾರ ಬಗ್ಗೆ ಹೇಳಲಾಗಿದೆ ಎಂದು 'ಪತ್ತೆ ಮಾಡಲು' ದೇಶ ಕಾಲ ವಿಶೇಷಾಂಕವನ್ನು ಬಿಡಿಸಿಟ್ಟುಕೊಂಡು ಪುಟಪುಟ ತಪಾಸಣೆ ನಡೆಸಬೇಕಾಗುತ್ತದೆ. ಉದಾಹರಣೆಗೆ ವಿಶೇಷಾಂಕದ ಕೆಲವು ಬರಹಗಳು, ಈ ಲೇಖಕದ್ವಯರಿಗೆ "ಗರ್ಭಪಾತವಾಗಿ ಚೆಲ್ಲಾಪಿಲ್ಲಿಯಾಗಿ ಹೊರಚೆಲ್ಲಿದ ಭ್ರೂಣದ ಚೂರು" ಗಳಂತೆ ಕಂಡಿವೆ. ಈ ಹೋಲಿಕೆಯಿಂದ ಅಸಹ್ಯವೆನ್ನಿಸಿದರೂ ಯಾರ ಬಗ್ಗೆ ಇದನ್ನು ಬಳಸಲಾಗಿದೆ ಎಂದು ಕೆಟ್ಟ ಕುತೂಹಲದಲ್ಲಿ ವಿಶೇಷಾಂಕವನ್ನು ನಾನು ಮೊಗಚಾಡಿದೆ. ಈ ಪತ್ತೇದಾರಿಯಿಂದ ವ್ಯರ್ಥಕಾಲಹರಣವಷ್ಟೇ ಆಯಿತು

'ದೇಶ ಕಾಲ'ದ ಲೇಖಕರಷ್ಟೇ ಯಾಕೆ ಯಾವ ಲೇಖಕ ವಿಮರ್ಶಾತೀತರಲ್ಲ, ಆದರೆ ಅವರ ಬಗ್ಗೆ ನಮ್ಮ ಅಸಮಾಧಾನವಿದ್ದರೆ ಮೊದಲು ಅವರನ್ನು ಹೆಸರಿಸಿ ಅವರ ಕೃತಿಗಳನ್ನು ಉದಾಹರಿಸಿ ನಮ್ಮ ಅನಿಸಿಕೆಗಳನ್ನು ಸಮರ್ಥಿಸುವುದು ವಿಮರ್ಶೆಯ ವಿಧಾನ. ಆದರೆ ಪ್ರಸ್ತುತ ಲೇಖನ ವಿಮರ್ಶೆಯ ಈ ಕನಿಷ್ಠ ಮರ್ಯಾದೆಯನ್ನು ಸಹ ಇಟ್ಟುಕೊಂಡಿಲ್ಲ, ಆದ್ದರಿಂದ ಲೇಖನದ 'ದೇಶ ಕಾಲ'ದ ಬಗ್ಗೆ ಪತ್ರಿಕೆಯ ಓದುಗರಲ್ಲಿ ಹುಟ್ಟಿಸಬಹುದಾದ ಅಪಕಲ್ಪನೆಗಳನ್ನು ನಿವಾರಿಸುವ ನಿಟ್ಟನಲ್ಲಿ ಕೆಲವು ಮಾಹಿತಿಗಳನ್ನು ಇಲ್ಲಿ ನೀಡಬಯಸುತ್ತೇನೆ.

1) 'ದೇಶ ಕಾಲ'- ಮೂರು ತಿಂಗಳಿಗೊಮ್ಮೆ ಪ್ರಕಟವಾಗುವ ಸಾಹಿತ್ಯಿಕ, ವೈಚಾರಿಕ ಪತ್ರಿಕೆಯಾಗಿದ್ದು ಕಳೆದ ಐದು ವರ್ಷಗಳಿಂದ ಇದು ಕ್ಲುಪ್ತ ಕಾಲದಲ್ಲಿ ಹೊರ ಬರುತ್ತಿದೆ.

2) ಈ ಪತ್ರಿಕೆಯ ಸಂಪಾದಕ ವಿವೇಕ ಶಾನಭಾಗ; ಪ್ರಕಾಶಕರೂ ಅವರೇ; ಚಂದದಾರರಿಗೆ ಅದನ್ನು ಮುಟ್ಟಿಸುವ ಹೊಣೆಯನ್ನೂ ಅವರೇ ಹೊತ್ತಿದ್ದಾರೆ. ವಿವೇಕ ಶಾನಭಾಗ ಮತ್ತು ಅವರ ಒಬ್ಬಿಬ್ಬರು ಗೆಳೆಯರ ಶ್ರಮದಿಂದಾಗಿ ಮಾತ್ರ ಪತ್ರಿಕೆ ಹೊರಬರುತ್ತಿದೆ. ದೇಶ ಕಾಲ ಯಾವುದೇ ಸರ್ಕಾರೀ ಸಂಸ್ಥೆ ವಿಶ್ವವಿದ್ಯಾಲಯ, ಮಠ, ಪ್ರತಿಷ್ಠಾನ ಇತ್ಯಾದಿ ಅಧಿಕಾರ ಕೇಂದ್ರಗಳ ಪ್ರಕಟಣೆ ಅಲ್ಲ, ಹಾಗಾಗಿ ಅದರ ಸಂಪಾದಕರು ಸ್ವತಃ ತಾನೇ ಹಾಕಿಕೊಂಡಿರುವ ಅಭಿರುಚಿ ಮತ್ತು ವಿವೇಚನೆಗಳ ಮಾನದಂಡ ಹೊರತುಪಡಿಸಿ, ತನ್ನ ಪತ್ರಿಕೆಗಳ ಬಗ್ಗೆ ಯಾರಿಗೂ ವಿವರಣೆ ನೀಡ ಬೇಕಾದದ್ದಿಲ್ಲ,

3) 'ದೇಶ ಕಾಲ'ಕ್ಕೆ ಐದು ವರ್ಷ ತುಂಬಿದ ಸಂದರ್ಭದಲ್ಲಿ ಪ್ರಕಟವಾದ ವಿಶೇಷಾಂಕದಲ್ಲಿ ಯು.ಆರ್. ಅನಂತಮೂರ್ತಿ, ಗಿರೀಶ್ ಕಾರ್ನಾಡ್, ಜಯಂತ ಕಾಯ್ಕಿಣಿ, ಯಶವಂತ ಚಿತ್ತಾಲ,. ಶ್ರೀನಿವಾಸ ವೈದ್ಯ , ಅಬ್ದುಲ್ ರಶೀದ್, ಗುರುಪ್ರಸಾದ ಕಾಗಿನೆಲೆ, ಪ್ರಹ್ಲಾದ ಅಗಸನ ಕಟ್ಟೆ, ಸುನಂದಾ ಪ್ರಕಾಶ ಕಡಮೆ, ಬಿ.ಟಿ. ಜಾಹ್ನವಿ, ಜೋಗಿ, ಮೊಗಳ್ಳಿ ಗಣೇಶ್, ಕೆ.ಸತ್ಯನಾರಾಯಣ ಮತ್ತು ಅಮರೇಶ್ ನುಗಡೋಣಿಯವರ ಕತೆಗಳಿವೆ; ವಸುಧೇಂದ್ರರ ಕಿರು ಕಾದಂಬರಿ, ರಘುನಂದನ್‌ರ ಪೂರ್ಣಪ್ರಮಾಣದ ನಾಟಕ, ರಾಘವೇಂದ್ರ ಪಾಟೀಲರ ನೀಳ್ಗತೆ ಮತ್ತು ಕುಂವೀಯವರ ಆತ್ಮಚರಿತ್ರೆಯ ಆಯ್ದ ಪುಟಗಳಿವೆ. ವೈದೇಹಿಯವರ ಎರಡು ವಿಶಿಷ್ಟ ಸಂದರ್ಶನ ಲೇಖನಗಳ ಜೊತೆ, ವೀರಪ್ಪ ಮೊಯ್ಲಿ, ಹೆಚ್.ಡಿ.ಕುಮಾರಸ್ವಾಮಿ, ಸಿದ್ದರಾಮಯ್ಯ ಶೋಭಾ ಕರಂದ್ಲಾಜೆ, ಕೆ.ಎಸ್.ಪುಟ್ಟಣ್ಣಯ್ಯ ಸುರೇಶ್‌ಕುಮಾರ್ ಮತ್ತು ಕೃಷ್ಣ ಭೈರೇಗೌಡರ ಜೊತೆ ಪ್ರಕಾಶ ಬೆಳವಾಡಿ ನಡೆಸಿರುವ ಸಂದರ್ಶನಗಳಿವೆ. ವಿಶೇಷಾಂಕದಲ್ಲಿ ಕೆ.ವಿ.ಅಕ್ಷರ, ಕೆ.ಸಚ್ಚಿದಾನಂದನ್, ಲಕ್ಷ್ಮೀಶ ತೋಳ್ಪಾಡಿ, ಟಿಂ.ಎಸ್. ಶ್ರೀರಾಮ್ ಹಾಗೂ ಎಸ್.ಆರ್. ವಿಜಯಶಂಕರರ ಲೇಖನಗಳೊಂದಿಗೆ, ಚಿತ್ರಕಾರ ಎಸ್.ಜಿ.ವಾಸುದೇವ್ ಅವರ ಜೊತೆ ಪ್ರತಿಭಾನಂದಕುಮಾರ್ ಹಾಗೂ ರಂಗಕರ್ಮಿ ಇಕ್ಬಾಲ್ ಜೊತೆ ಎಸ್.ದಿವಾಕರ್ ನಡೆಸಿರುವ ಶಬ್ದ-ರೇಖೆಗಳ ಕುತೂಹಲಕಾರಿ ಪ್ರಯೋಗಗಳಿವೆ. ಕನ್ನಡದಲ್ಲಿ ಈಗ ಬರೆಯುತ್ತಿರುವ ಪ್ರತಿಭಾವಂತಕವಿಗಳ ಜೊತೆ ಯುವ ಕವಿಗಳೂ ಸೇರಿದಂತೆ 25 ಕವಿಗಳ ಪದ್ಯಗಳನ್ನು ವಿಶೇಷಾಂಕ ಒಳಗೊಂಡಿದೆ. ಅದೂ ಅಲ್ಲದೆ ವಿಶೇಷಾಂಕದಲ್ಲಿ 21 ವಿಮರ್ಶಕರು, 21ನೆಯ ಶತಮಾನದ ಭರವಸೆ ಹುಟ್ಟಿಸುವ 21 ಲೇಖಕರ ಬಗ್ಗೆ ಬರೆದಿದ್ದರೆ, ಬಿ.ಎಲ್.ನಾಗಭೂಷಣಸ್ವಾಮಿ, ಟಿ.ಪಿ.ಅಶೋಕ್ ಮತ್ತು ಸಿ.ಎನ್.ರಾಮಚಂದ್ರನ್ 21ನೆಯ ಶತಮಾನದ 21 ಮುಖ್ಯ ಕೃತಿಗಳನ್ನು ಹೆಸರಿಸಿ ಅವುಗಳ ಬಗ್ಗೆ ಬರೆದಿದ್ದಾರೆ. ಇದೊಂದು ಸಚಿತ್ರ ಸಂಪುಟವಾಗಿದ್ದು, ಇಲ್ಲಿ ಅಚ್ಚಾಗಿರುವ ಚಿತ್ರಗಳು ಸಹ ಸದಭಿರುಚಿಯದ್ದಾಗಿದೆ. ಸಮಕಾಲೀನ ಕನ್ನಡ ಬರವಣಿಗೆಯ ಕೆಲವು ಉತ್ತಮ ಮಾದರಿಗಳನ್ನು ಒದಗಿಸುವ ಈ ವಿಶೇಷಾಂಕದಲ್ಲಿ ಕಂಡುಬರದ ಏಕೈಕ ಮುಖ್ಯ ಲೇಖಕರೆಂದರೆ ಹೆಚ್.ಎಸ್.ಶಿವಪ್ರಕಾಶ್. ಅವರ ಗೈರುಹಾಜರಿ ಸಂಪಾದಕರ ವ್ಯಕ್ತಿಗತ ಪೂರ್ವಾಗ್ರಹದಿಂದ ಆಗಿರುವಂತಹದ್ದಲ್ಲ ಎಂಬ ವಿಶ್ವಾಸ ನನಗಂತೂ ಇದೆ.

4) 'ದೇಶಕಾಲ'ದ ಎಲೈಟಿಸ್ಟ್ ಧೋರಣೆ ಬಗ್ಗೆ ಕೆಲವು ಎಡಪಂಥೀಯರು ಆಡಿಕೊಳ್ಳುವುದನ್ನು ನಾನು ಕೇಳಿದ್ದೇನೆ. ಇದು ವಿಚಿತ್ರವಾಗಿರುವ ಲೇಬಲ್. ಶ್ರೀಮಂತರಿಗೆ ಮಾತ್ರ ಮೀಸಲಾಗಿರುವ ಶಾಲೆ, ಕಾಲೇಜು, ಕ್ರೀಡೆ, ಹೋಟೆಲ್, ಆಸ್ಪತ್ರೆ ಮುಂತಾದವುಗಳನ್ನು ಎಲೈಟಿಸ್ಟ್ ಎಂದು ತಿರಸ್ಕರಿಸುವುದು ಸರಿ. ಸಾಹಿತ್ಯ ನಿಯತಕಾಲಿಕವೊಂದರ ಸೊಗಸಾದ ಮುದ್ರಣ, ವಿನ್ಯಾಸ, ಬರವಣಿಗೆಯ ಕಸಬುಗಾರಿಕೆ ಇವೆಲ್ಲ ಯಾವತ್ತಿನಿಂದ ಎಲೈಟಿಸ್ಟ್ ಆದವು? ಹಾಗಾದರೆ ತಮ್ಮ ವೃತ್ತಿಗಳಲ್ಲಿ ಅಸಾಧಾರಣ ನೈಪುಣ್ಯ ಪಡೆದಿರುವ ರೈತರು, ಬಡಗಿಗಳು, ಅಕ್ಕಸಾಲಿಗರು, ನೇಕಾರರು ಮುಂತಾದವರು ಸಹ ಎಲೈಟಿಸ್ಟ್‌ಗಳೋ? ದೇಶಕಾಲವನ್ನು ಎಲೈಟಿಸ್ಟ್ ಎಂದು ಹೀಗಳೆಯುವವರು, ಅದರಲ್ಲಿ ಪ್ರಕಟವಾಗಿರುವ ಒಂದು ಬರಹದ ಉದಾಹರಣೆಯಿಂದಲಾದರೂ ತಮ್ಮ ಮಾತನ್ನು ಸಮರ್ಥಿಸಿಕೊಂಡಿರುವುದು ನನ್ನ ಗಮನಕ್ಕೆ ಬಂದಿಲ್ಲ, ಒರಟುಒರಟಾಗಿ ಬರೆಯುವುದರಿಂದ ಶೋಷಿತರಿಗೆ ಯಾವ ಪ್ರಯೋಜನವೂ ಆಗುವುದಿಲ್ಲ; ಶೋಷಿತರ ಚಳವಳಿಗಳಿಗೂ ಈ ಬಗೆಯ ವಿಮರ್ಶೆಯಿಂದ ಏನೂ ಆಗಬೇಕಾದದ್ದಿಲ್ಲ, ●

ಸಿಂಯು ಐಜೂರು ಅವರಲಿ.

ನಮಸ್ಕಾರ. ಈಗಷ್ಟೇ ಗೌರಿ ಲಂಕೇಶ್ ಪತ್ರಿಕೆಯಲ್ಲಿ ಲೇಖನ ಓದಿ ಮೇಲ್ ನೋಡಿದರೆ ಅದೇ ಲೇಖನ ಗೆಳೆಯ ಸಂದೀಪ ನಾಯಕ್ ವರ್ಡ್ ಮಾಡಿದ್ದಾನೆ. ಪತ್ರಿಕೆಯಲ್ಲಿನ ಲೇಖನಕ್ಕಿಂತಲೂ ಮೂಲ ಲೇಖನ powerful ಆಗಿದೆ. ಬರಹದ ಶೈಲಿ ಮತ್ತು ವ್ಯಂಗ್ಯ ಇಷ್ಟವಾದರೂ ಲೇಖನದ ಮೂಲಕ ನೀವೇನು ಹೇಳಹೊರಟಿದ್ದೀರೋ ಅನ್ನುವುದಕ್ಕಿಂತಲೂ [illegible] ದೇ ಜಾತಿಕಾರಣದಿಂದಲೇ 'ದೇಶಕಾಲ'ದ ಇಡೀ ಕೆಲಸವನ್ನು [illegible] ಅನ್ನಿಸಿತು.

[illegible] ಪ್ರತಿ ಪತ್ರಿಕೆಯೂ ಒಂದೊಂದು ಹಿಡನ್ ಅಜೆಂಡಾ ಇಟ್ಟುಕೊಂಡೇ ಸೂಚಕ ರೂಪಿಸುತ್ತವೆಂಬ ಸಾಮಾನ್ಯ ಸತ್ಯ ನಮ್ಮೆಲ್ಲರಿಗೂ ಗೊತ್ತು. ಸೆಕ್ಯುಲರ್ ಆಗಿರಬಹುದು ಅಥವಾ ಆ ಪತ್ರಿಕೆ ಒಪ್ಪಿಕೊಂಡ ತತ್ವ ಆಗಿರಬಹುದು. ಮೂಲ 'ಲಂಕೇಶ್ ಪತ್ರಿಕೆ' ನಮ್ಮೆಲ್ಲರಲ್ಲೂ ಹುಟ್ಟಿಸಿದ್ದ ಜಾಗೃತಿ, ರಾಜಕೀಯ ಪ್ರಜ್ಞೆ, ಸಾಂಸ್ಕೃತಿಕ ಚಿಂತನೆಗಳನ್ನು ಈಗಿನ ಎರಡರಲ್ಲಿ ಲಂಕೇಶ್ ಆಗಲೀ ಅಥವ ನೀವಿಬ್ಬರೂ ಕೆಲಸ ಮಾಡಿದ ಕನ್ನಡ ಟೈಮ್ಸ್ ಆಗಲಿ ಮಾಡಲು ಸಾಧ್ಯವಾಯಿತೇ ಅನ್ನುವುದೂ ಇಲ್ಲಿ ಮುಖ್ಯ.

ನೀವು ಒಪ್ಪಿ ಅಥವಾ ಬಿಡಿ. 'ದೇಶಕಾಲ' ವಿಶೇಷದಲ್ಲಿರುವ ಅನಂತಮೂರ್ತಿ, ಜಯಂತ ಕಾಯ್ಕಿಣಿ, ಕಾಗಿನೆಲೆ, ನುಗಡೋಣಿಯವರುಗಳ ಕತೆ, ವಸುದೇಂದ್ರರ ಕಾದಂಬರಿ, ಕನ್ನಡ ನಾಡಿನ ಭವಿಷ್ಯ ಕುರಿತಂತೆ ಇರುವ ಸಂದರ್ಶನಗಳ ಮಾಲಿಕೆ, ನಿಜಕ್ಕೂ ಬಹಳ ಕಾಲ ಮನಸ್ಸಲ್ಲಿ ನಿಲ್ಲುವಂಥವು. ಆದರೆ 21 ಲೇಖಕರ ಆಯ್ಕೆ, 21 ಪುಸ್ತಕಗಳು ಇತ್ಯಾದಿ ಯಾದಿಯಲ್ಲಿ ಅವರವರ ಮರ್ಜಿಗಳು. ಈಗ ಅದೇ ಆಯ್ಕೆ ಸಮಿತಿಗೆ ಕೇಳಿದರೆ ಬೇರೆಯದೇ ಪಟ್ಟಿ ಕೊಟ್ಟಾರು. ಸಂಚಿಕೆಯ ಬೆಲೆಯ ಬಗ್ಗೆ ನಿಮ್ಮ ತಕರಾರು ಒಪ್ಪಬಹುದಾದರೂ ಜಾಹೀರಾತಿನ ಬೆಂಬಲವಿಲ್ಲದೇ ಪ್ರಕಾಶನ ಕೆಲಸ ಎಷ್ಟು ದುಬಾರಿಯದು ಎನ್ನುವುದು ಎಲ್ಲರಿಗೂ ತಿಳಿದ ಸತ್ಯವೇ ಆಗಿದೆ.

ಕಡೆಗೊಂದು ಮಾತು:


ನೀವು ಬಹುತೇಕ ಲೇಖಕರನ್ನು ಜಾತಿಕಾರಣದಿಂದಲೇ ಒಪ್ಪುವ/ನಿರಾಕರಿಸುವ ಅಪಾಯದ ಹಾದಿ ತುಳಿಯುತ್ತಲಿದ್ದೀರಿ. ಏಕೆಂದರೆ ಮೊನ್ನೆ 'ಕೆಂಡಸಂಪಿಗೆ'ಯ ಕುರಿತು ಬರೆದಾಗಲೂ ಅನ್ಯಥಾ ಜಾತಿಯನ್ನೇ ಮೂಲವನ್ನಾಗಿಸಿಕೊಂಡೇ ನಿಮ್ಮೆಲ್ಲ ವಾದವನ್ನೂ ಮಂಡಿಸಿದ್ದಿರಿ. ಇಂಥ ಮಾತುಗಳು ಮುಜುಗರ ಹುಟ್ಟಿಸುತ್ತವೆ. ಇನ್ನು ಅಕಾರಣ ಎಲ್ಲರನ್ನೂ ಚಡ್ಡಿಗಳನ್ನಾಗಿಸುವುದು ಮತ್ತು ಭೈರಪ್ಪನವರ ಹೆಸರು ಎಳೆದು ತರುವುದು ಏಕೆ? ಕುವೆಂಪು ಅವರನ್ನು ಕೇವಲ ಶೂದ್ರತ್ವದಿಂದಲೇ ನೋಡುವುದೂ ಕೂಡ ಅಪಾಯಕಾರಿ. ಇದು ನನ್ನ ಪ್ರಾಮಾಣಿಕ ಅನಿಸಿಕೆ. ಈ ಮೂಲಕ 'ದೇಶಕಾಲ'ವನ್ನಾಗಲೀ ಅಥವಾ 'ವಿಜಯ ಕರ್ನಾಟಕ'ವನ್ನಾಗಲೀ ಬೆಂಬಲಿಸುತ್ತಿಲ್ಲ. ಹೆಚ್ಚು ಹೆಚ್ಚು ವ್ಯಾವಹಾರಿಕವಾಗುತ್ತಿರುವ ಈ ಕಾಲದಲ್ಲಾದರೂ ನಾವೆಲ್ಲ ದ್ವಂದ್ವತನ ಬಿಟ್ಟು ನಿಜವನ್ನೇ ನಂಬುವವರಾಗೋಣ. ವಿಶ್ವಾಸವಿರಲಿ.

-ಟಿ.ಎಸ್.ರಾಮಸ್ವಾಮಿ

ಪೃಥ್ವಿಯಲ್ಲೊಂದು ಜೀವಂತ ಹಕ್ಕಿಗೂಡು



ಡಾ.ವಿನಯಾ ಮತ್ತು ಒಕ್ಕುಂದ ದಂಪತಿಗಳ ಪುತ್ರಿ ಪೃಥ್ವಿ ಚಿಕ್ಕವಳಾಗಿದ್ದಾಗಿನಿಂದ ಕವನಗಳನ್ನು ಬರೆಯುತ್ತಿದ್ದಾಳೆ. ಈಗ ಪಿಯುಸಿ ಓದುತ್ತಿರುವ ಪೃಥ್ವಿಯ ಮೊದಲ ಕವನ ಸಂಗ್ರಹವೇ 'ಹಕ್ಕಿಗೂಡು'. ಈ ಸಂಗ್ರಹವನ್ನು ಸುನಂದಾ ಪ್ರಕಾಶ ಕಡಮೆಯವರ ಮಗಳಾದ ಯುವ ಕವಯತ್ರಿ ಕಾವ್ಯಾ ಇಲ್ಲಿ ವಿಮರ್ಶಿಸಿದ್ದಾಳೆ. ಕನ್ನಡ ಕಾವ್ಯಲೋಕದಲ್ಲಿ ನಳನಳಿಸುತ್ತಿರುವ ಈ ಇಬ್ಬರು ಯುವತಿಯರ ಕಾವ್ಯ ಸಂಭ್ರಮ ಇದು.



ಹಕ್ಕಿಗೂಡು
(ಕವನಸಂಕಲನ)
ಲೇ: ಪೃಥ್ವಿ
ಪುಟ: 48
ಬೆಲೆ: 20/-
ಪ್ರಕಾಶಕ:
ಲಡಾಯಿ ಪ್ರಕಾಶನ,
ಗದಗ
9448559276

ಪುಸ್ತಕ ವಿಮರ್ಶೆ

ಈ ಪೃಥ್ವಿಯಲ್ಲಿ ಹಕ್ಕಿಗಷ್ಟೇ ಅಲ್ಲ, ಗೂಡಿಗೂ ಜೀವವಿದೆ, ನಾಡಿ ಮಿಡಿತವಿದೆ. 'ಪೃಥ್ವಿ' ಎಂಬ ಈ ಪುಟ್ಟ ಕವಿಯ ಕವನಗಳನ್ನೋದುತ್ತ ಹೋದಾಗ ಉದ್ದಕ್ಕೂ ಈ ಜೀವಂತಿಕೆ ನಮಗೆ ಕಾಣಸಿಗುತ್ತದೆ. ಇಲ್ಲಿ ತೊಟ್ಟಿಲಿಗೆ ಗೆಜ್ಜೆ ಕಾಲು ಬಡಿಬಡಿದು ನಗುವ ತಂಗಿ ತನ್ನ ಚೈತನ್ಯವನ್ನು ಆ ಮೂಲಕ ತೊಟ್ಟಿಲಿಗೂ ರವಾನಿಸುವಷ್ಟು ಶಕ್ತಿ ಹೊಂದಿದ್ದಾಳೆ. ಹೀಗೇ, ಪೃಥ್ವಿಯ ಕಣ್ಣುಗಳು ತಾನಿದ್ದ ಪರಿಸರದಲ್ಲಿ ತನಗೆ ದಕ್ಕಿದ, ದಕ್ಕಬಹುದಾದ ಎಲ್ಲ ಸಾಧ್ಯತೆಗಳನ್ನೂ ಕವಿತೆಯಾಗಿಸುವಲ್ಲಿ ಸಫಲವಾಗಿವೆ.

ಚಂದಮಾಮನನ್ನು ನಾವು ಬಲ್ಲೆವು ಆದರೆ ನಾವೆಂದೂ ಕಾಣದ ಸೂರ್ಯಮಾಮನನ್ನೂ ನಮಗೆ ಪೃಥ್ವಿ ದಯಪಾಲಿಸಿದ್ದಾಳೆ.

ಚಿಕ್ಕಪುಟ್ಟ ಮಕ್ಕಳಿಗೆ ನೀನು ತಂಪು ನೀಡು

ಸಣ್ಣ ಮಕ್ಕಳನ್ನು ನೀನು ಮುದ್ದು ಮಾಡು (ಓ ಸೂರ್ಯ ಮಾಮ) ಎಂದು ಸೂರ್ಯ ಮಾಮನನ್ನೇ ಆದೇಶಿಸುವ ಮುದ್ದು ಸಲಿಗೆಯನ್ನೂ ತೆಗೆದುಕೊಂಡಿದ್ದಾಳೆ. ಸೂರ್ಯನ ಬೆಳಕೇ ಇವಳಿಗೆ ಅವನ ಕೂಗಾಗಿ ಕೇಳಿಸುತ್ತದೆ. ಸೂರ್ಯ ತಾನೇ ಇರುಳನ್ನು ಕರೆತಂದು ಎಲ್ಲರಿಗೂ ಮಲಗಲು ಹೇಳಿ ಕೊನೆಗೆ ತನ್ನ ಮನೆಯನ್ನು ಸೇರುತ್ತಾನೆ. ಇಲ್ಲಿ ಅವನು ಜಗವನ್ನಷ್ಟೇ ಬೆಳಗುವದಲ್ಲದೇ ಮನದ ಮನೆಯನ್ನೂ ಬೆಳಗುತ್ತಾನೆ. ಈ ಕಾರಣಕ್ಕಾಗಿಯೇ ನಮಗೆ

ದೀಪದ ಹಿರಿಮೆ
ಭೂತಾಯಿಯ ಮಮತೆ
ತಾಯಿಯಾಗಿ ರೂಪಗೊಂಡಿದೆ (ತಾಯಿ -ತಂದೆ- ಶಿಕ್ಷಕ)

ಎನ್ನುವ ಪೃಥ್ವಿಗಿಂತ

ಕವಿದ ಮಂಜಿನಲ್ಲಿ
ಜೊತೆಗೂಡಿ ಆಡೋಣ
ಓಡಿಬಾರಮ್ಮ (ಕರೆ)

ಎನ್ನುವ ಪೃಥ್ವಿಯೇ ಆಪ್ತಳೆನಿಸುತ್ತಾಳೆ.

ಮರಿಯ ಬೆಳೆಸಿ ಹಾರುವುದ ಕಲಿಸಿ
ಮರಿಹಕ್ಕಿಯ ಹಾರಾಟ ಕಂಡು
ಸಂತಸದಿ ನಲಿದಿದೆ (ಹಕ್ಕಿಗೂಡು)

ಎಂದಾಗ ಇದು ಹಕ್ಕಿಯ ಕುರಿತಾಗಿಯಷ್ಟೇ ಹೇಳಿದ್ದೇ ಎಂದು ಒಂದುಕ್ಷಣ ಅಚ್ಚರಿ ಮೂಡಿಸುತ್ತಾಳೆ.

ಪೃಥ್ವಿಯ ಕವಿತೆಗಳಲ್ಲಿ ಬಣ್ಣಗಳಿಗೆ ವಿಶಿಷ್ಟ ಸ್ಥಾನ.

ಅಮ್ಮಾ ಅಮ್ಮಾ ಅಲ್ಲಿ ನೋಡು
ಕೆಂಪು ಸೂರ್ಯ ಮುಳುಗಿದ
ಇನ್ನೊಂದೆಡೆ ಹಳದಿಯಾಗಿ
ಆತನೆ ಉದಯಿಸಿದ (ಅಮ್ಮಾ ಅಮ್ಮಾ)

ವಿಶೇಷವಾಗಿ ಕೆಂಪು, ಬಿಳಿ ಹಾಗೂ ಹಳದಿ ಬಣ್ಣಗಳು ಮೇಲಿಂದ ಮೇಲೆ ಪೃಥ್ವಿಯ ಭಾವಗಳನ್ನು ಹಿಂಬಾಲಿಸುತ್ತಿರುವಂತೆ ತೋರುತ್ತದೆ.

ಅಮ್ಮಾ ಅಮ್ಮಾ ಅಲ್ಲಿ ನೋಡು
ಹಕ್ಕಿಯೊಂದು ಗೂಡು ಕಟ್ಟಿದೆ

ಎಂಬ ಮುದ್ದು ತೊದಲಿನಿಂದ ಕಾವ್ಯ ಪಯಣ ಶುರು ಮಾಡಿದ ಪೃಥ್ವಿ, 'ವಿದಾಯ', 'ಯುದ್ಧ', 'ಇದು ನ್ಯಾಯವೇ?' ತರಹದ ಗಂಭೀರ ನೋಟದ ಸಾಲುಗಳನ್ನೂ ಬರೆಯಬಲ್ಲಳು ಎಂದಾಗ 'ಹಕ್ಕಿಗೂಡು'ಗೆ ಆದರದೇ ಆದ ಸಾಮಾಜಿಕ ಸಾರ್ಥಕತೆ ಪ್ರಾಪ್ತವಾಗಿದೆ. ಹಾಗೆಯೇ,

'ನನ್ನ ನೈಜ ಚಿತ್ರ ಅರ್ಥ ಕಳೆದುಕೊಂಡಿದೆ' (ನೈಜ ಚಿತ್ರ) 'ನಾನು ಇಲ್ಲಿ ಅಸಹಾಯಕಳಾಗಿ ಬೀದಿ ಬೀದಿ / ಅಲೆಯುತ್ತಿದ್ದೇನೆ' (ಯುದ್ಧ) ಸಾಲುಗಳು ಅವಳ ಮುಂದಿನ ಕಾವ್ಯ ಜೀವನದಲ್ಲಿ ಹುಟ್ಟಬಹುದಾದ ಕವಿತೆಗಳ ಕನ್ನಡಿಯಂತಿವೆ.

ಜಯಂತ ಕಾಯ್ಕಿಣಿ ಹಾಗೂ ಜಿ.ಪಿ. ಬಸವರಾಜು ಅವರಿಂದ ಅಕ್ಕರೆಯಿಂದ ಬೆನ್ನು ತಟ್ಟಿಸಿಕೊಂಡ 'ಹಕ್ಕಿಗೂಡು'ವಿನ ಕವಿ ಪೃಥ್ವಿ ಈಗ ದ್ವಿತೀಯ ಪಿಯೂಸಿ ಓದುತ್ತಿದ್ದಾಳೆ. ಅವಳ ಪಿಸಿಎಂಬಿ ಗದ್ದಲದ ಮಧ್ಯೆಯೂ 'ಬಿಳಿಯನ್ನು ಕೆಂಪು ಬಣ್ಣದಿ ತುಂಬಿ, ಕೆಂಪನ್ನು ಬಿಳಿ ಬಣ್ಣದಿ ತುಂಬಬಲ್ಲೆ' ಎಂಬ ಅವಳ ಎಂದಿನ ಕವಿತೆ ಕಟ್ಟುವ ಹುರುಪು ಮುಂದುವರೆಯುತ್ತದೆ ಎಂಬ ವಿಶ್ವಾಸ ನನ್ನದು. ಏಕೆಂದರೆ ಮುನ್ನುಡಿಯಲ್ಲಿ ಜಯಂತರೇ ಹೇಳುವಂತೆ ನಮಗೆಲ್ಲ ಚಂದದ ಬೆಟ್ಟದಲ್ಲಿ ಕೇವಲ ಮೋಡ, ಕಾಡು ಕಂಡರೆ ಪೃಥ್ವಿಗೆ ಮೋಲೆಯೇ ಕಾಣುವ ಮರಗಳ ಬೇರಿನ ಮೇಲೆಯೇ ಕಣ್ಣು. ಅವಳ ಹೊಸ ನೋಟವೇ ಅವಳ ಕಾವ್ಯದ ಶಕ್ತಿ.



• ಕಾವ್ಯಾ ಪಿ.ಕೆ.

ವಾಗ್ವಾದ ಭಂಜಕರು

▶▶ 15

ಪ್ರತಾಪ ಸಿಂಹನ ವಿಕೃತ ಸಾಹಸಗಳ ಜೊತೆ ಹೋಲಿಕೆ ಮಾಡಿ ನಿರ್ಣಯಕ್ಕೆ ಬರಬಹುದು. ಓದುಗರು ಕನಿಷ್ಠ ಈ ವಿಶೇಷಾಂಕಕ್ಕೆ ಬರೆದಿರುವ ಸಾಹಿತಿಗಳ ಇಡೀ ಪಟ್ಟಿಯನ್ನು ನಮೂದಿಸಿಟ್ಟುಕೊಂಡು, ಮುಂಬರಲಿರುವ ಕನ್ನಡದ 'ದೀಪಾವಳಿ ವಿಶೇಷಾಂಕ', ವಾರಪತ್ರಿಕೆ, ಮಾಸಪತ್ರಿಕೆಗಳೂ, ಹಿಂದೆ ಬಂದಿರುವ-ಮುಂದೆ ಬರಲಿರುವ ಸಾಹಿತ್ಯ ಅಕಾಡಮಿಗಳ ವಾರ್ಷಿಕ, ದಶವಾರ್ಷಿಕ ಸಂಕಲನಗಳಲ್ಲಿ ನಮೂದಾಗಿರುವ/ನಮೂದಾಗುವ ಸಾಹಿತಿಗಳ ಹೆಸರಿನ ಜೊತೆ ತಾಳೆ ಹಾಕಿ ನೋಡಿ 'ಅಪರಾಧ'ಗಳ ಸತ್ಯಾಸತ್ಯತೆಗಳನ್ನು ಮನಗಾಣುವ ಸಾಧ್ಯತೆಯೂ ಇದೆ. ಅದಕ್ಕೆ ಈ ಇಬ್ಬರು ನ್ಯಾಯಾಧೀಶರ ಮಾರ್ಗದರ್ಶನದ ಅವಶ್ಯಕತೆ ಇಲ್ಲ. ಆದರೆ, ಸೇಡಿಯಾಪು ಕೃಷ್ಣಭಟ್ಟರನ್ನ 'ಭಟ್ಟ, ಭಟ್ಟ' ಎಂದು ಲೇವಡಿ ಮಾಡುವ, ಕೆ.ವಿ.ಪುಟ್ಟಪ್ಪನವರ ಸಾಹಿತ್ಯ ಹಸ್ತಪ್ರತಿ ಹಾಗು ನೈತಿಕತೆಯ ಪೂರ ಕಾಪಿರೈಟನ್ನು ತಾವೇ ಹೊಂದಿದ್ದೇವೆ ಎನ್ನುವ ಹಾಗೆ ಹಾರಾಡುವ, ವೈಚಾರಿಕತೆ-ವಾಗ್ವಾದಗಳ ಘನತೆಗೆ ಕವಡೆ ಬೆಲೆಯನ್ನೂ ಕೊಡದ ಲೇಖಕದ್ವಯರ ವಿಕೃತಿಗೇನು ಹೇಳುವುದು? ವಾಗ್ವಾದ ಭಂಜಕರು!

ಕ್ಯಾಪ್ಟನ್, ಕೊನೆಗೆ ಒಂದು ಉತ್ತರದಾಯಿತ್ವದ ನಿರ್ವಹಣೆ ಇದೆ. 'ದೇಶಕಾಲ' ವಿಶೇಷಾಂಕದಲ್ಲಿ ತಮ್ಮ ಹೆಸರು ಸೇರಿಕೊಂಡಿರುವುದರ ಬಗ್ಗೆ ಮುಜುಗರಗೊಂಡು ಕೈ ಕೈ ಹಿಸುಕಿಕೊಳ್ಳುತ್ತಿರುವ ರಾಜೇಂದ್ರ ಚೆನ್ನಿ ಮತ್ತು ಇತರ ಕೆಲವು ಲೇಖಕರಿದ್ದಾರೆ ಎಂದು ಲತಾ-ಐಜೂರ್ ಹೇಳಿಕೊಂಡಿದ್ದಾರೆ. ಇವರುಗಳು ಏನು ನಿಲುವು ತೆಗೆದುಕೊಳ್ಳುತ್ತಾರೋ ನನಗೆ ತಿಳಿಯದು. ನಾನು 'ದೇಶಕಾಲ'ಕ್ಕೆ ಕೆಲವು ಬರಹಗಳನ್ನು ಬರೆದಿದ್ದೇನೆ- ವಿಶೇಷಾಂಕಕ್ಕೂ ಒಂದು ಬರಹ ಬರೆದಿದ್ದೇನೆ. ಜಿ.ರಾಜಶೇಖರರ ಜೊತೆ ಒಂದು ವರ್ಷಗಳ ಕಾಲ ಪುಸ್ತಕ ವಿಮರ್ಶೆಯ ಅಂಕಣವನ್ನು ನಡೆಸಿಕೊಟ್ಟಿದ್ದೇನೆ. ವಿವೇಕರ ಬಗ್ಗೆ ಇರುವ ಗೌರವದಿಂದಲೇ ಈ ಕೆಲಸಗಳನ್ನು ನಾನು ಮಾಡಿದ್ದೇನೆ. ಇದರ ಬಗ್ಗೆ ನನಗೆ ಈಗಲೂ ಯಾವ ಸಂಕೋಚವೂ ಇಲ್ಲ.

ಲತಾ-ಐಜೂರರ ಲೇಖನ ಮತ್ತು ಜಿ.ರಾಜಶೇಖರ್ ಪ್ರತಾಪ ಸಿಂಹ ಹಾಗು ವಿ.ಕ.ದ ವಿಕಾರಗಳನ್ನು ವಿಶ್ಲೇಷಿಸಿರುವ 'ಮಾತು ಸೋತ ಕರ್ನಾಟಕ' ಎದುರು ಬದುರಾಗಿ ಪ್ರಕಟವಾಗಿರುವುದು ಆಕಸ್ಮಿಕವಿರಬಹುದು; ಈ ಪುಟ ವಿನ್ಯಾಸದಿಂದ ಒಂದು ಸೂಕ್ಷ್ಮವಾದ ಕಾರ್ಯ ಸಿದ್ಧಿಸಿದೆ: 'ಮಾತು ಸೋತ ಕರ್ನಾಟಕ'ದ ಕನ್ನಡಿಯ ಎದುರು ನಿಂತು, "ದೇಶ'ವಿದೇ ನಹಾ!"ಕಾಲ'ವಿದೇನಹಾ' ತನ್ನ ಮುಖವನ್ನು ನೋಡಿಕೊಳ್ಳುತ್ತಿದೆ. ●

ಚಪ್ಪಲಿಗಳು



ದೇಹದ ಅಷ್ಟೂ ಅಕಾಲ
ಅನ್ಯಾಯಗಳನ್ನು ಹೊತ್ತರೂ
ವಿಧೇಯತೆಯ ಪರಾ
ಪ್ರಕಟಿಸುತ್ತಾ ಮನಸ್ಸನ್ನು
ಹಗುರಾಗಿಸಿವೆ!

ಮುಳ್ಳು.... ಮೊಳೆಗಳಿಂದ
ಇರಿಸಿಕೊಂಡು
ಗಾಳಿ, ಮಳೆ, ಬಿಸಿಲು
ಬೆಂಕಿಯ ನಿಷ್ಕರುಣೆಯಿಂದ
ನಲುಗಿದರೂ
ಪ್ರೀತಿಯನ್ನೇ ಉಣಬಡಿಸಿವೆ!

ತಮ್ಮ ಅವಸಾನದ ದುಗುಡ
ಕ್ಕಿಂತ ನಮ್ಮ ಜೇಬಿನ
ಚಿಂತೆ ಅವನ್ನೂ ಹೆಚ್ಚು
ಖಿನ್ನವಾಗಿಸಿದೆ!

ಪಾದಗಳ ಹೊಸ ಸಂಗಮಕ್ಕೆ
ಆದ ತರಚು ಗಾಯಗಳಿಗೆ
ಮೂಲೆಯಲ್ಲೇ ಕುಳಿತು
ಹೇಳುವ ಸಾಂತ್ವನ, ನಮ್ಮನ್ನೇ
ನಾಚಿಸಿದೆ!

ಎಂದಾದರೊಂದು ದಿನ
ತಾವು ಸೇವೆಗೈದವರ
ತಲೆಯ ಮೇಲೆ ಕಿರೀಟವಾಗಿ
ಕೂತು ಬೀಗುವ ಕನಸ ಕಂಡರೂ
ಭಯದಿಂದ ಹೆದರಿ ಅಳುತ್ತಿವೆ!

ಸ್ವಯಂಕೃತ ಪ್ರೀತಿಗೋ
ಚಿನ್ನ, ಹರಳು, ಮಣಿಗಳನ್ನು
ಲೇಪಿಸಿಕೊಂಡು ಸಮರ್ಥರಾದರೂ
ಸನಾತನದಾಸ್ಯ ಕಷ್ಟ ಭಂಗಿಸುವ
ಧೈರ್ಯ ಸಾಲದೆ
ನಿಷ್ಠೆಯ ಕಮರಿಯಲ್ಲಿ
ನೀರಾಗುತ್ತಾ ಕನಲುತ್ತಿವೆ!

• ಸೈಫ್ ಜಾನ್ಸೆ, ಕೊಟ್ಟೂರು

ಬುಡ್ಗನಾದ ವಿಶಿಷ್ಟ ಅನುಭವ ನೀಡುವ ನಾಟಕ



ಕನ್ನಡ ರಂಗಭೂಮಿಯ ಇತ್ತೀಚಿನ ನಾಟಕ ಪ್ರಯೋಗಗಳು ನವ್ಯದ ...ಂಗತ ಜಾಡಿನಿಂದ ಭಿನ್ನವಾಗಿ ಸಾಹಿತ್ಯವು ನಿರ್ವಹಿಸುತ್ತಿರುವ ಸಾಂಸ್ಕೃತಿಕ ...ಗತಿಗಳ ಕಡೆ ಮುಖ ಮಾಡಿರುವುದು ಒಂದು ಆಸಕ್ತಿದಾಯಕ ಬೆಳವಣಿಗೆ. ...ನಿಕ ರಂಗಭೂಮಿಯ ಇತಿಹಾಸದಲ್ಲಿ ದಲಿತ-ಬಂಡಾಯ ತಾತ್ವಿಕತೆಯನ್ನು ...ಪಾದಿಸುವ ತಳ ಸಮುದಾಯಗಳ ಬದುಕಿನ ತಾಜಾ ಅನುಭವಗಳುಳ್ಳ ...ಟಕಗಳು ನಿತ್ಯ ಜೀವನದ ಕಠೋರ ವಾಸ್ತವಗಳನ್ನು, ಹಟ್ಟಿಕೇರಿಗಳ ...ನ್ನು ನುಡಿಕಟ್ಟುಗಳ ಮೂಲಕ ರಂಗದ ಮೇಲೆ ನಿರೂಪಿಸುವ ಮೂಲಕ ...ರಿಕ ಸಮಾಜದ ಹುಸಿ ನಿರ್ಮಿತಿಗಳನ್ನು ಮುರಿಯಲು ಪ್ರಯತ್ನಿಸಿದ್ದು ... ಇತಿಹಾಸ.

...ನಾಗರಿಕ ಸಮಾಜದ ಕಣ್ಣ ಸಾಕ್ಷ್ಯದಲ್ಲಿಯೇ ಇವತ್ತಿಗೂ ನೆಲೆರಹಿತವಾಗಿ ...ದ ನೆಲೆಯಿಲ್ಲದೆ ತಲೆ ಮೇಲೆ ಸೂರುಗಳಿಲ್ಲದೆ ಊರುಕೇರಿಗಳ ಹೊರಗೆ ...ಾದ ದಾರಿಬದಿಗಳ ಡೇರೆಬಿಡಾರಗಳಲ್ಲಿ ಬದುಕುತ್ತಾ ಇಡೀ ನಾಗರಿಕತೆಯ ...ೂಪವಾಗಿ ಕಾಣಿಸುತ್ತಿರುವ ಅಲೆಮಾರಿ ಜನಾಂಗಗಳ ವೈವಿಧ್ಯಪೂರ್ಣ ...ಸ್ಕೃತಿಕ ಬದುಕನ್ನು ಕನ್ನಡ ಸಾಹಿತ್ಯ ರಂಗಭೂಮಿ ಮತ್ತು ಜನಪರ ...ವಳಿಗಳು ಒಳಗೊಳ್ಳದೇ ಹೋದದ್ದು ವಿಷಾದನೀಯ ಸಂಗತಿ.

...ಮರಳುಗಾಡಿನಲ್ಲಿ ಕಾಣುವ ಓಯಸಿಸ್‌ನಂತೆ ಅಪರೂಪವಾಗಿ ಮತ್ತು ... ವಿರಳವಾಗಿ ಅಕ್ಷರದ ಬದುಕಿಗೆ ತೆರೆದುಕೊಂಡ ಅಲೆಮಾರಿ ಜನಾಂಗದ ...ಸ್ಥರೇ ತಮ್ಮ ಅನುಭವಗಳನ್ನು ದಾಖಲಿಸುವ ಇಲ್ಲಿಯವರೆಗೆ ನಮ್ಮ ...ಸ್ಕೃತಿಕ ಲೋಕ ಕಾಯಬೇಕಾಗಿ ಬಂದದ್ದು ದುರದೃಷ್ಟಕರ ಸಂಗತಿ. ಸ್ವತಃ ...ಮಾರಿಗಳೇ ತಮ್ಮ ಹಕ್ಕುಬಾಧ್ಯತೆಗಳಿಂದಾಗಿ ಸಂಘಟಿತರಾಗಿ ...ರಾಡಬೇಕಾಗಿ ಬಂದದ್ದೂ ಸಹ ಅಷ್ಟೇ ಕಟುಸತ್ಯ.

...ಮೂಲತಃ ಕವಿ, ಕತೆಗಾರ ಹಾಗೂ ಸಂಶೋಧಕನಾದ ಬಾಲಗುರುಮೂರ್ತಿ ...ಮಾರಿ ಬುಡ್ಗಜಂಗಮ ಜನಾಂಗದ ಪ್ರಪ್ರಥಮ activist writer ...ಅಲೆಮಾರಿ ಸಮುದಾಯಗಳನ್ನು ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ...ಟಿಸಲು ತಮ್ಮನ್ನು ಅರ್ಪಿಸಿಕೊಂಡು ಎಲ್ಲ ಅಲೆಮಾರಿ ಜನಾಂಗಗಳ ...ನ ವಿಧಾನ ಸಂಸ್ಕೃತಿ ಹಾಗೂ ಸಾಹಿತ್ಯವನ್ನು ಒಳಗಿನವರಾಗಿ ಅಧ್ಯಯನ ...ಿದವರು. ಅವರ ಹೋರಾಟ ಮತ್ತು ಅಧ್ಯಯನದ ಅನುಭವಗಳನ್ನು ...ಶ್ಯದ ಮೂಲಕವೇ ಹೊರಹಾಕುವ ಪ್ರಯತ್ನವನ್ನು 'ಬುಡ್ಗನಾದ' ನಾಟಕದ ...ಲಕ ಮಾಡಿದ್ದಾರೆ.

...ಕ್ಷರ ಅರಿಯದ ಬಯಲು ಮಕ್ಕಳು ಗಣನಾಥ
...ರಿ ನೆಣ್ಣಿನ ಬೆಳಕಲಿ ಹಾಡುತಾ ನಾವು ಗಣನಾಥ
...ರುಳ ತಂತಿಯ ಮೀಟುತಾ ನಾವು ಗಣನಾಥ

...ಂಬ ಭಜನೆ ಪದದ ಮೂಲಕವೇ ಅಲೆಮಾರಿಗಳ ವೈಶಿಷ್ಟ್ಯಪೂರ್ಣವಾದ ...ಕು ಮತ್ತು ಸಂಸ್ಕೃತಿಯನ್ನು ರಂಗಮಂಚದ ಮೇಲೆ ನಿರೂಪಿಸಿದ ...ನಾದ' ಅಲೆಮಾರಿ ಬದುಕಿನ ಸಂಸ್ಕೃತಿ ನಿಷ್ಠ ಮೋಡಿವೇಷ, ...ಕಮಾಮನ ವೇಷ, ಹಗಲುವೇಷ, ತತ್ವಪದ, ಕೇಳ್ಕೆ, ಹಾಡುಬಾಡು, ... ಗುಪ್ತ ಭಾಷೆ, ಗಂಗಿ-ಭಂಗಿ ಸೇವನೆ, ಕುಲಪದ್ಧತಿ, ಕಟ್ಟೆಮನೆ ...ಾದ ಅನೇಕ ಸಾಂಸ್ಕೃತಿಕ ನೆಲೆಗಳನ್ನು ನಾಗರಿಕ ಶಿಷ್ಟಲೋಕಕ್ಕೆ ...ಮಿಸುತ್ತದೆ. ಹಾಗಾಗಿ 'ಬುಡ್ಗನಾದ' ಕನ್ನಡ ರಂಗಭೂಮಿಗೆ ಅಲೆಮಾರಿ ...ಟ್ಟಿನ ಜೀವನ ವಿಧಾನವನ್ನು ಪರಿಚಯಿಸುವ ಮೊಟ್ಟಮೊದಲ ನಾಟಕ.

ನಾಟಕದಲ್ಲಿ ಬರುವ ಮುರಂಡಿ ಗುರುವನು "ಈ ಕೊಂಡಮಾಮ ಯಾಸ ನನ್ನ ಮೈಯಾಗ ಮತ್ತೇರಿಸೈತಿ. ಅನಾದಿಕಾಲ್ದಿಂದ ನನ್ನ ತಾತಗೋಳು ಹಾಡ್ತಾ ಇದ್ದಾ ಹಾಡುಗಳೂ ಈ ತಂತೀನಾಗ ವಲುಕ್ತಾವೆ" ಎನ್ನುವ ಮಾತುಗಳ ಮೂಲಕವೇ ಅರ್ಥೈಸುವುದಾದರೆ ಅಲೆಮಾರಿಗಳು ಮೌಖಿಕ ಕಾವ್ಯವನ್ನು ಉಸಿರಾಡುತ್ತಾ ನಾಗರಿಕ ಸಮಾಜದ ಶೋಷಣೆಯ ದುರ್ಗಮ ಹಾದಿಯಲ್ಲಿ ದಾರಿ ಸವೆಸುತ್ತಿದ್ದಾರೆ. ನಾಟಕದ ಮುಂಗಣ್ಣನ ಪಾತ್ರವು "ನಮ್ದು ಜಂಗಮ ಬದ್ಕು, ಜೀವನ ನಿಲ್ಲಬಾರ್ದು ಹೊಳಿ ಹಂಗ ಹರೀತಾ ಇರ್ಬೇಕು, ನಿಂತ್ರ ಅದು ಕೆಸರಾಗಿ ಪಾಚಿ ಕಟ್ಕೊಳ್ತದ" ಎಂದು ಹೇಳುವ ಮಾತಿನಂತೆ ಭಾರತದಾದ್ಯಂತ ಐದು ಕೋಟಿಗೂ ಅಧಿಕ ಜನಸಂಖ್ಯೆಯಿರುವ ಅಲೆಮಾರಿಗಳು, ನಾಗರಿಕ ಸಮಾಜದ ಕಾವಲು ನಾಯಿಯಾಗಿರುವ ಪ್ರಭುತ್ವವು ಒದಗಿಸುವ ಸವಲತ್ತುಗಳಿಂದ ವಂಚಿತರಾಗಿ ಕಾಡುಕಣಿವೆಗಳಲ್ಲಿ ನಗರ ಪಟ್ಟಣ ಹಳ್ಳಿಗಳ ಬಯಲುಗಳಲ್ಲಿ ಘನಘೋರ ಕಷ್ಟಕಾರ್ಪಣ್ಯಗಳನ್ನು ಎದುರಿಸುತ್ತಿದ್ದಾರೆ. ಇಂತಹ ಅಲೆಮಾರಿ ಜನಾಂಗಗಳ ಪೈಕಿ ಭಿಕ್ಷಾಟನೆ ಮಾಡುತ್ತಾ ಬೇಟೆಯಾಡುತ್ತಾ ಮಾಂಸಾಹಾರಿಗಳಾಗಿ ಬದುಕುತ್ತಿರುವ ಶೈವಪರಂಪರೆಯ ಬುಡ್ಗಜಂಗಮರು ಅಥವಾ ಬೇಡ ಜಂಗಮರು ಎಂಬ ಸಮುದಾಯದವರು ಕಾವಿಕಮಂಡಲಗಳನ್ನು ವಿಭೂತಿ ರುದ್ರಾಕ್ಷಿಗಳನ್ನು ಧರಿಸಿ ಅವರದೇ ವಿಶಿಷ್ಟ ಆಧ್ಯಾತ್ಮಿಕ ಯೋಗಮಾರ್ಗದಲ್ಲಿ ನಡೆಯುತ್ತಿದ್ದಾರೆ. ಇಂತಹ ಅಲೆಮಾರಿ ಬುಡ್ಗಜಂಗಮ ಅಥವಾ ಬೇಡಜಂಗಮರ ಹೆಸರುಗಳಲ್ಲಿ ಶಿಷ್ಟ ಸಮಾಜದ ಲಿಂಗಾಯತ ಜಂಗಮರು ಖೊಟ್ಟಿ ಜಾತಿಪತ್ರಗಳನ್ನು ಪಡೆದು ಅಲೆಮಾರಿಗಳ ತಟ್ಟೆಯ ಅನ್ನವನ್ನು ಕದ್ದು ತಿನ್ನುತ್ತಿದ್ದಾರೆ. ಇದೇ ಲಿಂಗಾಯತ ಜಂಗಮದಲ್ಲಿರುವ ಗಾಣಿಗ ಲಿಂಗಾಯತರು 'ಗಾಣಿಗ' ಜನಾಂಗವನ್ನು ಹಾಗೂ ಸಾದರ ಲಿಂಗಾಯತರು 'ಸಾದರ' ಜನಾಂಗವನ್ನು ಸುಳ್ಳು ಜಾತಿಪತ್ರಗಳನ್ನು ಪಡೆದು ವಂಚಿಸುತ್ತಿದ್ದಾರೆ. ಇಂತಹ ವರ್ತಮಾನದ ಅನೇಕ ಸಂಗತಿಗಳಿಗೆ 'ಬುಡ್ಗನಾದ' ಮುಖಾಮುಖಿಯಾಗುತ್ತದೆ.

ಅಲೆಮಾರಿಗಳು ತಮ್ಮ ಭಿಕ್ಷಾಟನೆ, ಬೇಟೆ, ಗಂಗೀ-ಭಂಗಿ ಸೇವನೆ, ಮಹಿಳಾ ಶೋಷಣೆ ಮುಂತಾದವುಗಳನ್ನು ನೀಗಿಕೊಂಡು ಊರುಕೇರಿಗಳನ್ನು ಕಟ್ಟಿಕೊಂಡು ಸ್ಥಿರ ಬದುಕನ್ನು ನಡೆಸುವಂತಾಗಬೇಕು. ಅಕ್ಷರವನ್ನು ಕಲಿತು ಸಂಪತ್ತು ಮತ್ತು ಅಧಿಕಾರಿಗಳ ನೆಲೆಗಳಲ್ಲಿ ತಮ್ಮನ್ನು ಪ್ರತಿಷ್ಠಾಪಿಸಿಕೊಳ್ಳಬೇಕೆಂಬ ಆಶಯದೊಂದಿಗೆ ಮುಕ್ತಾಯವಾಗುವ 'ಬುಡ್ಗನಾದ' ನಾಟಕವು ಅಲೆಮಾರಿಗಳದೇ ಆದ ಕಾವ್ಯಾತ್ಮಕ ಭಾಷಾ ಪ್ರಯೋಗದಿಂದ ಮನಸೆಳೆಯುತ್ತದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆಯ 'ಜನಪದರು' ಸಾಂಸ್ಕೃತಿಕ ವೇದಿಕೆಗಾಗಿ ಸುರೇಶ್ ವರ್ತೂರು ಎಂಬ ಯುವ ರಂಗ ನಿರ್ದೇಶಕ 'ಬುಡ್ಗನಾದ'ವನ್ನು ಒಂದು ಸಾಂಸ್ಕೃತಿಕ ದೃಶ್ಯಕಾವ್ಯವನ್ನಾಗಿ ರೂಪಿಸಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾಗುತ್ತಾರೆ.

• ವಡ್ಡಗೆರೆ ನಾಗರಾಜಯ್ಯ

ಇಂದಿನ ಭ್ರಷ್ಟ ವಾತಾವರಣದಲ್ಲಿ ಜೆ.ಪಿ.ಯ ಆಂದೋಲನ ಸಾಧ್ಯವಾಗುತ್ತಿರಲಿಲ್ಲ

ಒಂದು ಪತ್ರ

ಲೋಕಾಯುಕ್ತ ಸಂತೋಷ್ ಹೆಗಡೆಯವರ 'ಬಲಿ' (ರಾಜೀನಾಮೆ) ಯಡ್ಡಿ ಹಾಗೂ ಗಣಿಯರ ದೃಷ್ಟಿಯಲ್ಲಿ "ರೋಗಿ ಬಯಸಿದ್ದೂ ವೈದ್ಯ ಹೇಳಿದ್ದೂ ಒಂದೇ" ಎಂಬ ಗಾದೆಯಂತಾಯಿತು. ಬೆಂಗಳೂರು-ಮಂಗಳೂರಿನ ಭೂ-ಮಾಫಿಯಾ, ಕಾರವಾರದ ಅದಿರು ಮಾಫಿಯಾ, ಬಳ್ಳಾರಿಯ ಗಣಿ ದೊಂಗರು, ರಾಜ್ಯದೆಲ್ಲೆಡೆಯ ಶರಾಬು ಮಾಫಿಯಾ, ಧಾರ್ಮಿಕ ಮಾಫಿಯಾ ಹಾಗೂ ಸರ್ಕಾರಿ ಗುತ್ತಿಗೆದಾರರ ಮಾಫಿಯಾ-ಇವೆಲ್ಲದರ ನಿರ್ಲಜ್ಜ ಸಂಗಮವೇ ಈಗಿನ ಬಿಜೆಪಿ ಸರ್ಕಾರ. ಮಾಫಿಯಾಗಳ ಮುಖಿಯಾಗಳೇ ಸರ್ಕಾರ ನಡೆಸುವಾಗ ಹೆಗಡೆಯಂತಹ ಹಠಮಾರಿ-ಪ್ರಾಮಾಣಿಕನನ್ನು ಹೇಗೆ ತಾನೇ ಸಹಿಸಿಯಾರು? ಈ ಸಂದರ್ಭದಲ್ಲಿ ಸ್ವತಃ ಹೆಗಡೆಯವರೇ ಹೇಳಿದ ಮಾತು ತುಂಬಾ ಸಮಯೋಚಿತ-"ಎಲ್ಲರೂ ಭ್ರಷ್ಟಾಚಾರವನ್ನು ದೂಷಿಸುವವರೇ. ಆದರೆ ಯಾರೂ ಇದರಲ್ಲಿ ತಮ್ಮ ತಮ್ಮ ಕೊಡುಗೆ ಎಷ್ಟು ಎಂಬ ಬಗ್ಗೆ ಯೋಚಿಸುವುದಿಲ್ಲ. ಜಾಣಮೌನ ವಹಿಸುತ್ತಾರೆ!"

35 ವರ್ಷಗಳ ಹಿಂದೆ ತುರ್ತುಪರಿಸ್ಥಿತಿ ಸಮಯದಲ್ಲಿ ಜಯಪ್ರಕಾಶ ನಾರಾಯಣರು ನಡೆಸಿದಂತಹ ಆಂದೋಲನ ಈಗ ಮತ್ತೆ ಅಗತ್ಯವಿದೆ ಎಂದು 'ಚಂಪಾ' ಹೇಳುತ್ತಾರೆ. ಆದರೆ 35 ವರ್ಷದ ಹಿಂದೆ ಕೇವಲ ಕಾಂಗ್ರೆಸ್ ಮಾತ್ರ ಭ್ರಷ್ಟ ಪಕ್ಷವೆನಿಸಿ ಉಳಿದ ಪಕ್ಷಗಳು ಪ್ರಾಮಾಣಿಕ ಎನಿಸಿದ್ದವು. ಮೇಲಾಗಿ ಆಗ ಸಮಾಜದ ಹಾಗೂ ರಾಜಕಾರಣದ ನೈತಿಕಮಟ್ಟ ಈಗಿನದ್ದಕ್ಕಿಂತ ತುಂಬಾ ಉತ್ತಮವಾಗಿತ್ತು. ಹಾಗಾಗಿ ಜೆ.ಪಿ.ಯವರ ಆಂದೋಲನ 'ಮಾಸ್ ಮೂವ್‌ಮೆಂಟ್'ನ ರೂಪ ಪಡೆಯುವುದು ಸಾಧ್ಯವಾಯಿತು. ಆದರೆ ಇಂದು ಎಲ್ಲಾ ಪಾರ್ಟಿಗಳೂ 'ಕಳ್ಳರ ಸಂತೆ ಮಾರ್ವಾಡಿಗಳ ಕಂತೆ'. ಅದೇ ಜೆ.ಪಿ. ಜೀವಂತವಿದ್ದು ಇಂದೂ ಅಂತಹದ್ದೇ ಆಂದೋಲನ ಹಮ್ಮಿಕೊಂಡಿದ್ದರೆ ಹತ್ತು ಜನರೂ ಸಾಥ್ ಕೊಡುತ್ತಿರಲಿಲ್ಲ! ರಾಜಕಾರಣಿಗಳು, ಅಧಿಕಾರಿಗಳು ಮಾತ್ರ ಇಂದು ಭ್ರಷ್ಟರಲ್ಲ. ನ್ಯಾಯಾಂಗ, ಪತ್ರಿಕಾ ರಂಗ, ಎನ್.ಜಿ.ಓ., ಖಾಸಗಿ ರಂಗ, ಎಲ್ಲವೂ ಭ್ರಷ್ಟಗೊಂಡಿರುವಾಗ ಜೆ.ಪಿ. ತರಹದ ಆಂದೋಲನಕ್ಕೆ ಬೆಂಬಲ ಕೊಡುವವರಾರು? ಇವೆಲ್ಲವುಗಳಿಂದಾಗಿಯೇ ನಕ್ಸಲರ ಬಗ್ಗೆ ಜನಸಾಮಾನ್ಯರಲ್ಲಿ ಸಹಾನುಭೂತಿ ಇರುವುದು.

ಆಫ್ರಿಕಾದ ಕಾಡು ಜನರು ತಾವು ಬೇಟೆಯಾಡಿದ ಭಾರವಾದ ಪ್ರಾಣಿಗಳನ್ನು ಸಾಗಿಸುವಂತೆ, ಪಶ್ಚಿಮ ಬಂಗಾಳದಲ್ಲಿ ಪೊಲೀಸ್ ಕ್ರಾಸ್ ಫೈಯರಿಂಗ್‌ನಲ್ಲಿ ಸತ್ತ ಆದಿವಾಸಿ ಯುವತಿಗೆ 'ಮಾವೋವಾದಿ' ಎಂಬ ಹಣೆಪಟ್ಟಿ ಕೊಟ್ಟು ಅವಳ ಶವವನ್ನು ಭದ್ರತಾಪಡೆಗಳು ಸಾಗಿಸಿದ ಅಮಾನವೀಯ ಬರ್ಬರ ರೀತಿ ಕಂಡು ಅನ್ನಿಸಿದ್ದು- ಜೀವಂತವಿರುವಾಗ ಇಡೀ ಅಪಮಾನದಲ್ಲೇ ಬೆಂದ ಆದಿವಾಸಿ ಯುವತಿಗೆ ಮರಣಾನಂತರವೂ ಈ ಅಪಮಾನ ಸರಿಯೇ? ಈ ಬರ್ಬರತೆ ನಕ್ಸಲರ ರೊಚ್ಚಿಗೆ ಇನ್ನೂ ಹೆಚ್ಚು ಕಿಚ್ಚು ಹಚ್ಚದಿರುತ್ತದೆಯೇ?

-ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

ಸೂಚನೆ : ಅಂಕಣಕಾರ ಬಿ.ಚಂದ್ರೇಗೌಡರ ಅನಾರೋಗ್ಯದ ಕಾರಣ ಈ ವಾರ ಅವರ 'ಬಯಲುಸೀಮೆಯ ಕಟ್ಟೆಪುರಾಣ' ಪ್ರಕಟವಾಗುತ್ತಿಲ್ಲ. ಮುಂದಿನ ವಾರದಿಂದ ಅವರ ಅಂಕಣ ಈ ಪುಟದಲ್ಲಿ ಇರುತ್ತದೆ.

-ಸಂ

...ಸಾಮಾನ್ಯ ಓದುಗ?

...ಎರಡು ವಾರದ ಹಿಂದೆ ನಾನು ಬಹುವಾಗಿ ಮೆಚ್ಚುವ ಮಿತ್ರರೊಬ್ಬರು ನನ್ನೊಂದಿಗೆ ಮಾತಾಡುತ್ತಿದ್ದರು. ...ವು ಜಿಮ್ ಕಾರ್ಬೆಟ್ ಮತ್ತು ಮನುಷ್ಯನ ಬೇಸರ ಕುರಿತು ಬರೆದದ್ದು ಓದಿದೆ. ತುಂಬ ಚೆನ್ನಾಗಿದೆ. ಆದರೆ ...ಸ್ಟ ಸಂಕೀರ್ಣವಾಗಿ, ಹೇಳಬೇಕಾದ್ದನ್ನೆಲ್ಲ ಹೇಳ್ತೀರಲ್ಲ-ಸಾಮಾನ್ಯ ಓದುಗರಿಗೆ ಅರ್ಥವಾಗುತ್ತದೆಯೇ?" ...ಮು ನನ್ನನ್ನು ಕೇಳಿದರು.


"ಸಾಮಾನ್ಯ ಓದುಗರು ಯಾರು?" ಅಂದೆ.

...ಅವರು ಸಾಮಾನ್ಯ ಓದುಗರಿಗಾಗಿ ಚಿಂತಿಸಿ ಸುಮ್ಮನಾದರು. ನಾನೆಂದೆ, "ಮುಖ ನೋಡಿ ಮಣೆ ಹಾಕುವ ...ಿ ಲೇಖಕನಿಗೆ ಒಳ್ಳೆಯದಲ್ಲ, ನನ್ನ ನಂಬಿಕೆ ಏನೆಂದರೆ, ಎಲ್ಲರಿಗೂ ಜಾಣತನ ಇರುತ್ತದೆ; ಕ್ಲಿಷ್ಟವಾದದ್ದನ್ನೂ ...ವ ಕಾತರವಿರುತ್ತದೆ. ನಾನು ಮೊದಲೇ ನನ್ನ ಓದುಗ ದಡ್ಡ ಎಂದು ತೀರ್ಮಾನಿಸಿ ಅವನ ಮಟ್ಟ ಇದು ...ಮು ಊಹಿಸಿ ಕೆಳದರ್ಜೆಯಲ್ಲಿ, ಜಡವಾಗಿ ಬರೆಯಬಾರದು. ನಮ್ಮ ಅನೇಕ ಅಧ್ಯಾಪಕರ ಬರಹಗಳು ...ಭಾಪೂರ್ಣವಾದವು ಎಂಬ ಕಾರಣಕ್ಕೆ ಕ್ಲಿಷ್ಟವಾಗಿರುವುದಿಲ್ಲ; ಅವು ನಿರ್ಜೀವ ಬರಹ ಎಂಬ ಕಾರಣಕ್ಕೆ ...ರಿಂದಲೂ ಓದಿಸಿಕೊಳ್ಳುವುದಿಲ್ಲ, ಅಲ್ಲದೆ ನಾನು ಪತ್ರಿಕೆಯಲ್ಲಿ ಅನೇಕ ಮೂಡ್‌ಗಳಲ್ಲಿ, ಅನೇಕ ದನಿಗಳಲ್ಲಿ ...ಯುವುದನ್ನು ನೀವು ಗಮನಿಸಿರಬಹುದು. ನಾನು ಬರೆಯುವುದಕ್ಕಾಗಿ ಮೂಡ್‌ಗಳನ್ನು ಸೃಷ್ಟಿಸಿಕೊಳ್ಳುವುದಿಲ್ಲ; ...ರುವುದೇ ಹಾಗೆ-ಹಲವು ಮೂಡ್‌ಗಳ ಮನುಷ್ಯ ನಾನು, ಏಕಕಾಲದಲ್ಲಿ, ಆದ್ದರಿಂದ ಓದುಗನಿಗೆ ಒಂದು ...ಡ್ ಅಷ್ಟಾಗಿ ಹಿಡಿಸದಿದ್ದರೆ ಇನ್ನೊಂದು ಇಷ್ಟವಾಗಬಹುದು....

"ಬೇಂದ್ರೆಯವರ ಅರ್ಥಪೂರ್ಣ ಕವನದಿಂದ ಹಿಡಿದು ಬೆಳೆಗಳನ್ನು ಒಳಗೊಂಡು ಕೊಳಕು ಪುಢಾರಿಗಳವರೆಗೆ ...ಯುವ ಮನಸ್ಸು....

"ಬದುಕಿನಲ್ಲಿ ಅವೆಲ್ಲವೂ ಪರಸ್ಪರ ಪೂರಕ. ಬೇಂದ್ರೆ ಕೇವಲ ಸುಂದರವಾದದ್ದು ನೋಡುವ, ಸುಂದರವಾದದ್ದು ...ುವ ಕವಿಯಲ್ಲ; ಆತನಿಗೆ ಗೂಗೆಯೂ ಬೇಕು, ಕವಳಿ ಹಣ್ಣೂ ಬೇಕು; ಹಾಗೆಯೇ ಪತ್ರಕರ್ತ. ಆತ ಒಂದೇ ...ಇದ್ದರೆ ಅವನ ಆಫೀಸ್ ರಾಮಕೃಷ್ಣಾಶ್ರಮವಾಗಿಬಿಡುತ್ತದೆ...."

ಬೀಜ ಮತ್ತು ಬೆಂಕಿ



ಗೆಳೆಯನೊಬ್ಬ ಮನೆ ಮಾರುವುದು ಅನಿವಾರ್ಯವಾಯಿತು; ಅದನ್ನು ಮಾರಿ ಸಣ್ಣಪುಟ್ಟ ಸಾಲ ತೀರಿಸಿ ಹೊಸ ಮನೆಯೊಂದನ್ನು ಕಟ್ಟಿಕೊಂಡರೆ ಸ್ವಲ್ಪ ನೆಮ್ಮದಿ ಸಿಕ್ಕಬಹುದೆಂದು ಮಾರಿದ. ನೀವು ಮಾರಲು ಮನಸ್ಸು ಮಾಡಿ ಅದಕ್ಕಾಗಿ ಒದ್ದಾಡಿದರೆ ಗಿರಾಕಿಗಳು ಮೇಲೆ ಕೂರುತ್ತಾರೆ; ಚಿಕ್ಕಾಸಿಗೆ ಕೇಳಿ ಮನಸ್ಸಿಲ್ಲದ ಮನಸ್ಸಿನಿಂದ ಖರಿಸತೊಡಗುತ್ತಾರೆ. ಇಲ್ಲೂ ಹಾಗೆಯೇ ಆಯಿತು. ಕೊನೆಗೂ ಹೇಗೋ ಮಾರಿದ. ಬಂದ ದುಡ್ಡಿನಲ್ಲಿ ಒಬ್ಬನಿಗೆ ಸೈಟಿಗಾಗಿ ಅಡ್ವಾನ್ಸ್ ಕೊಟ್ಟು ಸೈಟೂ ಇಲ್ಲದೆ, ದುಡ್ಡೂ ಹಿಂದಕ್ಕೆ ಬರದೆ ಪರದಾಡಿದ. ಅಡ್ವಾನ್ಸ್ ತೆಗೆದುಕೊಂಡಿದ್ದವನು ಕಂತಿನಲ್ಲಿ ಹಿಂದಿರುಗಿಸತೊಡಗಿದ. ಅಷ್ಟರಲ್ಲಿ ಸದರಿ ಗೆಳೆಯ ಮನೆ ಮಾರಿರುವುದು, ಅವನಲ್ಲಿ ಹಣ ಇರುವುದು ಎಲ್ಲ 'ಆತ್ಮೀಯ' ಮಿತ್ರರಿಗೂ ತಿಳಿಯಿತು. ಗೆಳೆಯ ತುಂಬ ಉದಾರಿ; ಅಥವಾ ಗೆಳೆಯನ ಪ್ರಕಾರ ತಾನು ಧರ್ಮರಾಯನ ತುಣುಕು. ಮುಂದಿನವಾರ ಹಿಂದಿರುಗಿಸುತ್ತೇನೆ ಅಂದವರಿಗೆ, ತಂಗಿಗೆ ಸೀರೆ ಕೊಡಿಸಬೇಕು ಅಂದವರಿಗೆ, ಪ್ರೇಮವಿವಾಹವಾಗುವ ಕ್ರಾಂತಿಕಾರರಿಗೆ, ಪ್ರೇಮಪ್ರಕರಣದಲ್ಲಿ ಸಿಕ್ಕಿಹಾಕಿಕೊಂಡಿರುವ ಅಸಹಾಯಕ ರಸಿಕರಿಗೆ ನೆರವಾದ. ಅವರಲ್ಲಿ ಶೇ. 50 ಭಾಗ ಜನ ಬೋಗಸ್ ತೊಂದರೆಯವರು; ಉದಾರಿಯಾದ ಗೆಳೆಯನಿಗೆ ಅದು ಹೊಳೆಯಲಿಲ್ಲ. ಕೊಟ್ಟ ಹಣ ವೇಳೆಗೆ ಸರಿಯಾಗಿ ಬರದಿದ್ದಾಗ ತನ್ನ ಮಿತ್ರರನ್ನೇ ಹಣಕ್ಕಾಗಿ ದುಂಬಾಲುಬಿದ್ದ. ಆಗ ಗೆಳೆಯರಲ್ಲೊಬ್ಬ ಹೇಳಿದ, "ಹಣದ ವಿಚಾರ ಗೊತ್ತಿಲ್ಲದ ಮೇಲೆ ಲಕ್ಷಗಟ್ಟಲೆ ಹಾದ ಕಂಟೆಗೆ ನಿನ್ನಂಥವರು ಹೋಗಕೂಡದು. ಹಣ ಒಮ್ಮೆಗೇ ಬೀಜ ಮತ್ತು ಬೆಂಕಿ. ಅದನ್ನು ಅರಿಯದ ಮುಗ್ಧ ಕೂಡ ವಿಚಿತ್ರ ರೀತಿಯ ಭ್ರಷ್ಟ.... ಈಗ ಭ್ರಷ್ಟ ಯಾರೆಂದು ತಿಳಿಯಿತೆ?" ಎಂದು ಬೈದು ಸ್ವಲ್ಪ ಸಹಾಯ ಮಾಡಿ ಅವನು ಈ ಸಂಕಷ್ಟಗಳಿಂದ ಹೊರಬರುವ ದಾರಿ ಸೂಚಿಸಿದ.

-ನವೆಂಬರ್ 3, 1993

ಲೋಕಾಯುಕ್ತ ಎಂತಹವರಾಗಬೇಕು?

ಲೋಕಾಯುಕ್ತರು ಅಂದರೆ ಯಾರು?


ಭ್ರಷ್ಟರಿಗೆ ಸಿಂಹಸ್ವಪ್ನ!

ಆದರೆ ಬಹಳ ಕಾಲ ಈ ಸಿಂಹ ಇದೆ ಎಂದೇ ಯಾರಿಗೂ ತಿಳಿದೇ ಇರಲಿಲ್ಲ. ಅದು ಸೊಗಸಾದ ನಿದ್ರೆಯಲ್ಲಿತ್ತು.

ಶೇಷನ್ ಬರುವವರೆಗೆ ಚುನಾವಣಾ ಆಯೋಗದ ಶಕ್ತಿಯ ಪರಿಚಯವೇ ಇರಲಿಲ್ಲ. ಅಷ್ಟೇ ಏಕೆ ಅದು ಇದೆ ಎಂದೇ ತಿಳಿದಿರಲಿಲ್ಲ!

ಲೋಕಾಯುಕ್ತರದ್ದೂ ಅಷ್ಟೆ. ನ್ಯಾಯಮೂರ್ತಿ

ಅಣಕ



▸▸ ಎಚ್.ಎಲ್. ಕೇಶವಮೂರ್ತಿ

ವೆಂಕಟಾಚಲ ಬರುವವರೆಗೆ, ಅದು ಇದೆ ಎಂಬುದರ ಸುಳಿವೂ ಇರಲಿಲ್ಲ. ಅವರ ಆರ್ಭಟ, ಪ್ರಚಾರಕ್ಕೆ ಮೀಸಲಾಯಿತು ಎಂಬುದು ಅಲಾಯಿದ ಇರಲಿ. ನ್ಯಾಯಮೂರ್ತಿ ಸಂತೋಷ ಹೆಗಡೆ ಅವರು ಅಧಿಕಾರ ವಹಿಸಿಕೊಂಡ ನಂತರ ಭ್ರಷ್ಟಾಚಾರ ನಿಯಂತ್ರಿಸಲು ಪ್ರಾಮಾಣಿಕ ಪ್ರಯತ್ನ ನಡೆಸಿದರು. ಲೋಕಾಯುಕ್ತ ಕಚೇರಿ ಎಂಬುದು ಒಂದು ಇದೆ ಎಂಬುದು ಸಾಮಾನ್ಯರಿಗೂ ತಿಳಿಯುವಂತಾಯಿತು.

ಭ್ರಷ್ಟರನ್ನೆಲ್ಲ ಹಿಡಿದು ಹಾಕ್ತೀನಿ ಅಂದ್ರೆ ಪಾಪ ಅವರೆಲ್ಲ ಎಲ್ಲಿಗೆ ಹೋಗಬೇಕು ಹೇಳಿ. ಮುಖ್ಯಮಂತ್ರಿಗಳು ತಾನೇ ಹೆಂಗೆ ಅಧಿಕಾರ ಚಲಾಯಿಸೋಕಾಗುತ್ತೆ. ಅದಕ್ಕೆ ಇವರು ಈ ಕಡೆಯಿಂದ ಹಿಡಿದರೆ ಅವರು ಆ ಕಡೆಯಿಂದ ಮರು ನೇಮಕ ಮಾಡ್ತಾಕಂತಿದ್ರು. ನಮ್ಮ ರಾಮಚಂದ್ರಗೌಡರು- ಅದೇ ವೈದ್ಯಕೀಯ ಶಿಕ್ಷಣ ಸಚಿವರು- ಕೇಳಿಕೇಳಿದ ಅಧಿಕಾರನ್ನೆಲ್ಲ ಕೊಡ್ತಾ ಕುಂತ್ರೆ ಇವರನ್ನು ಹಿಡಿಯೋಕೆ ಆಗುತ್ತಾ ಅಂತ ಸರಿಯಾಗೇ ಕಿಡಿಕಾರಿದರು. ಅವರ ಕಣ್ಣಿಗೆ ಭ್ರಷ್ಟಾಚಾರ ಕಾಣುತ್ತಲೇ ಇಲ್ಲವಂತೆ. ಭ್ರಷ್ಟಾಚಾರಿ ಎಲ್ಲಿದ್ದಾರೆ ತೋರಿಸಿ ಅವರನ್ನ ಹಿಡಿದು ಬಲಿ ಹಾಕ್ತೇವಿ ಅಂತ ಗುಟುರು ಹಾಕಿದರು. ಹೊಲಸನಗುಂಡಿ ಒಳಗೆ ನಿಂತು ಹೊಲಸು ಎಲ್ಲಿದೆ ತೋರಿಸಿ ಅಂದ್ರೆ ಏನು ತೋರ್ಸಾದು ಅಂತಾವೆ ಕೆಲವು ಮುಂಡೇವು. ಇಂತಹವರ ಆಟನೆಲ್ಲ ಸಹಿಸಕ್ಕಾಗ್ಲಿಲ್ಲ ಅಂತ ಕಾಣ್ಸುತ್ತೆ. ಸಂತೋಷ ಹೆಗಡೆ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಕೊಟ್ಟರೆ ಕೊಡ್ಲಿ ಬಿಡ್ರಿ ಅನ್ನಬಹುದಾಗಿತ್ತು ಮುಖ್ಯಮಂತ್ರಿಗಳು. ಆದರೆ ದೊಡ್ಡ ಮನುಷ್ಯರು ನೋಡಿ. ಹಾಗನ್ನಲಿಲ್ಲ 'ಹೆಗಡೆ ಅವರ ಬಗೆಗೆ ಅಪಾರ ಗೌರವ ಇದೆ. ಅವರ ರಾಜೀನಾಮೆ ನೋವು ತಂದಿದೆ' ಅಂದ್ರು. ಅಷ್ಟಕ್ಕೆ ನಿಲ್ಲಿಸಲಿಲ್ಲ. 'ಗೌರವಯುತವಾಗಿ ಅವರನ್ನು ಬೀಳ್ಕೊಡುತ್ತೇವೆ' ಎಂದೂ ಹೇಳಿದರು. ಅಂದರೆ ಅವರನ್ನು ತೊಲಗಿಸಲು ಸಕಲ ಸಿದ್ಧತೆಗಳನ್ನೂ ಮಾಡಿಕೊಂಡಿದ್ದಾರೆ ಅಂದ ಹಾಗಾಯಿತು!

ಇರಲಿ. ಯಾವ ಅಧಿಕಾರಿ, ರಾಜಕಾರಣಿಗೂ ಲೋಕಾಯುಕ್ತರು ಇರುವುದು ಬೇಕಿಲ್ಲ. ಲೋಕಾಯುಕ್ತರ ನೇಮಕ ಆದದ್ದೇ ಒಂದು ವಿಚಿತ್ರ ಸಂದರ್ಭದಲ್ಲಿ ಎಂದು 'ಹೊಸತು' ಪತ್ರಿಕೆಯ ಈ ಸಾಲಿನ ವಿಶೇಷ ಸಂಚಿಕೆಯಲ್ಲಿ ವಿವರಿಸಲಾಗಿದೆ.

ಅದು ಏನಾಯಿತು ಅಂದರೆ ರಾಮಕೃಷ್ಣ ಹೆಗಡೆ ಎಂಬ ಸೋಗಲಾಡಿ ರಾಜಕಾರಣಿ ಇದ್ದರಲ್ಲ. ಅವರು ಮುಖ್ಯಮಂತ್ರಿ ಆಗಿದ್ದಾಗಿನ ಕಾಲ. ಪ್ರಧಾನಿ ಪಟ್ಟದ ಮೇಲೆ ಕಣ್ಣಿಟ್ಟೇ ಆಡಳಿತ ನಡೆಸಿದೋರು. ಅವರಿಗೆ ಮೌಲ್ಯ ಇತ್ತೊ ಇಲ್ವೊ ಆದರೆ 'ಮೌಲ್ಯಾಧಾರಿತ ರಾಜಕಾರಣಿ' ಎಂಬ ಹೆಸರು ಇತ್ತಲ್ಲಾ..... ಆಡಳಿತ ಮತ್ತು ರಾಜಕೀಯ ಸ್ವಚ್ಛವಾಗಿರಬೇಕು ಅನ್ನೊ ಉಮೇದು ಬಂದು ಲೋಕಾಯುಕ್ತ ಸಂಸ್ಥೆ ಸ್ಥಾಪಿಸಲು ನಿರ್ಧರಿಸಿದರು. ಮುಖ್ಯಮಂತ್ರಿ ತಲೆ ಒಳಗೆ ನುಸುಳಿತ್ತಲ್ವಾ ಇದು ಇದಕ್ಕೆ ಸಂಬಂಧಿಸಿದ ಕಾನೂನು ರಚಿಸಲು ತಿಳಿಸಿದರು. ಸರಿ ಮುಖ್ಯಮಂತ್ರಿಯೂ ಒಳಗೊಂಡಂತೆ ಎಲ್ಲ ರಾಜಕಾರಣಿಗಳಿಗೂ ಮತ್ತು ಅಧಿಕಾರಿಗಳಿಗೂ ಅನ್ವಯಿಸುವಂತೆ ಲೋಕಾಯುಕ್ತ ಮಸೂದೆ ಸಿದ್ಧವಾಯಿತು.

ಮಸೂದೆಯೇನೋ ಸಿದ್ಧವಾಯಿತು. ಜಾರಿಗೆ ಬಂತೆ?

ಅಧಿಕಾರಿಗಳು ಹೌಹಾರಿದರು. ಮುಖ್ಯಮಂತ್ರಿಯನ್ನೇ ಹೆದರಿಸಿದರು. ಲೋಕಾಯುಕ್ತರು ಅಧಿಕಾರ ದುರುಪಯೋಗ ಮಾಡಿಕೊಳ್ಳಬಹುದೆಂಬ ಗುಮ್ಮ ಮುಂದಿಟ್ಟರು.

ಆದರೆ....

ಮುಖ್ಯಮಂತ್ರಿ ಜಗ್ಗಲಿಲ್ಲ.

ಎಲ್ಲರೂ ದಿಗ್ಭ್ರಮೆಗೊಂಡರು.

ಮಸೂದೆಯ ಅಪಾಯವನ್ನು ಒತ್ತಿ ಒತ್ತಿ ಹೇಳಿದರು. ಹೆಗಡೆ ಮೌಲ್ಯಾಧಾರಿತ ರಾಜಕಾರಣಿ ಅಲ್ಲವಾ.... 'ನನ್ನಲ್ಲಿ ಇದಕ್ಕೆ ತಕ್ಕ ಮದ್ದು ಇದೆ' ಅಂದರು!

ಏನು ಮದ್ದು ಅದು?

ಲೋಕಾಯುಕ್ತರ ಕಾಯ್ದೆ ಜಾರಿಗೆ ಬಂತು. ಲೋಕಾಯುಕ್ತರ ನೇಮಕ ಆಗಬೇಕಲ್ಲ?

ಯಾರನ್ನು ಮಾಡಬೇಕು ಲೋಕಾಯುಕ್ತರನ್ನಾಗಿ?

ಹೆಗಡೆ ಸೂಚಿಸಿದರಂತೆ-'ದೇಶದಲ್ಲಿ ಅತ್ಯಂತ ಅದಕ್ಷ, ಭ್ರಷ್ಟ ನ್ಯಾಯಮೂರ್ತಿಗಳ ಹೆಸರುಗಳ ಪಟ್ಟಿ ಮಾಡಿಕೊಡಿ. ನಂತರ ನಾನು ನಿರ್ಧರಿಸುತ್ತೇನೆ!'

ಮಾನ್ಯ ಯಡ್ಯೂರಪ್ಪನವರೂ ದಿವಂಗತ ಮೌಲ್ಯಾಧಾರಿತ ರಾಜಕಾರಣಿಯ ಜಾಡು ತಿಳಿಯಲು ಪ್ರಶಸ್ತವಾಗಿದೆ!



ಹಣ ಅಂದ್ರೆ ತಿಮ್ಮಪ್ಪನೂ ಸಲಾಂ!

ವಿಧಾನ ಪರಿಷತ್ತು, ರಾಜ್ಯಸಭೆ ಚುನಾವಣೆಗಳು ಯಾವಾಗ ಬರುತ್ತವೋ ಅಂತಾವ ಶಾಸಕರು ಬಕಪಕ್ಷಿಗಳಂತೆ ಕಾಯ್ತಾ ಕುಂತಿರೋದು ಲಾಗಾಯ್ತಿನಿಂದಲೂ ಬಂದಿರೋ ಸಂಪ್ರದಾಯ. ಬ್ಯಾಡಾಂತ ಕುಂತಿದ್ರೂ ನನ್ನ ಗೆಲ್ಸಿ ಅಂತಾವ ದುಡ್ಡಿಗುಟ್ಟಿದೋವು ಮೆದೆ ಮರೆನೋಟಿನ ಕಂತೇನ ಸುರೀತವೆ. ಆದ್ರೆ ಒಂದೊಂದು ಸಲ ಯಡವಟ್ಟಾ ಗೋಗ್ಬುಡ್ತದೆ. ವಿಪ್ ಅನ್ನೊ ಆಕ್ಟೋಪಸ್ ಬಳಸಿ ಹಿಡದಾಕ್ತಾರೆ. ಇಂತಹವರಿಗೇ ಮತ ನೀಡಬೇಕು ಅಂತ ಹುಕುಂ ಮಾಡ್ತಾರೆ. ಕಾಸು ಕರೀಮಣಿ ಇಲ್ದಿದ್ರೂ ಅಂತಹವರಿಗೇ ಮತ ಚಲಾಯಿಸುವುದು ಅನಿವಾರ್ಯವಾಗುತ್ತೆ. ಮನಸ್ಸಿಗೆ ಇದು ಕಿರಿಕಿರಿ ತಂದ್ರೂ ಸಹಿಸಿಕೊಳ್ಳಬೇಕು. ಚುನಾವಣೆ ಅಂದ್ರೆ ಹಣದ ಹೊಳೇನೆ ಹರೀತದೆ ಅಂತಾರಲ್ಲ ಅದೇನೂ ನಡೆಯೋದೆ ಇಲ್ಲ! ಇಲ್ಲ ಅಂದರೆ ಇಲ್ಲವೇ ಇಲ್ಲ ಅಂತೇನೂ ಅಲ್ಲ. ಶಾಸಕರಿಗೆ ಸಲ್ಲಿಸಬೇಕಾಗಿರುವ ಕಾಣಿಕೇನ ಪಕ್ಷದ ವರಿಷ್ಠರಿಗೇ ನೀಡಲಾಗುತ್ತದೆಯಂತೆ! ಇದರಲ್ಲೇನೂ ಅಂತಹ ಅಪರಾಧ ಇಲ್ಲ ಬಿಡಿ. ಅದೆಷ್ಟೋ ಶಾಸಕರುಗಳಿಗೆ ಬೆಣ್ಣೆ ಹಚ್ತಾ ಕುಂತಿರೋ ಬದಲು ಒಬ್ಬನಿಗೆ ಬಿಸಾಕಿ ಸ್ಥಾನ ಖಾಯಂ ಮಾಡಿಕೊಂಡ ಹಾಗೆ ಆಗುತ್ತೆ. ಒಂದು ರೀತಿ ಚಿಲ್ಲರೆ ವ್ಯಾಪಾರದ ಬದಲು ಸಗಟು ವ್ಯಾಪಾರ ಇದ್ದಂಗೆ ಅನ್ನಿ.

ಇರಲಿ. ಒಂದೊಂದು ಸಲ ಪಕ್ಷದವರು ಇಕ್ಕಟ್ಟಿಗೆ ಸಿಗಾಕ ಕೊಳ್ತಾರೆ. ಕೆಲವು ಪಕ್ಷಗಳಲ್ಲಿ ತಮ್ಮ ಅಭ್ಯರ್ಥಿಗಳನ್ನು ಗೆಲ್ಲಿಸಿದ ನಂತರವೂ ಮತಗಳು ಉಳಿಯುತ್ತವೆ. ಇನ್ನೂ ಕೆಲವಕ್ಕೆ ಎಷ್ಟೇ ದಮ್ಮು ಕಟ್ಟಿದರೂ ಯಾರನ್ನೂ ಗೆಲ್ಲಿಸಲು ಸಾಧ್ಯವಾಗುವುದಿಲ್ಲ. ಆಗ ಅಂತಹವೇನು ಮಾಡ್ತವೆ. ಇತರೆ ಪಕ್ಷಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ತವೆ. ಇಂತಹ ಹೊಂದಾಣಿಕೆಗೆ ಆಧಾರ ಅಂತ ಒಂದು ಬೇಕಲ್ಲ, ಏನು ಆಧಾರ?

ಈ ಸಲ ವಿಧಾನ ಪರಿಷತ್ತು ರಾಜ್ಯಸಭೆ ಚುನಾವಣೆಗಳು ಬಂತು.

ಜೆಡಿಎಸ್-ಕಾಂಗ್ರೆಸ್ ಹೊಂದಾಣಿಕೆ ಆಯಿತು.

ವಿಧಾನ ಪರಿಷತ್ತಿಗೆ ಜೆಡಿಎಸ್ ಅಭ್ಯರ್ಥಿಗೆ ಕಾಂಗ್ರೆಸ್ ಬೆಂಬಲಿಸೋದು, ರಾಜ್ಯಸಭೆಯಲ್ಲಿ ಇದು ಅದಕ್ಕೆ ಸಹಕರಿಸೋದು.

ಇದು ಜಂಟ್ಲ್‌ಮನ್ಸ್ ಅಗ್ರಿಮೆಂಟು.

ವಿಧಾನ ಪರಿಷತ್ತು ಚುನಾವಣೆ ಮುಗಿಯಿತು. ರಾಜ್ಯಸಭೆ ಚುನಾವಣೆ ಬಂದಿತ್ತು. ಒಪ್ಪಂದದಂತೆ ಜೆಡಿಎಸ್ ಬೆಂಬಲಿಸಬೇಕು ತಾನೆ?

ಉಹುಂ. ತಾವು ಹೇಳಿದ ಅಭ್ಯರ್ಥಿ ನಿಲ್ಲಿಸಿದರೆ ಮಾತ್ರ ನಮ್ಮ ಬೆಂಬಲ ಎಂದಿತು ಅದು.

ಅರೆ ಬೆಂಬಲ ಅಂದಮೇಲೆ ಮುಗಿಯಿತು. ಊರ ದಾಸಯ್ಯನನ್ನ ನಿಲ್ಲಿಸಲಿ ಬೆಂಬಲಿಸಬೇಕು ಎಂಬುದು ನ್ಯಾಯ. ಅಭ್ಯರ್ಥಿಯನ್ನು ಕಟ್ಟಿಕೊಂಡು ಇವರಿಗೇನಾಗಬೇಕು? ಒಡಂಬಡಿಕೆಗೆ ಬರುವಾಗ ಇದನ್ನು ತಿಳಿಸಲಾಗಿತ್ತೆ ಅಂದರೆ ಅದೂ ಇಲ್ಲ. ಅಂದರೆ ಕಾಂಗ್ರೆಸ್‌ನೊಳಗೊಂದು ಜೆಡಿಎಸ್ ಸ್ಥಾಪನೆ ಅದರ ಉದ್ದೇಶ!

ಕಾಂಗ್ರೆಸ್ ಒಪ್ಪಲಿಲ್ಲ.

ಜೆಡಿಎಸ್ ಬಯಸಿದ್ದೂ ಅದನ್ನೇ.

'ವಿಜಯ ಮಲ್ಯ ನಮ್ಮ ಅಭ್ಯರ್ಥಿ' ಘೋಷಿಸಿತು ಜೆಡಿಎಸ್.

ವಿಜಯ ಮಲ್ಯರೇ ಯಾಕೆ ಇವರ ಅಭ್ಯರ್ಥಿ ಆಗಬೇಕು?

'ಅವರು ಕನ್ನಡಿಗ ಅದಕ್ಕೆ' ಮಾನ್ಯ ಎಚ್.ಡಿ. ಕುಮಾರಸ್ವಾಮಿಯವರ ಉತ್ತರ.

ಅವರೆಷ್ಟು ಕನ್ನಡಿಗರು?

ಶ್ರೀಯುತರು ಕೆಲವು ವರ್ಷಗಳ ಹಿಂದೆ ಒಂದು ಪಕ್ಷವನ್ನೇ ಕೊಂಡಿದ್ದರು. ಅದರ ಪ್ರಚಾರ ಟಿವಿ ಚಾನೆಲ್‌ಗಳಲ್ಲಿ ಬರುತ್ತಿತ್ತು. ಅಲ್ಲಿನ ಅವರ ಭಾಷೆಯನ್ನು ಕೇಳಬೇಕಿತ್ತು! 'ಏಲಿ ಕನ್ನಡಿಗರೆ ಎದ್ದೇಲಿ' ಎಂದು ಪ್ರಾರಂಭಿಸುತ್ತಿದ್ದರು! ನಮ್ಮಲ್ಲೆಲ್ಲ ಇವರು 'ಏಲಿ ಎದ್ದೇಲಿ ಕನ್ನಡಿಗ'ನೆಂದೇ ಪ್ರಸಿದ್ಧಿ.

ಇರಲಿ. ಇದೇ ಪಕ್ಷ ಕುದುರೆ ದೊರೆ ರಾಮಸ್ವಾಮಿ ಎಂಬ ತಮಿಳನನ್ನು ಬೆಂಬಲಿಸಿತ್ತು. ನಂತರ ಮಲೆಯಾಳಿ ರಾಜೀವ್ ಚಂದ್ರಶೇಖರ್‌ನನ್ನ ಬೆಂಬಲಿಸಿತ್ತಲ್ಲಾ.. ಅಂದರೆ ಅದು ತಮಿಳು ಹಣ, ಮಲೆಯಾಳಿ ಹಣ ಆದರೆ ಇದು ಕನ್ನಡದ ಹಣ ಅಂತಿರಬೇಕೋ ಏನೋ.

ಅಂತೂ ದೇವೇಗೌಡರ ಕುಟುಂಬದೊಡನೆ ಸಗಟು ಖರೀದಿ ಆಗಿತ್ತು. ಚಿಲ್ಲರೆ ವ್ಯಾಪಾರ ಆಗಬಹುದೆಂದು ಕಾಯ್ದು ಕುಳಿತ್ತಿದ್ದವರಿಗೆ ಮಣ್ಣು ತಿನ್ನಿಸಲಾಯ್ತು. ಇಷ್ಟಾದರೂ ಮಲ್ಯ ಸಾಹೇಬರು ಗೆಲ್ಲುವಂತಿರಲಿಲ್ಲ. ಇತರೆ ಪಕ್ಷದವರ ಬೆಂಬಲ ಬೇಕಿತ್ತು.

ಏನು ಮಾಡಿದರು ಮಲ್ಯ?

ದೆಹಲಿಗೆ ಹಾರಿದರು. ವ್ಯಾಪಾರ ಕುದುರಿಸಿದರು. ಭಾಜಪ ಬೆಂಬಲ ಮಲ್ಯಗೆ ದೊರಕಿತು!

ಇದು ಭಾಜಪ-ಜೆಡಿಎಸ್ ಸುರು ಮದುವೆಯೋ? ಕೂಡಾವಳಿಯೆ? ಯಾವುದೂ ಅಲ್ಲವಂತೆ. ಕಾಂಗ್ರೆಸ್ ಸೋಲಿಸಲು ಈ ಬೆಂಬಲವಂತೆ! ಅಂದರೆ ಅವನ ಹೆಂಡತಿ ವಿಧವೆ ಮಾಡಲು ಇವರ ಹೊಂದಾಣಿಕೆ!

ಆಯಿತು. ವಿಜಯ ಮಲ್ಯ ಎಂಬ ಮಹಾನ್ ಹೆಂಡದ ದೊರೆಗಳು ಕರ್ನಾಟಕದ ಪ್ರತಿನಿಧಿಯಾಗಿ ರಾಜ್ಯಸಭೆ ಸೇರಿದ್ದಾಯಿತು. ಗೆಲುವಿನ ನಂತರ ಅವರು ಮಾಡಿದ್ದೇನು?

ಮತದಾರರನ್ನು ಮರೆತರು. ಇದೂ ನ್ಯಾಯವೇಯೆ. ಯಾಕೆಂದರೆ ಮತದಾರ ಮತ ಹಾಕಿದ್ದಲ್ಲ ಯಾರೋ ಹಾಕಿಸಿದ್ದು. ಅಂತಹದ್ದರಲ್ಲಿ ಇವರದ್ದೇನು ಮೂಲಾಜು? ಸೀದಾ ತಿರುಪತಿಗೆ ನಡೆದರು.

ಹೆಂಡದ ದೊರೆಯೇ ತನ್ನ ದರ್ಶನಕ್ಕೆ ಬಂದಿದ್ದಾನೆಂದರೆ ಕೃಷ್ಣ ಕುಚೇಲನ ಮನೆಗೆ ಬಂದ ಹಾಗಾಗಿರಬೇಕು ತಿಮ್ಮಪ್ಪನಿಗೆ. ಸುಮಾರು ಒಂದೂವರೆ ಗಂಟೆಗಳ ಕಾಲ, ಫುಲ್ ಮೇಕಪ್‌ನೊಂದಿಗೆ ಕಾಯ್ದು ನಿಂತಿದ್ದ! ಸಾವಿರಾರು ಅಮಾಯಕರು ತನ್ನ ದರ್ಶನಕ್ಕಾಗಿ ಕಾಯ್ದು ನಿಂತದ್ದು ವಿವಿಐಪಿಗೆ ದರ್ಶನ ನೀಡುವ ಸಂಭ್ರಮದಲ್ಲಿ ಮರೆತೇಬಿಟ್ಟ! ಇಂತಹವರು ದರ್ಶನಕ್ಕಾಗಿ ಬಂದಾಗ ಹೀಗೆ ಬುದ್ಧಿಭ್ರಮಣೆಯಾಗಿ, ಏನು ಮಾಡಬೇಕೋ ತಿಳಿಯದ ಹಾಗೆ ಆಗೋದು ಸಹಜವೇಯೆ....

ನಾನೂ ಅತ್ತೆ; ಕರ್ನಾಟಕದ ಈ ಸ್ಥಿತಿಗಾಗಿ!

ಹೊಗಳಿಕೆ ತೆಗಳಿಕೆ

ಲೋಕಾಯುಕ್ತ ಸಂತೋಷ್ ಹೆಗಡೆ ತರಹದ ಪ್ರಾಮಾಣಿಕರೇ ಯಡ್ಡಿಯ ಚೆಡ್ಡಿಯ ಸರ್ಕಾರದ ಭ್ರಷ್ಟಾಚಾರದ ಎದುರು ಅಸಹಾಯಕರಾಗಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುತ್ತಾರೆಂಬುದು ನಮ್ಮ ರಾಜ್ಯ ಈಗ ಎಷ್ಟು ಕುಲಗೆಟ್ಟುಹೋಗಿದೆ ಎಂಬುದನ್ನು ಸೂಚಿಸುತ್ತದೆ.

ಹೀಗೆ ಲೋಕಾಯುಕ್ತರಿಂದ ಮುಖಭಂಗಕ್ಕೆ ಈಡಾದ ನಂತರವೂ ಯಡ್ಡಿ ತನ್ನ 'ಶೂನ್ಯ' 'ಸಾಧನಾ ಸಮಾವೇಶ'ದಲ್ಲಿ ತಾನು ರಾಜ್ಯದ ಪ್ರಗತಿಗಾಗಿ, ಅಭಿವೃದ್ಧಿಗಾಗಿ ಶ್ರಮಿಸುತ್ತಿರುವುದಾಗಿಯೂ, ಈ ಮಹಾನ್ ಕಾರ್ಯದಲ್ಲಿ ವಿರೋಧ ಪಕ್ಷದವರು ತನಗೆ ಸಹಕರಿಸುತ್ತಿಲ್ಲವೆಂದೂ ಕಣ್ಣೀರಿಟ್ಟಿದ್ದಾರೆ.

ಇವರು ಯಾವ ಮಹಾನ್ ಸಾಧನೆ ಮಾಡಿದ್ದಾರೆಂದು ವಿರೋಧ ಪಕ್ಷದವರಾಗಲಿ, ಈ ರಾಜ್ಯದ ಜನರಾಗಲಿ ಯಡ್ಡಿಯ ಸರ್ಕಾರವನ್ನು ಮೆಚ್ಚಬೇಕು? ಹಸಿರು ಶಾಲ್ ಹೊದ್ದು ಪ್ರಮಾಣವಚನ ಸ್ವೀಕರಿಸಿದ ಇದೇ ಯಡ್ಡಿ ಅಧಿಕಾರಕ್ಕೆ ಏರಿದ ಕೆಲವೇ ವಾರಗಳಲ್ಲಿ ರೈತರ ಮೇಲೆ ಗುಂಡುಗಳನ್ನು ಹಾರಿಸಿ ಇಬ್ಬರನ್ನು ಬಲಿ ತೆಗೆದುಕೊಂಡರು. ಆಮೇಲೆ, ತನ್ನ ವಿರುದ್ಧ ಬಳ್ಳಾರಿ ಗಣಿ ಗ್ಯಾಂಗ್ ನಡೆಸಿದ್ದ ಷಡ್ಯಂತ್ರವನ್ನು ನಿವಾರಿಸಿಕೊಳ್ಳುವಲ್ಲೇ ಬ್ಯುಸಿ ಆಗಿದ್ದ ಯಡ್ಡಿ ಉತ್ತರ ಕರ್ನಾಟಕದಲ್ಲಿ ನೆರೆ ಹಾವಳಿಗೆ ತುತ್ತಾಗಿದ್ದ ಜನರತ್ತ ಗಮನ ಹರಿಸದೇ ಸಾವಿರಾರು ಜನರ ಬದುಕನ್ನೇ ಬಲಿ ಕೊಟ್ಟರು.

ಕರಾವಳಿ ಮತ್ತು ಇತರೆ ಜಿಲ್ಲೆಗಳಲ್ಲಿ ಅಲ್ಪಸಂಖ್ಯಾತ ಕ್ರಿಶ್ಚಿಯನ್ನರ ಪ್ರಾರ್ಥನಾ ಮಂದಿರಗಳ ಮೇಲೆ ಭಜರಂಗದ ಮಂಗಗಳು ದಾಳಿಗಳನ್ನು ನಡೆಸುತ್ತಿದ್ದಾಗ ಯಡ್ಡಿ ನಿಷ್ಕ್ರಿಯರಾಗಿದ್ದು ಆತನ ಇನ್ನೊಂದು ಸಾಧನೆಯೇ. ಹಾಗೆಯೇ ಹಿಂದೂತ್ವವಾದಿಗಳು ಕರಾವಳಿ ಜಿಲ್ಲೆಗಳಲ್ಲಿ ಕೈಗೆ ಸಿಕ್ಕ ಮುಸಲ್ಮಾನ ಯುವಕರನ್ನು ಥಳಿಸಿದಾಗಲೂ ಕುರುಡು-ಕೆಪ್ಪರಂತೆ ಯಡ್ಡಿ ಕೂತದ್ದೂ ಅವರ ಮಹಾನ್ ಸಾಧನೆಯೇ ಸರಿ.


ಇಂತಹ 'ಸಾಧನೆ'ಗಳ ಯಡ್ಡಿ ಕಣ್ಣೀರಿಡುತ್ತಿದ್ದದ್ದನ್ನು ಕಂಡು ನನ್ನ ಕಣ್ಣುಗಳೂ ತೇವಗೊಂಡವು. ಆತ ಅಳುತ್ತಿದ್ದಾನೆ ಎಂಬ ಕಾರಣಕ್ಕಲ್ಲ, ಇಂತಹ ಮುಖ್ಯಮಂತ್ರಿಯನ್ನು ಪಡೆದಿರುವ ಕರ್ನಾಟಕದ ಜನತೆ ಯಾವ ಪಾಪ ಮಾಡಿದ್ದರು ಎಂದು....

-ಸಂತೋಷ್. ಅಜ್ಜಂಪುರ

ಗೌರಿ ಲಂಕೇಶ್ ಅವರಿಗೆ 2009ನೇ ಸಾಲಿನ ಕರ್ನಾಟಕ ಮಾಧ್ಯಮ ಪ್ರಶಸ್ತಿ ಬಂದದ್ದನ್ನು ಕೇಳಿ ತುಂಬಾ ಸಂತೋಷವಾಯಿತು. ನಿಜವಾಗಲೂ ಈ ಪ್ರಶಸ್ತಿ 'ಲಂಕೇಶ್' ವಾರ ಪತ್ರಿಕೆಯ ಕ್ಯಾಪ್ಟನ್ ಗೌರಿಗೆ ಮಾತ್ರ ಬಂದದ್ದಲ್ಲ, ಬದಲಾಗಿ ಈ ನಾಡಿನ ಎಲ್ಲಾ ಪ್ರಜ್ಞಾವಂತ, ಜನಪರ, ಪ್ರಗತಿಪರ ಜನರಿಗೆ ಸಂದ ಪ್ರಶಸ್ತಿಯಾಗಿದೆ. ನನಗಂತೂ ನಾವೆಲ್ಲ ಪಡೆದಿರುವ ಪ್ರಶಸ್ತಿ ಇದು ಎಂದೆನಿಸಿ ಮನೆಮಂದಿಯೆಲ್ಲ ಸಿಹಿ ಹಂಚಿಕೊಂಡು ಸಂಭ್ರಮಿಸಿದೆವು.

-ಶ್ರೀನಿವಾಸ. ಹರಿಹರ

...ಟರತ್ನಾಕರನ ಕಳಾಹೀನ ಬದುಕು



...ದುಕಿನ ಮುಸ್ಸಂಜೆಯಲ್ಲಿರುವ ಅವರ ದೇಹದಲ್ಲಿ ಒಂದಿಷ್ಟೂ ತ್ರಾಣವಿಲ್ಲದೆ ...ಗೆ ಒರಗಿದ್ದರು. ಮಾಂಸಖಂಡವೆಲ್ಲ ಸವೆದು ಮೈಚರ್ಮ ಮೂಳೆಗಂಟಿತ್ತು. ...ದೆ ಅವರ ಇದೀ ದೇಹ ಮಡಚಿ ಮೂಲೆಗಿಟ್ಟ ಕೊಡೆಯಂತಾಗಿತ್ತು.

...ಗೆ ಕ್ಷೀಣವಾಗಿ ಮಲಗಿದ್ದ ವ್ಯಕ್ತಿ ಬೇರೆ ಯಾರೂ ಅಲ್ಲ, ಸರಿಸುಮಾರು ...ನೂರಕ್ಕೂ ಹೆಚ್ಚು ಕನ್ನಡ ಚಿತ್ರಗಳಲ್ಲಿ ನಟಿಸಿ ಜನಮಾನಸದಲ್ಲಿ ತನ್ನದೇ ...ನೆನಪುಗಳನ್ನು ಉಳಿಸಿರುವ ಎಂಭತ್ತು ವರ್ಷ ದಾಟಿರುವ ಹಿರಿಯ ...ವಿದ ರತ್ನಾಕರ್.

...ಸರಲ್ಲೇ ರತ್ನವನ್ನು ಹೊಂದಿರುವ ರತ್ನಾಕರ್ ಚಿತ್ರರಂಗದಲ್ಲಿದ್ದೂ ಎಂದೂ ...ಗೂ ಕೇಡುಬಯಸದೇ, ಸರಳ ಮತ್ತು ವಿನಯವಂತಿಕೆಯಿಂದಲೇ ...ಡಿದವರು. ಇಂಥ ಹಿರಿಯ ಕಲಾವಿದ ಈಗ ತೀವ್ರ ಅನಾರೋಗ್ಯದಿಂದ ...ತ್ತಿದ್ದಾರೆ. ತಮ್ಮ ಕಿಲಗುಟ್ಟುವ ಕಂಠದಿಂದಲೇ ಪ್ರೇಕ್ಷಕರನ್ನು ಅಪಾರವಾಗಿ ...ದ ರತ್ನಾಕರ್ ಅವರ ಅಪರೂಪದ ಕಂಠವೇ ಈಗ ಸದ್ದಡಗಿ ...ದೆ. ಸದಾ ಸ್ಫೂರ್ತಿಯ ಚಿಲುಮೆಯಂತೆ, ಲವಲವಿಕೆಯಿಂದ ...ತಿಕೊಂಡಿದ್ದ ರತ್ನಾಕರ್ ತಮ್ಮ ಕೃಶ ದೇಹವನ್ನು ಹಾಸಿಗೆಯಲ್ಲಿ ...ಕಳಾಹೀನರಾಗಿ ಮಲಗಿದ್ದಾರೆ. ಮೂಗಿಗೆ ಆಕ್ಸಿಜನ್ ಪೈಪು ...ಕಲಾಗಿದೆ. ನೆಟ್ಟಗೆ ಉಸಿರಾಡುವುದೂ ಅವರಿಂದ ...ಗುತ್ತಿಲ್ಲ.



...ಚಿತ್ರ ಪ್ರಪಂಚ' ಸಿನಿಮಾದಿಂದ ಆರಂಭವಾಗಿ ಈಗಷ್ಟೇ ...ಡೆಗೆ ಸಿದ್ಧಗೊಳ್ಳುತ್ತಿರುವ 'ಗಾನಾಬಜಾನಾ' ಚಿತ್ರದ ತನಕ ...ರ್ ನಟಿಸಿರುವ ಚಿತ್ರಗಳು ಬರೋಬ್ಬರಿ ಮುನ್ನೂರು! ವೃತ್ತಿ ...ಭೂಮಿಯಿಂದ ಕಲಾಸೇವೆಯನ್ನು ಆರಂಭಿಸಿದ ರತ್ನಾಕರ್ ...ಂದು ಸಂಖ್ಯೆಯ ಚಿತ್ರಗಳಲ್ಲಿ ಮನೋಜ್ಞವಾಗಿ ಅಭಿನಯಿಸಿ ...ಕಲಾವಿದನಾಗಿ ಗುರುತಿಸಿಕೊಂಡಿದ್ದಾರೆ. ಬರೀ ನಟನೆ ...ವಲ್ಲದೆ ವಿಷ್ಣು ಅಭಿನಯದ 'ಶನಿಪ್ರಭಾವ', 'ಬಾಂಧವ್ಯ', ಡಾ. ...ಲೀಲಾವತಿ ಜೋಡಿಯಿದ್ದ 'ಭಾಗ್ಯ ದೇವತೆ' ಎಂಬ ಮೂರು ಚಿತ್ರಗಳನ್ನೂ ... ನಿರ್ದೇಶಿಸಿದ್ದಾರೆ. ಮುಸುರಿ ಕೃಷ್ಣಮೂರ್ತಿ ಅವರ ನಿಧನಾನಂತರ ... ಬಿಟ್ಟು ಹೋದ ಎಲ್ಲ ಚಿತ್ರಗಳಿಗೂ ಕಂಠದಾನ ಮಾಡಿದ್ದು ಕೂಡಾ ... ರತ್ನಾಕರ್.



...ಷ್ಟೆಲ್ಲಾ ದುಡಿದಿರುವ ರತ್ನಾಕರ್ ...ರಿನಲ್ಲಿ ವಾಸಕ್ಕೊಂದು ಮನೆ ಮತ್ತು ...ವ ಅಸಂಖ್ಯ ಅಭಿಮಾನಿಗಳನ್ನು ...ದಿಸಿದ್ದು ಬಿಟ್ಟರೆ ಬೇರಾವ ಆಸ್ತಿಯನ್ನೂ ...ಗಂಟನ್ನೂ ಮಾಡಿಟ್ಟಿಲ್ಲ. ಅಷ್ಟಕ್ಕೂ ...ರ್‌ಗೆ ಆ ಕಾಲಕ್ಕೆ ಹೇಳಿಕೊಳ್ಳುವಂಥ ...ವನೆಯಾದರೂ ಎಲ್ಲಿ ಗಿಟ್ಟುತ್ತಿತ್ತು?

...ಗಾಗಿ ಎಂಭತ್ತರ ಇಳಿವಯಸ್ಸಿನ ...ರ್ ಇಂದು ಆರ್ಥಿಕವಾಗಿ ತೀರಾ ...ಷ್ಟದಲ್ಲಿದ್ದಾರೆ. ಈಗಾಗಲೇ ಅವರ ಆಸ್ಪತ್ರೆ ... ಲಕ್ಷಾಂತರ ರೂಪಾಯಿಗಳಾಗಿವೆ. ...ವದಲ್ಲಿ ಎಂದೆಂದಿಗೂ ಸಿಗರೇಟನ್ನೇ ...ದ ರತ್ನಾಕರ್‌ರ ಶ್ವಾಸಕೋಶದಲ್ಲಿ ಲಿವರು ...ನ್ ಡೈ ಆಕ್ಸೈಡ್ ತುಂಬಿಕೊಂಡು ...ನ್ನು ಹೆಣಗಾಡಿಸುತ್ತಿದೆ. ಜೆಎಸ್‌ಎಸ್ ...ಯಲ್ಲಿ ಒಂದಷ್ಟು ದಿನ ದಾಖಲಾಗಿದ್ದ ...ರ್ ಆಸ್ಪತ್ರೆ ಖರ್ಚು ಮಿತಿಮೀರುತ್ತೆ ... ಕಾರಣಕ್ಕೆ ಮನೆಗೆ ಬಂದು ವಿಶ್ರಾಂತಿ ...ಯುತ್ತಿದ್ದಾರೆ. ಅವರ ಕೃತಕ ಉಸಿರಾಟಕ್ಕಾಗಿ ...ತ್ತಿರುವ ಬೈಪ್ಯಾಪ್ ಮಷಿನ್ ಮತ್ತು ...ನ್ ಸಿಲಿಂಡರ್‌ನ ಬಾಡಿಗೆಯೇ ತಿಂಗಳಿಗೆ ... ಸಾವಿರ ರೂಪಾಯಿಗಳು. ಜೊತೆಗೆ ವಾರಕ್ಕೊಮ್ಮೆ ಆಸ್ಪತ್ರೆ ..., ಓಡಾಟದ ಖರ್ಚು, ಔಷಧೋಪಚಾರ ಇತ್ಯಾದಿಗಳೆಲ್ಲ ಸೇರಿ ...ವೆಂದರೂ ಹದಿನೈದಿಪ್ಪತ್ತು ಸಾವಿರಗಳ ಬಾಬ್ತು ವ್ಯಯವಾಗುತ್ತಿದೆ. ...ರ್‌ಗೆ ಮೂವರು ಗಂಡುಮಕ್ಕಳಿದ್ದರೂ ಇಷ್ಟೊಂದು ಹಣವನ್ನು ಭರಿಸುವುದು ಅವರ ಕುಟುಂಬದವರಿಗೆ ಕಷ್ಟಸಾಧ್ಯವಾಗುತ್ತಿದೆ. ಅವರ ಹಿರಿಯ ಮಗ ರಾಘವೇಂದ್ರ ತನ್ನದೇ ಆರ್ಕೆಸ್ಟ್ರಾ ತಂಡವನ್ನು ಕಟ್ಟಿಕೊಂಡು ಮೈಸೂರಿನಲ್ಲಿ ಒಂದಷ್ಟು ಕಛೇರಿಗಳನ್ನು ನಡೆಸುತ್ತಾರೆ. ಎರಡನೇ ಮಗ ರಾಜು ಖಾಸಗಿ ಫ್ಯಾಕ್ಟರಿಯೊಂದರ ಉದ್ಯೋಗಿ ಮತ್ತು ಕಡೆ ಮಗ ಟ್ರಾವೆಲ್ಸ್ ಒಂದರಲ್ಲಿ ಕಾರ್ ಚಾಲಕ.

ಹೀಗಿರುವಾಗ ಈ ಕುಟುಂಬ ಸಂಸಾರ ನಡೆಸುವುದೇ ಕಷ್ಟ, ಆದರೂ ತಮಗೆ ಏನೂ ಕೊರತೆಯಿಲ್ಲದಂತೆ ಸಾಕಿ ಸಲುಹಿದ ತಂದೆ ನೊಂದುಕೊಳ್ಳಬಾರದು ಎಂದು ಮಕ್ಕಳು ಅವರಿಗೆ ನೋವಾಗದಂತೆ ನೋಡಿಕೊಳ್ಳುತ್ತಿದ್ದಾರೆ.

ರತ್ನಾಕರ್‌ರ ಅನಾರೋಗ್ಯದ ವಿಚಾರ ತಿಳಿದಕೂಡಲೇ ತೂಗುದೀಪ ದರ್ಶನ್ ತಮ್ಮ ಪರಿಚಿತರ ಬಳಿ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಕಳುಹಿಸಿಕೊಟ್ಟರಂತೆ. ಇದೇ ಹಣವನ್ನು ಆಸ್ಪತ್ರೆಗೆ ಪಾವತಿಸಿ ರತ್ನಾಕರ್ ಮನೆಗೆ ಮರಳಿದ್ದಾರೆ. ಒಂದು ವೇಳೆ ದರ್ಶನ್ ಹಣ ಸಹಾಯ ಮಾಡದಿದ್ದರೆ ರತ್ನಾಕರ್‌ರನ್ನು ಆಸ್ಪತ್ರೆಯವರು ಡಿಸ್‌ಚಾರ್ಜ್ ಕೂಡಾ ಮಾಡುತ್ತಿರಲಿಲ್ಲವಂತೆ.

ಮೊನ್ನೆ ಹಾಸ್ಯನಟರ ಸಂಘದ ಬ್ಯಾಂಕ್ ಜನಾರ್ಧನ್, ಡಿಂಗ್ರಿ ನಾಗರಾಜ್‌ರಂಥ ವಿಶ್ವಾಸಿ ಗೆಳೆಯರು ಮೈಸೂರಿಗೆ ಹೋಗಿ ರತ್ನಾಕರ್ ಅವರನ್ನು ಭೇಟಿ ಮಾಡಿ ಆತ್ಮಸ್ಥೈರ್ಯ ತುಂಬಿ ಬಂದಿದ್ದಾರೆ. ರತ್ನಾಕರ್ ಬಗ್ಗೆ ಅಭಿಮಾನಗಳಿಗೆ ಅದೆಂಥ ಉತ್ಕಟ ಕಾಳಜಿ ಗೊತ್ತೆ? ರತ್ನಾಕರ್ ಹುಷಾರಿಲ್ಲದಂತಾಗಿದ್ದಾರೆ ಎಂಬ ವಿಚಾರ ಮಾಧ್ಯಮದಲ್ಲಿ ಸಣ್ಣದಾಗಿ ಭಿತ್ತರಗೊಳ್ಳುತ್ತಿದ್ದಂತೇ ತಮ್ಮ ಕೈಲಾದ ಸಹಾಯಕ್ಕೆ ಮುಂದಾಗಿದ್ದಾರೆ. ಎಷ್ಟೋ ಜನ ನೂರು, ಇನ್ನೂರು ಮತ್ತು ಐನೂರು ರೂಪಾಯಿಗಳನ್ನು ಯಾವ ಸಂಬಂಧ, ನೆಂಟಸ್ತಿಕೆಯೂ ಇಲ್ಲದ ರತ್ನಾಕರ್ ಹೆಸರಿಗೆ ಎಂಓ ಮಾಡಿದ್ದಾರೆ. ಇನ್ಫೋಸಿಸ್‌ನ ಸುಧಾಮೂರ್ತಿ ಕೂಡ ಹತ್ತು ಸಾವಿರ ರೂಪಾಯಿಗಳನ್ನು ರತ್ನಾಕರ್‌ಗೆ ಅರ್ಪಿಸಿದ್ದಾರೆ.

ಇತ್ತೀಚೆಗೆ ರಾಘವೇಂದ್ರ ಚಿತ್ರವಾಣಿಯವರು ಹಿರಿಯ ಕಲಾವಿದೆ ಪ್ರತಿಮಾದೇವಿ ಅವರಿಗೆ ಪ್ರಶಸ್ತಿಯನ್ನು ನೀಡಿತ್ತು. ನಗದನ್ನೂ ಒಳಗೊಂಡಿದ್ದ 'ಡಾ. ಜಯಮಾಲಾ ಪ್ರಶಸ್ತಿ'ಯನ್ನು ಕಾರಣಾಂತರದಿಂದ ಪ್ರತಿಮಾದೇವಿ ಅವರು ಸ್ವೀಕರಿಸಿರಲಿಲ್ಲ. ಹೇಗಾದರೂ ಮಾಡಿ ಈ ಗೌರವವನ್ನು ಸಂಕಷ್ಟದಲ್ಲಿರುವ ಬೇರೊಬ್ಬ ಕಲಾವಿದರಿಗೆ ಸಮರ್ಪಿಸಬೇಕೆಂದು ಪ್ರತಿಮಾದೇವಿ ಅವರು ತೀರ್ಮಾನಿಸಿದ್ದರು. ಅದೇ ಹೊತ್ತಿಗೆ ರತ್ನಾಕರ್‌ರ ಅನಾರೋಗ್ಯದ ವಿಚಾರ ತಿಳಿದು ಮೈಸೂರಿಗೆ ಹೋಗಿ ಆ ನಗದನ್ನು ರತ್ನಾಕರ್ ಕೈಗಿಟ್ಟುಬಂದಿದ್ದಾರೆ. ಚಲನಚಿತ್ರ ವಾಣಿಜ್ಯ ಮಂಡಳಿಯ ಮಾಜಿ ಅಧ್ಯಕ್ಷೆ ಜಯಮಾಲಾ ಅವರು ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಒಂದು ಲಕ್ಷ ರೂಪಾಯಿಗಳ ಸಹಾಯಧನವನ್ನು ರತ್ನಾಕರ್‌ಗೆ ಕೊಡಿಸಲು ಶಿಫಾರಸ್ಸು ಮಾಡಿದ್ದಾರೆ.

ನೆರವಾಗುವ ಮನಸ್ಸು ನಿಮ್ಮದಾದರೆ ರತ್ನಾಕರ್‌ರಿಗೆ ಆರ್ಥಿಕವಾಗಿ ಒಂಚೂರು ಸಹಾಯಮಾಡಿ. ಮೈಸೂರಿನವರಾದರೆ, ಕಡೇ ಪಕ್ಷ ರಾಮಾನುಜ ರಸ್ತೆಯಲ್ಲಿರುವ ರತ್ನಾಕರ್‌ರನ್ನು ಭೇಟಿ ಮಾಡಿ ಅವರ ಕ್ಷೇಮವನ್ನೊಮ್ಮೆ ವಿಚಾರಿಸಿ ಬನ್ನಿ.

ತನ್ನಿಡೀ ಬದುಕನ್ನು ಕಲಾಸೇವೆಗೆಂದೇ ಮುಡುಪಾಗಿಟ್ಟ ಹಿರಿಯ ನಟನಿಗೆ ಜನ ಇಷ್ಟಾದರೂ ಸಹಾಯ ಮಾಡದಿದ್ದರೆ ಹೇಗೆ?

• ಅರುಣ್‌ಜಿ.
arunodayagc@gmail.com


ಮತ್ತೊಂದು ಸಿಡಿಯ ವಾಸನೆ!

ಚಿತ್ರರಂಗದಲ್ಲಿನ ಲೈಂಗಿಕ ಹಗರಣಗಳು ಈಗೀಗ ಮೇಲಿಂದ ಮೇಲೆ ಸ್ಫೋಟಗೊಳ್ಳುತ್ತಲೇ ಇವೆ. ಮೊನ್ನೆಮೊನ್ನೆಯಷ್ಟೇ ಅಮೂಲ್ಯ-ರತ್ನಜರ ಕಿಸ್ಸಿಂಗ್ ಫೋಟೋವೊಂದು ಭಾರೀ ಸುದ್ದಿ ಮಾಡಿತ್ತು, ಈಗ ಅಂಥದ್ದೇ 'ಹರಿಕಥೆ'ಯ ಮತ್ತೊಂದು ಸಿಡಿ ಹೊರಬರುವ ವಾಸನೆ ಢಟ್ಟವಾಗಿ ಗೋಚರಿಸುತ್ತಿದೆ.

ಇತ್ತೀಚೆಗೆ ಬಿಡುಗಡೆಯಾಗಿ ತೋಪು ಹೊಡೆದ ಸಿನಿಮಾವೊಂದರ ಚಿತ್ರೀಕರಣದ ಸಮಯದಲ್ಲಿ ನಡೆದ ಪ್ರಣಯ ಪ್ರಕರಣದ ಸಿಡಿಯಂತೆ ಇದು. ಒಂದೂ ಮುಕ್ಕಾಲು ನಿಮಿಷದ ಈ ಮೊಬೈಲ್ ವಿಡಿಯೋ ಕ್ಲಿಪಿಂಗ್‌ನಲ್ಲಿ ಮೂರು ವರ್ಷದ ಹಿಂದೆ ಕನ್ನಡ ಚಿತ್ರರಂಗದಲ್ಲಿ ಪ್ರತ್ಯಕ್ಷಳಾಗಿ ವಿಪರೀತ ಮಿಂಚಿದ ನಟಿ ಮತ್ತು ಇನ್ನೂ ನೆಲೆ ಕಂಡುಕೊಳ್ಳಲು ಹೆಣಗಾಡುತ್ತಿರುವ ಪಾಂಡುರಂಗಪುತ್ರನ ವಿನೋದಾವಳಿಯ ದೃಶ್ಯಗಳಿವೆಯಂತೆ!

ಈ ಸಿಡಿ ಈಗಾಗಲೇ ಸುದ್ದಿ ವಾಹಿನಿಯೊಂದರ ಕೈ ಸೇರಿದ್ದು ಶ್ರೀರಂಗನಾಥ ಸ್ವಾಮಿಗಳ ಕೃಪಾಕಟಾಕ್ಷದಿಂದ ಅದು ಅಲ್ಲೇ ಸ್ವಿಚ್‌ಆಫ್ ಆಗಿದೆ ಅನ್ನೋದು ಇನ್ನೊಂದು ಸುದ್ದಿ. ಆದರೂ ಈ ಸಿಡಿ ಇಷ್ಟರಲ್ಲೇ ಹೊರಬರುವುದು ದಿಟ!

ಭಟ್ಟರು ಕುಣಿದರು ನೋಡಿದಿರಾ?



'ಉಡಿಸುವೆ ಬೆಳಕಿನ ಸೀರೆಯ... ಚೂರು ಸಹಕರಿಸು' – ಇದು ಕವಿ ಜಯಂತ ಕಾಯ್ಕಿಣಿ 'ಪಂಚರಂಗಿ'ಗಾಗಿ ಬರೆದಿರುವ ಹಾಡಿನ ಸಾಲುಗಳು. ಯೋಗರಾಜ ಭಟ್ಟರ ಸಿನಿಮಾಗಳೆಂದರೆ, ಅಲ್ಲಿ ಕಾಯ್ಕಿಣಿ ಪದಪುಂಜಗಳ ಪುಲಕ, ಹರಿಕೃಷ್ಣ ಮನೋಮೂರ್ತಿ ಮ್ಯೂಸಿಕ್ಕಿನ ಮಾಂತ್ರಿಕತೆ ಇದ್ದೇ ಇರುತ್ತದೆ. ಈ ಬಾರಿ ಇವೆಲ್ಲದರ ಜೊತೆಗೆ ಸ್ವತಃ ಭಟ್ಟರೇ ನೃತ್ಯ ನಿರ್ದೇಶನವನ್ನೂ ಮಾಡಿದ್ದಾರೆ.

ಉದ್ದುದ್ದ ಭಾಷಣ ಹೊಡೆಯುವ, 'ಪರಪರಾ ಅಂತ' ತಲೆ ಕೆರೆದುಕೊಳ್ಳುವ ಸಂಭಾಷಣೆ ಬರೆಯುವ ಭಟ್ಟರು 'ನನಗೆ ಕುಣಿಯೋಕೂ ಬರುತ್ತೆ' ಅಂತಾ ತೋರಿಸಲು ಹೊರಟಿದ್ದಾರೆ!

"ಸದ್ಯ ನನ್ನ 'ಸೀರೆ ಉಡಿಸುವ' ಹಾಡಿಗೆ ಭಟ್ಟರು 'ಚೂರು ಸಹಕರಿಸಿ' ವಸ್ತ್ರಾಲಂಕಾರವನ್ನೂ ನಾನೇ ಮಾಡ್ತೀನಿ ಅನ್ನಲಿಲ್ಲವಲ್ಲಾ" ಅಂತಾ ಕಾಯ್ಕಿಣಿ ನಿಟ್ಟುಸಿರು ಬಿಟ್ಟರೆ, ನಟಿ ನಿಧಿ ಸುಬ್ಬಯ್ಯ ಗಾಬರಿಯಿಂದ ಕಣ್ಣರಳಿಸಿದಳಂತೆ!

'ಸಿಂಗಾರಿ' ಯಾರೆ ನೀ ಬುಲ್‌ಬುಲ್

ನೃತ್ಯ ನಿರ್ದೇಶಕ ಹರ್ಷ ಮತ್ತೊಂದು ಚಿತ್ರದ ನಿರ್ದೇಶನಕ್ಕೆ ಕೈಯಿಟ್ಟಿದ್ದಾರೆ. ಮೊದಲ ಚಿತ್ರ 'ಗೆಳೆಯ'ದಲ್ಲಿ ಹರ್ಷನ ನೃತ್ಯ ನಿರ್ದೇಶನವಷ್ಟೇ ಲೈಮ್‌ಲೈಟಿಗೆ ಬಂತು. ಎರಡನೇ ಚಿತ್ರ 'ಬಿರುಗಾಳಿ'ಯೂ ಬಾಕ್ಸಾಫೀಸ್‌ನಲ್ಲಿ ಸೋತಿತ್ತು.




ಹೀಗೆ ಈತ ನಿರ್ದೇಶಿಸಿರುವ ಎರಡು ಚಿತ್ರಗಳು ಸೋತರೂ ಈಗ ಹರ್ಷನಿಗೆ ದರ್ಶನ್ ನಟಿಸುತ್ತಿರುವ ಅದ್ಧೂರಿ ಚಿತ್ರದ ನಿರ್ದೇಶನದ ಜವಾಬ್ದಾರಿ ದೊರಕಿದೆ. ಈ ಚಿತ್ರದ ಹೆಸರು 'ಸಿಂಗಾರಿ'.

ಈ ಚಿತ್ರದ ಮೊದಲ ಷೆಡ್ಯೂಲ್ ಭಾರತದಲ್ಲೇ ಮುಗಿಯಲಿದೆ. ಎರಡನೇ ಷೆಡ್ಯೂಲ್‌ಗೆ 25 ದಿನಗಳ ಕಾಲ ಸ್ವಿಟ್ಜರ್‌ಲ್ಯಾಂಡ್ ಅಥವಾ ಇಟಲಿಯಲ್ಲಿ ಚಿತ್ರತಂಡ ಬೀಡು ಬಿಡಲಿದೆಯಂತೆ. ಆದರೂ 25 ದಿನಗಳ ಕಾಲ ಒಂದೇ ಒಂದು ಹಾಡನ್ನೂ ಹರ್ಷ ಅಲ್ಲಿ ಚಿತ್ರೀಕರಿಸುತ್ತಿಲ್ಲ, ಎಲ್ಲಾ ಹಾಡುಗಳನ್ನು ಭಾರತದಲ್ಲೇ ಚಿತ್ರೀಕರಿಸಲಿದ್ದು ಚಿತ್ರದ ಫೈಟಿಂಗ್, ಚೇಸಿಂಗ್ ದೃಶ್ಯಗಳನ್ನು ವಿದೇಶದಲ್ಲಿ ಅವರು ಚಿತ್ರೀಕರಿಸಿಕೊಳ್ಳಲಿದ್ದಾರಂತೆ.

ಹಾಡಿಗಾಗಿ ನೃತ್ಯ ನಿರ್ದೇಶಕರು ವಿದೇಶಕ್ಕೆ ಹಾರಿಹೋಗುವ ಈ ಸಂದರ್ಭದಲ್ಲಿ ನೃತ್ಯ ನಿರ್ದೇಶಕನೊಬ್ಬ ಹಾಡುಗಳನ್ನು ಇಲ್ಲೇ ಚಿತ್ರೀಕರಿಸಿ, ಚಿತ್ರದ ಉಳಿದ ಭಾಗಗಳನ್ನು ವಿದೇಶದಲ್ಲಿ ಚಿತ್ರೀಕರಿಸುತ್ತಿರುವುದು ವಿಶೇಷವೇ ಸರಿ.

...ರಡನೇ ಮದುವೆಯಲ್ಲಿ



...ಅನಂತ್‌ನಾಗ್-ಸುಹಾಸಿನಿ ಜೋಡಿಯ 'ಎರಡನೇ ಮದುವೆ' ಚಿತ್ರ ಮುಂದಿನ ವಾರ ... ಕಾಣಲಿದೆ. ಅನಂತ್-ಸುಹಾಸಿನಿ ಅವರ ಅಚ್ಚುಮೆಚ್ಚಿನ ನಿರ್ದೇಶಕ ದಿನೇಶ್‌ಬಾಬು ಈ ...ವನ್ನು ನಿರ್ದೇಶಿಸಿದ್ದಾರೆ. ಜೆನ್ನಿಫರ್ ಕೊತ್ವಾಲ್ ಮತ್ತು ಪ್ರೇಮ್ ಈ ಚಿತ್ರದ ...ವ ಜೋಡಿ. ಅಂತೂಇಂತೂ ಕೊನೆಗೂ ಪ್ರೇಮ್ ಚಿತ್ರವೊಂದು ...ಡುಗಡೆಯಾಗುತ್ತಿರುವುದು ಆತನ ಅಭಿಮಾನಿಗಳಿಗೆ (?) ಸಂತೋಷದ ...ಯ.


ಈ ಚಿತ್ರದ ನಿರ್ಮಾಪಕ ಸುರೇಶ್. ಚಿತ್ರರಂಗ ಮತ್ತು ಚಿತ್ರ ನಿರ್ಮಾಣ ಅವರ ಪಾಲಿಗೆ ಹೊಸ ಅನುಭವ. ಸಾಧಾರಣವಾಗಿ ಮೊದಲ ಪ್ರಯತ್ನದಲ್ಲಿ ಕೈಸುಟ್ಟುಕೊಳ್ಳುವ ನಿರ್ಮಾಪಕರೇ ಹೆಚ್ಚು. ಆದರೆ ಸುರೇಶ್ ಪಾಲಿಗೆ ಮೊದಲ ಚುಂಬನ ದಂತ ಭಗ್ನವಾಗಿಲ್ಲ. 'ಎರಡನೇ ಮದುವೆ' ಚಿತ್ರ ಬಿಡುಗಡೆಯಾಗುವ ಮೊದಲೇ ಸುರೇಶ್ ಇನ್ನೊಂದು ದೊಡ್ಡ ಚಿತ್ರ ಕೈಗೆತ್ತಿಕೊಂಡಿದ್ದಾರೆ. ಈ ಚಿತ್ರದ ಹೆಸರು 'ಸಿದ್ಲಿಂಗು'. ರಮ್ಯಾ ಮತ್ತು ಶ್ರೀನಗರ ಕಿಟ್ಟಿ ಈ ಚಿತ್ರದಲ್ಲಿ ಜೋಡಿ.

ಕಿರುತೆರೆಯಲ್ಲಿ ಅನೇಕ ಹಾಸ್ಯ ಧಾರಾವಾಹಿಗಳಿಗೆ ಸಂಭಾಷಣೆ ಬರೆದು, ನಿರ್ದೇಶನ ಮಾಡಿ ದೊಡ್ಡ ಹೆಸರನ್ನು ಮಾಡಿರುವ ವಿಜಯಪ್ರಸಾದ್ ಈ ಚಿತ್ರದ ಮುಖಾಂತರ ಬೆಳ್ಳಿ ತೆರೆಗೆ ನಿರ್ದೇಶಕರಾಗಿ ಕಾಲಿಡಲಿದ್ದಾರೆ. ಮೊದಲನೆ ಚಿತ್ರವಾದ 'ಎರಡನೇ ಮದುವೆ' ತೆರೆ ಕಾಣುವ ಮೊದಲೇ ಎರಡನೇ ಚಿತ್ರಕ್ಕೆ ಧೈರ್ಯವಾಗಿ ಕಾಲಿಟ್ಟಿರುವ ಸುರೇಶ್ ಮತ್ತು ಕಿರುತೆರೆಯಿಂದ ಬೆಳ್ಳಿತೆರೆಗೆ ಕಾಲಿಡುತ್ತಿರುವ ವಿಜಯಪ್ರಸಾದ್ ಇಬ್ಬರಿಗೂ ಗುಡ್‌ಲಕ್. •

Regd.No.KA/RNP/BGS/2036/2008-10 Posted at : GPO, Bangalore-01. R B P LANKESH, Kannada Weekly Price Rs. 12/- 14-07-2010 RNI No. KARKAN2005/14048

ಸ್ವಾರ್ಥಿ ಕುಳ್ಳ

ವಿಷ್ಣುವನ್ನೂ ಮಾರಾಟಕ್ಕಿಟ್ಟರಾ ದ್ವಾರಕೀಶ್?



ದ್ವಾರಕೀಶ್ ನಿರ್ಮಿಸುತ್ತಿರುವ ಹೊಸ ಚಿತ್ರಕ್ಕೆ 'ವಿಷ್ಣುವರ್ಧನ್' ಎಂದು ಹೆಸರಿಟ್ಟಿರುವುದು ಸ್ನೇಹ-ದ್ವೇಷಾಸೂಯೆ, ಜನನ-ನಿಧನ ಎಲ್ಲವನ್ನೂ ವ್ಯಾಪಾರೀಕರಣಗೊಳಿಸುವ ಅವರ ಬುದ್ಧಿಗೆ ಸಾಕ್ಷಿಯಾಗಿದೆ.

"ಇದು ನನ್ನ ಆಪ್ತಮಿತ್ರನಿಗೆ ನಾನು ನೀಡುವ ಶ್ರದ್ಧಾಂಜಲಿ. ಆದರೆ ಇದು ಅವರ ಜೀವನ ಕಥೆಯಲ್ಲ" ಎಂದು ದ್ವಾರಕೀಶ್ ಆರಂಭದಲ್ಲೇ ಸ್ಪಷ್ಟೀಕರಣ ನೀಡಿದ್ದಾರೆ. ಆದರೆ "ಯಾವುದೇ ಕಾರಣಕ್ಕೂ ವಿಷ್ಣುವರ್ಧನ್ ಹೆಸರನ್ನು ಬಳಸಿಕೊಳ್ಳುವುದು ನನಗೆ ಸುತರಾಂ ಇಷ್ಟವಿಲ್ಲ" ಎಂದು ಭಾರತಿ ವಿಷ್ಣುವರ್ಧನ್ ದೃಢವಾಗಿ ತಮ್ಮ ನಿರ್ಧಾರ ಪ್ರಕಟಿಸಿದ್ದಾರೆ. ಇಷ್ಟಾದರೂ ಈ ಕುಳ್ಳ "ನಾನು ನನ್ನ ಚಿತ್ರಕ್ಕೆ ವಿಷ್ಣುವರ್ಧನ್ ಎಂಬ ಹೆಸರನ್ನೇ ಇಡುತ್ತೇನೆ, ಬದಲಾಯಿಸುವುದಿಲ್ಲ" ಎಂದು ಹಟ್ಟುಹಿಡಿದು ಕುಳಿತುಕೊಂಡಿದ್ದಾರೆ. ವಿಷ್ಣು ನಿಧನ ಹೊಂದಿದಾಗ ಟಿವಿ ಕ್ಯಾಮೆರಾಗಳ ಮುಂದೆ ಈ ಕುಳ್ಳ ಗಳಗಳನೇ ಅತ್ತು ತನ್ನ ಶ್ರದ್ಧಾಂಜಲಿಯನ್ನು ವ್ಯಕ್ತಪಡಿಸಿಯಾಗಿದೆ. ಅದಾದನಂತರ ಒಂದೆರಡು ಸಂತಾಪಸೂಚಕ ಸಭೆಗಳಲ್ಲೂ ದ್ವಾರಕೀಶ್ ಅತ್ತಿದ್ದೂ ಆಗಿದೆ. ಆದರೂ ಈಗ ವಿಷ್ಣು ಹೆಸರಿಟ್ಟು ಸಿನಿಮಾಮಾಡಲು ದ್ವಾರಕೀಶ್ ಹೊರಟಿರುವುದು ಆತನ ವ್ಯಾಪಾತಿ ಬುದ್ಧಿಯನ್ನು ಪ್ರದರ್ಶಿಸುತ್ತಿದೆ.

ಇಷ್ಟಕ್ಕೂ ವಿಷ್ಣು ಮತ್ತು ದ್ವಾರಕೀಶ್ ಪರಮಾಪ್ತ ಗೆಳೆಯರಲ್ಲ. ಹಾಗೇ ನೋಡಿದರೆ 'ಆಪ್ತಮಿತ್ರ' ಚಿತ್ರ ಬಾಕ್ಸಾಫೀಸ್‌ನಲ್ಲಿ ಗೆಲ್ಲುತ್ತಿದ್ದಂತೆ ವಿಷ್ಣು ಮತ್ತು ದ್ವಾರಕೀಶ್ ಮಧ್ಯೆ ಮನಸ್ತಾಪ ಉಂಟಾಗಿತ್ತು. ಎಷ್ಟರಮಟ್ಟಿಗೆ ಅಂದರೆ 'ಆಪ್ತಮಿತ್ರ'ದ ಶತದಿನೋತ್ಸವ ಸಮಾರಂಭವನ್ನು ದ್ವಾರಕೀಶ್ ಆಚರಿಸಿದಾಗ ಅದಕ್ಕೆ ಚಿತ್ರದ ನಾಯಕ ವಿಷ್ಣುಗೆ ಆಹ್ವಾನವನ್ನು ನೀಡಲಿಲ್ಲ. ಆಗ ವಿಷ್ಣುವರ್ಧನ್ ಮುತುವರ್ಜಿವಹಿಸಿ ಮತ್ತೊಂದು ಶತದಿನೋತ್ಸವ ಸಮಾರಂಭವನ್ನು ಆಚರಿಸಿದರು. ಅದಕ್ಕೆ ದ್ವಾರಕೀಶ್‌ಗೆ ಆಹ್ವಾನವಿರಲಿಲ್ಲ.

ಈ ಮಧ್ಯೆ 'ಆಪ್ತರಕ್ಷಕ' ಚಿತ್ರ ಆರಂಭವಾದಾಗ "ಇದು 'ಆಪ್ತಮಿತ್ರ'ದ ಮುಂದುವರೆದ ಭಾಗ. ಅದಕ್ಕೆ ಕೋರ್ಟ್‌ನಿಂದ ತಡೆಯಾಜ್ಞೆ ತರುತ್ತೇನೆ" ಎಂದು ಈ ಕುಳ್ಳ ತನ್ನ ಪರಮಾಪ್ತರಲ್ಲಿ ಅಬ್ಬರಿಸಿದ್ದರು. "ಈ ಚಿತ್ರವನ್ನು ಯಾವುದೇ ಕಾರಣಕ್ಕೆ ಬೇರೆಯವರು ಮಾಡಲು ಸಾಧ್ಯವಿಲ್ಲ. ಒಂದು ವೇಳೆ ಮಾಡುವುದಾದರೆ ನಾನೇ ಮಾಡಬೇಕು" ಎಂದು ಹೇಳುವ ಮೂಲಕ ವಿಷ್ಣು ಕಾಲ್‌ಶೀಟ್‌ಗಾಗಿ ದ್ವಾರಕೀಶ್ ಬೆದರಿಕೆಯ ತಂತ್ರ ಬಳಸಿದ್ದರು. ವಿಷ್ಣು ಇದಕ್ಕೆ ಸೊಪ್ಪು ಹಾಕದೆ ಚಿತ್ರ ಆರಂಭಿಸಿಯೇ ಬಿಟ್ಟರು. ಚಿತ್ರೀಕರಣದ ಸಮಯದಲ್ಲಿ ವಿಷ್ಣು ಕುದುರೆಯಿಂದ ಬಿದ್ದು ಕಾಲು ಮುರಿದುಕೊಂಡರೋ ಆಗ "ವಿಷ್ಣುಗೆ ಕುದುರೆ ಸವಾರಿ ಬರಲ್ಲ" ಎಂದು ಇದೇ ದ್ವಾರಕೀಶ್ ಗಾಂಧಿನಗರದ ಸುತ್ತ ತಮಾಷೆ ಮಾಡುತ್ತಾ ಸುತ್ತಾಡಿದ್ದರು. 'ಆಪ್ತರಕ್ಷಕ' ಬಿಡುಗಡೆಯಾದಾಗ ವಿಷ್ಣುಗೆ ಶ್ರದ್ಧಾಂಜಲಿ ರೂಪದಲ್ಲಿ ಈ ಚಿತ್ರವನ್ನು ಪ್ರೇಕ್ಷಕ ಗೆಲ್ಲಿಸಿದರೆ ಸಾಕು ಎಂದು ಇಡೀ ಗಾಂಧಿನಗರ ಆಸೆಪಟ್ಟರೆ, ಕುಳ್ಳನ ರಾಗವೇ ಬೇರೆ ಇತ್ತು. "ಏನೇ ಆದರೂ 'ಆಪ್ತಮಿತ್ರ'ದ ಲೆವೆಲ್‌ಗೆ ಈ ಚಿತ್ರ ಬರುವುದಿಲ್ಲ" ಎಂದು ಕುಳ್ಳ 'ಭವಿಷ್ಯ' ನುಡಿದಿದ್ದರು.

ಹಿಂದೊಂದು ಕಾಲದಲ್ಲಿ ದ್ವಾರಕೀಶ್ ಮತ್ತು ವಿಷ್ಣುವರ್ಧನ್ ಆಪ್ತರಾಗಿದ್ದರು ನಿಜ. ಆಗ ಡಾ.ರಾಜ್‌ಕುಮಾರ್ ಚಿತ್ರಗಳ ವಿರುದ್ಧ ಈ ಜೋಡಿ ಪರೋಕ್ಷವಾಗಿ ಸಮರ ಸಾರಿತ್ತು. ಆದರೆ ಆನಂತರ ಇವರ ಸ್ನೇಹ ಕುಸಿದುಬಿದ್ದು ಈ 'ಪರಮಾಪ್ತರು' ಆಜನ್ಮ ಶತ್ರುಗಳಂತೆ ಒಬ್ಬರನ್ನೊಬ್ಬರು ದ್ವೇಷಿಸಲಾರಂಭಿಸಿದ್ದರು. ಆ ಸಂದರ್ಭದಲ್ಲೇ ವಿಷ್ಣು ಮೇಲಿನ ಸಿಟ್ಟಿನಿಂದ ದ್ವಾರಕೀಶ್ 'ದ್ರೋಹಿ' ಎಂಬ ಹೊಸ ಚಿತ್ರದ ಜಾಹೀರಾತನ್ನು ಪತ್ರಿಕೆಗಳಲ್ಲಿ ನೀಡಿದ್ದರು. ಆ ಜಾಹೀರಾತಿನಲ್ಲಿ ವಿಷ್ಣು ಚಿತ್ರವನ್ನು ಹೋಲುವ ರೀತಿಯಲ್ಲಿ ಕ್ಯಾರಿಕೇಚರ್ ಬಿಡಿಸಲಾಗಿತ್ತು. ಅಷ್ಟೇ ಅಲ್ಲ, ಆ ಚಿತ್ರದ ಕತೆ ವಿಷ್ಣು ಜೀವನದ ಸುತ್ತಮುತ್ತ ಹೆಣೆದದ್ದು ಎಂಬ ಅರ್ಥ ಬರುವ ರೀತಿಯಲ್ಲಿ ವಾಕ್ಯಗಳನ್ನು ಜಾಹೀರಾತಿನಲ್ಲಿ ಬರೆಯಲಾಗಿತ್ತು. ಇಬ್ಬರ ನಡುವಿನ ವೈಯಕ್ತಿಕ ದ್ವೇಷ ಮತ್ತು ಅಸೂಯೆ ಸಿನಿಮಾ ಪರದೆಯ ಮೇಲೆ ಮೂಡಿಬರುವಷ್ಟು ಮಟ್ಟಿಗೆ ಬೆಳೆದದ್ದನ್ನು ನೋಡಿ ಇಡೀ ಗಾಂಧಿನಗರ ದಂಗಾಗಿಹೋಗಿತ್ತು. ಕೊನೆಗೆ ಅಭಿಮಾನಿಗಳ ಬೆದರಿಕೆಗೆ ಹೆದರಿ ಮತ್ತು ಉದ್ಯಮದವರ ಮಾತಿಗೆ ಬೆಲೆಕೊಟ್ಟ ದ್ವಾರಕೀಶ್ ಆ ಚಿತ್ರವನ್ನು ಕೈ ಬಿಟ್ಟಿದ್ದರು.

'ದ್ರೋಹಿ' ಚಿತ್ರ ಸೆಟ್ಟೇರುವ ಮೊದಲೇ ಟುಸ್ಸಾಗಿದ್ದರಿಂದ ಅವಮಾನಗೊಂಡ ದ್ವಾರಕೀಶ್ ಇನ್ನೊಬ್ಬ ವಿಷ್ಣುವರ್ಧನ್‌ನನ್ನು ಹುಟ್ಟುಹಾಕುತ್ತೇನೆಂದು ಘೋಷಿಸಿದರು. ಅದರ ಫಲವಾಗಿ ಹೊಸ ನಟನೊಬ್ಬನನ್ನು ಆಯ್ಕೆ ಮಾಡಿ ಆತನಿಗೆ ರಾಜವರ್ಧನ್ ಎಂದು ನಾಮಕರಣ ಮಾಡಿದರು. ಜೊತೆಗೆ ಆತನಿಗೆ ವಿಷ್ಣು ತರಹದ ಹೇರ್‌ಸ್ಟೈಲ್, ಬಟ್ಟೆ ಹಾಕಿಸಿದ್ದರು. ಆದರೆ ಆ ಚಿತ್ರ ಫ್ಲಾಪ್ ಆಗಿದ್ದರಿಂದ ಕುಳ್ಳನ ಆರ್ಭಟವೂ ಕೊಂಚ ಕಡಿಮೆಯಾಗಿತ್ತು.

ಶಶಿಕುಮಾರ್ ಎಂಬ ನಟ ಜನಪ್ರಿಯತೆಯ ತುತ್ತತುದಿಯಲ್ಲಿದ್ದಾಗ ದ್ವಾರಕೀಶ್ ಮನದಾಳದಲ್ಲಿದ್ದ 'ವಿಷ್ಣು ದ್ವೇಷ' ಮತ್ತೊಮ್ಮೆ ಕುದಿಯಲಾರಂಭಿಸಿತು. ಶಶಿಕುಮಾರ್‌ರನ್ನು ನಾಯಕನನ್ನಾಗಿ ಮಾಡಿ ಆತನೊಂದಿಗೆ ತಾನೂ ನಟಿಸುತ್ತಾ ಆ ಚಿತ್ರಕ್ಕೆ 'ಹೊಸ ಕಳ್ಳ, ಹಳೇ ಕುಳ್ಳ' ಎಂದು ಹೆಸರಿಟ್ಟರು. ಇದು ವಿಷ್ಣು-ದ್ವಾರಕೀಶ್ ನಟಿಸಿದ 'ಕಳ್ಳ ಕುಳ್ಳ' ಚಿತ್ರದ ಮತ್ತೊಂದು ರೂಪವೆಂದೇ ಭಾರೀ ಪ್ರಚಾರ ಪಡೆಯಿತು. ಆದರೂ ಈ ಚಿತ್ರ ಕೂಡಾ ಬಾಕ್ಸಾಫೀಸ್‌ನಲ್ಲಿ ಹೇಳಹೆಸರಿಲ್ಲದಂತೆ ಮುಗ್ಗರಿಸಿತು.

ಹೀಗೆ ವಿಷ್ಣು ವಿರುದ್ಧ ತನ್ನ ಸೇಡು ಮತ್ತು ದ್ವೇಷಗಳನ್ನು ಹಲವಾರು ಸಂದರ್ಭಗಳಲ್ಲಿ ವ್ಯಕ್ತಪಡಿಸಿದ ಈ ಕುಳ್ಳ ಕೊನೆಗೆ ಅವನ್ನೆಲ್ಲ ಬದಿಗಿಟ್ಟು ಮೂರಡಿ ಎತ್ತರದ ತನ್ನ ಮಕ್ಕಳನ್ನು ನಾಯಕರನ್ನಾಗಿ ಮಾಡಲು ಹೊರಟರು. ಅಲ್ಲೂ ಕೈಸುಟ್ಟು ಕೊಂಡಾಗ ದ್ವಾರಕೀಶ್ ಮೆತ್ತಗಾದರು. ಈ ಮಧ್ಯೆ ಉದ್ಯಮದ ಅನೇಕ ಸ್ನೇಹಿತರ ಪ್ರಯತ್ನದ ಫಲವಾಗಿ ವಿಷ್ಣು ನಟಿಸಿದ 'ರಾಯರು ಬಂದರು ಮಾವನ ಮನೆಗೆ' ಎಂಬ ಚಿತ್ರ ನಿರ್ದೇಶಿಸಲು ಕುಳ್ಳನಿಗೆ ಅವಕಾಶ ಸಿಕ್ಕಿತ್ತು. ಹೀಗೆ ಸುಮಾರು ಹತ್ತು-ಹದಿನೈದು ವರ್ಷಗಳ ಕಾಲ ಇವರಿಬ್ಬರ ನಡುವಿನ ದ್ವೇಷ ಮತ್ತು ಮನಸ್ತಾಪದ ಆಟ ತೆರೆಮರೆಯಲ್ಲಿ ನಡೆಯುತ್ತಲೇ ಇತ್ತು.

ಇದೆಲ್ಲ ಆದನಂತರ ಏಳೆಂಟು ಚಿತ್ರಗಳ ನಿರ್ಮಿಸಿ, ಹನ್ನೆರಡು ಕೋಟಿಗಳಿಗೂ ಅಧಿಕ ಸಾಲವನ್ನು ಮಾಡಿಕೊಂಡ ದ್ವಾರಕೀಶ್ ಗಾಂಧಿನಗರದಿಂದ ಮಾತ್ರವಲ್ಲ, ಕರ್ನಾಟಕದಿಂದಲೇ ಪಲಾಯನ ಮಾಡುವ ಸ್ಥಿತಿ ತಲುಪಿದರು. ಆಗ ಅನೇಕ ಹಿತೈಷಿಗಳ ಮಧ್ಯಸ್ಥಿಕೆಯಿಂದಾಗಿ ಕೊನೆಗೂ ವಿಷ್ಣು 'ಆಪ್ತಮಿತ್ರ' ಎಂಬ ಚಿತ್ರಕ್ಕೆ ದ್ವಾರಕಿಗೆ ಕಾಲ್‌ಶೀಟ್ ನೀಡಿದರು. ವಿಶೇಷವೆಂದರೆ ಆ ಚಿತ್ರದ ಚಿತ್ರೀಕರಣದ ಸಮಯದಲ್ಲೂ ಅವರಿಬ್ಬರೂ ಒಬ್ಬರಿಗೊಬ್ಬರು ಮುಖಕೊಟ್ಟು ಮಾತನಾಡುತ್ತಿರಲಿಲ್ಲ. ಈ ಚಿತ್ರ ಹಿಟ್ ಆದನಂತರ ಮತ್ತೆ ಇವರಿಬ್ಬರೂ ಮೌನಕ್ಕೆ ಶರಣಾಗಿದ್ದು ಎಲ್ಲರಿಗೂ ಗೊತ್ತಿದೆ.

ಈ ಹಿನ್ನೆಲೆಯಲ್ಲಿ ಇವತ್ತು ವಿಷ್ಣುವರ್ಧನ್‌ಗೆ ಶ್ರದ್ಧಾಂಜಲಿ ನೀಡಲೆಂದೇ ಚಿತ್ರ ನಿರ್ಮಿಸುತ್ತಿದ್ದೇನೆಂದು ಈ ಕುಳ್ಳ ಹೇಳುತ್ತಿರುವುದನ್ನು ಯಾರೂ ನಂಬುತ್ತಿಲ್ಲ. ಇಷ್ಟಕ್ಕೂ "ನನ್ನ ಗಂಡ ಬದುಕಿದ್ದಾಗ ಹೆಜ್ಜೆಹೆಜ್ಜೆಗೂ ಅವರನ್ನು ಅವಮಾನ ಮಾಡಿದ, ಅವರ ಬಗ್ಗೆ ವ್ಯವಸ್ಥಿತವಾಗಿ ಅಪಪ್ರಚಾರ ಮಾಡಿದ ಈ ಜನರಿಗೆ ನಾನ್ಯಾಕೆ ಚಿತ್ರ ಮಾಡಲು ಅನುಮತಿ ನೀಡಬೇಕು?" ಎಂದು ಭಾರತಿ ವಿಷ್ಣುವರ್ಧನ್ ಆಕ್ಷೇಪ ವ್ಯಕ್ತಪಡಿಸಿರುವುದು ಒಂದು ರೀತಿಯಲ್ಲಿ ಸರಿ. ಒಬ್ಬ ಮನುಷ್ಯ ತನ್ನಿಂದ ದೂರಹೋದಾಗ ಅವರಿಗೆ 'ದ್ರೋಹಿ' ಎಂದು ಪಟ್ಟಕಟ್ಟಿದ ದ್ವಾರಕೀಶ್ ಈಗ ಅದೇ ಮನುಷ್ಯನಿಗೆ ಶ್ರದ್ಧಾಂಜಲಿ ಅರ್ಪಿಸಲು ಹೊರಟಿರುವುದು ಅವರ ವಕ್ರ ಬುದ್ಧಿಗೆ ಸಾಕ್ಷಿಯಾಗಿದೆ.

ಚೇಂಬರ್ ಮತ್ತು ಭಾರತಿ ಮೇಡಂ ತನ್ನ ಚಿತ್ರಕ್ಕೆ ವಿಷ್ಣುವರ್ಧನ್ ಹೆಸರಿಡಲು ಅನುಮತಿ ನೀಡದಿದ್ದರೆ ತಾನು 'ರಾಜಾ ವಿಷ್ಣುವರ್ಧನ್' ಅಥವಾ 'ವೀರ ವಿಷ್ಣುವರ್ಧನ್' ಎಂಬ ಹೆಸರಿಡುತ್ತೇನೆಂದು ಹೇಳುವ ಮೂಲಕ ದ್ವಾರಕೀಶ್ ತನ್ನ ಮೊಂಡುತನವನ್ನು ಪ್ರದರ್ಶಿಸುತ್ತಿದ್ದಾರಷ್ಟೆ.

● ಶೆಣೈ



ಸುದೀಪ್ ನಾಯಕನಾಗಿ ನಟಿಸುತ್ತಿರುವ ಚಿತ್ರವೊಂ ಸೆಟ್ಟೇರುತ್ತಿದೆ. ಆ ಚಿತ್ರದ ಹೆಸರು 'ವಿಷ್ಣುವರ್ಧನ್'! ಅದ ನಿರ್ಮಾಪಕ ದ್ವಾರಕೀಶ್!!

'ಆಪ್ತಮಿತ್ರ' ಚಿತ್ರದ ನಂತರ ಚಿತ್ರ ನಿರ್ಮಾಣದ ಸಹವಾಸ ಬೇಡ ಎಂದು ಚಿತ್ರರಂಗದಿಂದ ದೂರವಿದ್ದು, ಬರೀ ಸ ಸಮಾರಂಭಗಳಲ್ಲಿ ಮೈಕು ಹಿಡಿದು ದರ್‍ರೂ ಬರ್‍ರೂ ಅಂ ಗ್ಯಾಸು ಬಿಡುತ್ತಿದ್ದ ದ್ವಾರಕೀಶ್‌ಗೆ ದಿಢೀರನೆ ಸಿನಿಮಾ ನಿರ್ಮಿಸು ಬಯಕೆ ಹುಟ್ಟಿಬಿಟ್ಟಿತೇ? ಹಾಗೆ ಚಿತ್ರವೊಂದನ್ನು ತಯಾರಿಸು ಬಯಕೆ ದ್ವಾರಕೀಶ್ ಮನಸ್ಸಿನಲ್ಲಿ ಉದ್ಭವಿಸಿದ್ದರೆ ಪರವಾಗಿರಲಿ ಆದರೆ ತಾನು ನಿರ್ಮಿಸುತ್ತಿರುವ ಸಿನಿಮಾಕ್ಕೆ ದ್ವಾರ್ಕೀ 'ವಿಷ್ಣುವರ್ಧನ್' ಅಂತಲೇ ಯಾಕೆ ಹೆಸರಿಡಬೇಕಿತ್ತು? ಅಸಲ ದ್ವಾರ್ಕೀಶ್ ನಿರ್ಮಿಸುತ್ತಿರುವ ಚಿತ್ರಕ್ಕೂ ಸಾಹಸಸಿಂಹ ವಿಷ್ಣು ವರ್ಧನ್ ಅವರಿಗೂ ಲವಲೇಶದ ಸಂಬಂಧವೂ ಇ ಇಂಥಾದ್ದರಲ್ಲಿ ವಿಷ್ಣು ಹೆಸರನ್ನು ತನ್ನ ಸಿನಿಮಾಕ್ಕೆ ಟೈಟಲನ್ನಾಗಿ ರುವ ದ್ವಾರ್ಕೀಶ್‌ರ ಉದ್ದೇಶವಾದರೂ ಏನು?

ಸುದೀಪ್ ನಟಿಸುತ್ತಿರುವ ಈ ಚಿತ್ರ ಪಕ್ಕಾ ಕಮರ್ಷಿಯಲ್ ಕಥಾಹಂದರವನ್ನು ಹೊಂದಿದೆ. ಈ ಕಥೆಯಲ್ಲಿ ವಿಷ್ಣು ಅವರ ಅಭಿಮಾನಿಯೊಬ್ಬರು ತಮ್ಮ ಮಗನಿಗೆ 'ವಿಷ್ಣುವರ್ಧನ್' ಎಂದು ಹೆಸರಿಟ್ಟಿರುತ್ತಾರಂತೆ. ಈ ಒಂದು ಅಂಶವನ್ನು ಬಿಟ್ಟರೆ ವಿಷ್ಣುವಿಗೂ ಈ ಚಿತ್ರಕ್ಕೂ ಸಂಬಂಧವಿಲ್ಲ. ವಿಷ್ಣು ಅವರ ಖಾಸಗಿ ಬದುಕಿನ ಯಾವ ಘಟನೆಗಳೂ ಈ ಸಿನಿಮಾದಲ್ಲಿಲ್ಲ.



ಇಷ್ಟು ಸಣ್ಣ ವಿಷಯವನ್ನಾಧರಿಸಿ ತಮ್ಮ ಚಿತ್ರಕ್ಕೆ ವಿಷ್ಣುವರ್ಧನ್ ಅವರ ಹೆಸರನ್ನು ಬಳಸಿಕೊಳ್ಳುವ ಅಗತ್ಯವಿತ್ತೇ? ಅದೂ ಒಂದು ಕಾಲದಲ್ಲಿ ಪ್ರಾಣ ಸ್ನೇಹಿತನಂತಿದ್ದ ವಿಷ್ಣುವನ್ನು ಇದೇ ದ್ವಾರ್ಕೀಶ್ ಕಂಡ ಕಂಡ ಕಡೆ ಜರಿಯುತ್ತಿದ್ದರು, ಹಾದಿಬೀದಿಯಲ್ಲಿ ನಿಂತು ವಿಷ್ಣು ವಿರುದ್ಧ ಅಪಪ್ರಚಾರ ಮಾಡಿದ್ದರು ಇಂಥ ದ್ವಾರ್ಕೀಶ್ ಈಗ "ವಿಷ್ಣು ಮೇಲಿನ ಮಮತೆ ಮತ್ತು ಆತನಿ ಗೌರವ ನೀಡುವ ಉದ್ದೇಶದಿಂದ ಈ ಹೆಸರನ್ನು ಬಳಸಿಕೊಂಡಿದ್ದೇನೆ" ಎಂದು ಪುಂಗು ಊದುತ್ತಿದ್ದಾರೆ.

ಆದರೆ ಅಸಲಿಯತ್ತೇ ಬೇರೆಯಿದೆ. ಈ ವರ್ಷ ಬಿಡುಗಡೆಗೊಂಡ ಕೇವಲ ವಿಷ್ಣು ಮೇಲಿನ ಸಿಂಪತಿಯಿಂದಲೇ ಓಡಿದ ಚಿತ್ರ 'ಆಪ್ತರಕ್ಷಕ' ನೂರು ದಿನ ದಾಟಿದರೂ 'ರಕ್ಷಕ' ಇನ್ನೂ ಒಳ್ಳೇ ಕಲೆಕ್ಷನ್‌ನಲ್ಲೇ ಮುಂದು ವರಿದಿದೆ. ವಿಷ್ಣುವರ್ಧನ್ ನಟಿಸಿದ ಇನ್ಯಾವ ಚಿತ್ರವೂ ಬಿಡುಗಡೆಗೆ ಉಳಿದಿಲ್ಲ ಹೀಗಿರುವಾಗ ಇದೇ ಸಮಯದಲ್ಲಿ 'ವಿಷ್ಣು' ಹೆಸರನ್ನು ವ್ಯಾಪಾರಕ್ಕಿಟ್ಟರೆ ಭರ್ತಿ ಜೇಬು ತುಂಬಿಸಿಕೊಳ್ಳಬಹುದು ಎಂಬ ಕೆಟ್ಟ ಬಯಕೆ ಕುಳ್ಳ ದ್ವಾರಕೀಶರದ್ದು.

ವಿಷ್ಣು ಹೆಸರನ್ನು ತನ್ನ ಚಿತ್ರಕ್ಕೆ ಇಟ್ಟ ಮಾತ್ರಕ್ಕೆ ಕನ್ನಡದ ಕಲಾಭಿಮಾನಿಗಳು ಸೇರಿದಂತೆ ವಿಷ್ಣು ಕುಟುಂಬದವರು ಸಂಭ್ರಮಿಸಿಬಿಡುತ್ತಾರೆ ಎಂಬ ಲೆಕ್ಕಾಚಾರ ಕುಳ್ಳನದ್ದು. ಆದರೆ ವಿಷ್ಣು ಮನೆಯಲ್ಲೇ ಇದಕ್ಕೆ ಮೊದಲ ವಿರೋಧ ವ್ಯಕ್ತವಾಗಿದೆ. "ನೀವು ನಮ್ಮ ಯಜಮಾನರ ಹೆಸರಿನಲ್ಲಿ ಸಿನಿಮಾ ಮಾಡುವುದಿದ್ದರೆ ಮೊದಲು ಆ ಚಿತ್ರದ ಕಥೆಯನ್ನು ನಮಗೆ ಹೇಳಬೇಕು" ಎಂದು ಭಾರತಿ ಮೇಡಂ ಫತ್ವಾ ಹೊರಡಿಸಿದ್ದಾರೆ. ಈಗಾಗಲೇ ವಿಷ್ಣು ಪುತ್ರಿ ಕೀರ್ತಿವರ್ಧನ್ ಕೂಡ ದ್ವಾರಕೀಶ್ ಬಳಿ ಒಂದು ಸುತ್ತಿನ ಕತೆಯನ್ನು ಕೇಳಿದ್ದೂ ಆಗಿದೆ. ವಿಷ್ಣು ಅವರ ಪರ್ಸನಲ್ ವಿವರಗಳು ಆ ಚಿತ್ರದಲ್ಲಿ ಇಲ್ಲದಿದ್ದರೂ ಸರಿ. ಯಾವ ಕಾರಣಕ್ಕೂ ವಿಷ್ಣು ಹೆಸರನ್ನು ಸಿನಿಮಾಕ್ಕೆ ಇಡಲು ಬಿಡುವುದಿಲ್ಲ ಎಂದು ಭಾರತಿ ಸ್ಪಷ್ಟವಾಗಿ ಹೇಳಿದ್ದಾರೆ. 'ನಮ್ಮ ಯಜಮಾನ್ರು ಇದ್ದಾಗ ನೀವು ಕೊಟ್ಟ ಕಾಟವೇ ಸಾಕು. ಇನ್ನಾದರೂ ಬಿಟ್ಟುಬಿಡಿ' ಎಂದು ಕೈಮುಗಿದು ಗೋಗರೆದಿದ್ದಾರೆ. 'ವಿಷ್ಣು ಹೆಸರನ್ನು ಲಾಭಕ್ಕೆ ಬಳಸಿಕೊಂಡರೆ ಅಂಥವರಿಗೆ ದೇವರು ಒಳ್ಳೇದು ಮಾಡಲ್ಲ' ಎಂದು ಭಾರತಿ ಶಾಪವಿಕ್ಕಿದ್ದಾರೆ. ವಾಣಿಜ್ಯಮಂಡಳಿ ಕೂಡಾ ಟೈಟಲ್‌ಗೆ ಅನುಮತಿಯನ್ನು ನಿರಾಕರಿಸಿದೆ.

ಈ ಕುಳ್ಳ 'ವಿಷ್ಣುವರ್ಧನ್' ಹೆಸರನ್ನು ಹರಾಜಿಗಿಟ್ಟಿದ್ದಾರೆ ಎಂಬುದು ಈಗ ಎಲ್ಲರಿಗೂ ಗೊತ್ತಾಗಿದೆ. ಆದರೂ ಅದ್ಯಾವುದಕ್ಕೂ ಈ ಶಾರ್ಟ್‌ಫೆಲೋ ಕ್ಯಾರೇ ಅನ್ನದೆ ಹಠಹಿಡಿದು ಕುಳಿತಿದ್ದಾರೆ.

● ಅರುಣ್

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajaji...